ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 12 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 266 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಶೋರೂಂಗಳಾಗಿವೆ ಮೈಸೂರು ರಸ್ತೆಗಳು!

● ಪಾಲಿಕೆ ನಿರ್ಲಕ್ಷ್ಯದಿಂದಾಗಿ ಫುಟ್‌ಪಾತ್‌ಗಳಲ್ಲಿ ಪೀಠೋಪಕರಣ, ರೆಡಿಮೇಡ್ ಬಟ್ಟೆ, ಎಲೆಕ್ಟ್ರಾನಿಕ್–ಎಲೆಕ್ಟ್ರಿಕ್ ಇನ್ನಿತರೆ ಪದಾರ್ಥಗಳ ಮಾರಾಟ ● ಪಾದಚಾರಿಗಳು, ವಾಹನ ಸಂಚಾರಕ್ಕೂ ಅಡ್ಡಿ ● ಹೀಗೆ ಕಂಡ ಕಂಡಲ್ಲಿ ರಾಜಾರೋಷವಾಗಿ ವ್ಯಾಪಾರ–ವಹಿವಾಟು ನಡೆಸುವುದೇ ಆದರೆ ನಾವೇಕೆ ನಾನಾ ತೆರಿಗೆ ಪಾವತಿಸಿ ಉದ್ಯಮ ನಡೆಸಬೇಕು!; ವ್ಯಾಪಾರಿಗಳು, ಉದ್ಯಮಿಗಳ ಆಕ್ರೋಶ






ಮೈಸೂರು, ಜ. 11(ಆರ್‌ಕೆ)– ಮೈಸೂರು ನಗರದಾದ್ಯಂತ ಪ್ರಮುಖ ರಸ್ತೆಗಳಲ್ಲಿನ ವಿಶಾಲವಾದ ಫುಟ್‌ಪಾತ್‌ಗಳು ಹಾಗೂ ರಸ್ತೆಬದಿಯ ಖಾಲಿ ಜಾಗಗಳು, ಪೀಠೋಪಕರಣಗಳು, ಬ್ರಾಂಡೆಡ್ ರೆಡಿಮೇಡ್ ಬಟ್ಟೆ, ಎಲೆಕ್ಟ್ರಾನಿಕ್–ಎಲೆಕ್ಟ್ರಿಕ್ ಉಪಕರಣಗಳು ಹಾಗೂ ಇನ್ನಿತರ ಗೃಹೋಪಯೋಗಿ ವಸ್ತುಗಳ ಶೋರೂಂಗಳಾಗಿ ಮಾರ್ಪಟ್ಟಿವೆ. ಇಲ್ಲೆಲ್ಲಾ ನಿತ್ಯವೂ ಭರ್ಜರಿ ವ್ಯಾಪಾರವೂ ನಡೆಯುತ್ತಿದೆ. ಕುರ್ಚಿ, ಮೇಜು, ಕಂಪ್ಯೂಟರ್ ಟೇಬಲ್, ಸ್ಟೂಲ್, ಅಲ್ಮೇರಾ, ಸೋಫಾ ಸೆಟ್, ಪ್ಲಾಸ್ಟಿಕ್ ಚೇರ್, ಟೀಪಾಯಿ, ಡೈನಿಂಗ್ ಟೇಬಲ್ ಸೇರಿದಂತೆ ಗೃಹ ಬಳಕೆಯ ಬಹುತೇಕ ವಸ್ತುಗಳ ವ್ಯಾಪಾರ ಈಗ ಮೈಸೂರಿನ ಪ್ರಮುಖ ರಸ್ತೆಗಳ ಫುಟ್‌ಪಾತ್‌ಗಳ ಮೇಲೆಯೇ ನಡೆಯುತ್ತಿದೆ.

ಹೆಲ್ಮೆಟ್‌ಗಳು, ಸ್ವೆಟರ್, ಶರ್ಟ್, ಪ್ಯಾಂಟ್, ಜರ್ಕಿನ್, ಕೊಡೆ, ಮ್ಯಾಟ್‌ಗಳು, ಕಿಟಕಿ–ಬಾಗಿಲು ಕರ್ಟನ್‌ಗಳು, ಮಕ್ಕಳ ಆಟಿಕೆ ಸಾಮಾನುಗಳು, ಹಣ್ಣು–ಹಂಪಲು, ತರಕಾರಿಗಳ ಮಾರಾಟಕ್ಕೆ ಸೀಮಿತವಾಗಿದ್ದ ಫುಟ್‌ಪಾತ್‌ಗಳು ಇದೀಗ ಫರ್ನಿಚರ್, ಅಲ್ಮೇರಾಗಳ ಶೋರೂಂಗಳಾಗಿ ಪರಿವರ್ತನೆಯಾಗುತ್ತಿವೆ. ಮೈಸೂರಿನ ಬೋಗಾದಿ ರಸ್ತೆಯಲ್ಲಿ ಕುಕ್ಕರಹಳ್ಳಿ ಕೆರೆ ಬಳಿ, ಸರಸ್ವತಿಪುರಂನ ಅಗ್ನಿಶಾಮಕ ಠಾಣೆ ಸಮೀಪ, ಹುಣಸೂರು ರಸ್ತೆಯ ಕಲಾಮಂದಿರ ಕ್ವಾರ್ಟರ್ಸ್ ಬಳಿ, ಕೆಆರ್‌ಎಸ್ ರಸ್ತೆಯ ಆಕಾಶವಾಣಿ ಎದುರಿನ ಚೆಲುವಾಂಬ ಪಾರ್ಕ್ ಬಳಿ, ಇಎಸ್‌ಐ ಆಸ್ಪತ್ರೆ ಸಮೀಪ, ವಿಶ್ವಮಾನವ ಜೋಡಿ ರಸ್ತೆಯ ಶ್ರೀ ರಾಮಕೃಷ್ಣ ಪರಮಹಂಸ ಸರ್ಕಲ್ ಸಮೀಪ, ಮಾನಂದವಾಡಿ ರಸ್ತೆಯ ಮೈಸೂರಿನ ಸ್ಯಾಂಡಲ್‌ವುಡ್ ಕಾರ್ಖಾನೆ ಮಾರಾಟ ಮಳಿಗೆ ಎದುರು, ಉದಯಗಿರಿಯ ಸಿಗ್ನಲ್ ಲೈಟ್ ಸರ್ಕಲ್ ಸಮೀಪ, ಹೆಬ್ಬಾಳಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಎದುರು ಕೆಆರ್‌ಎಸ್ ರಸ್ತೆ, ರಿಂಗ್ ರಸ್ತೆ ಹಲವೆಡೆ ಹೀಗೆ ಮೈಸೂರಿನ ಬಹುತೇಕ ರಸ್ತೆಗಳ ವಿಶಾಲ ಫುಟ್‌ಪಾತ್‌ಗಳಿರುವೆಡೆ ಇಂತಹ ಐಷಾರಾಮಿ ವಸ್ತುಗಳ ಅಂಗಡಿಗಳು ಕಾಣಸಿಗುತ್ತವೆ. ಹಾಗಾಗಿ, ಆ ಮಾರ್ಗ ತೆರಳುವವರು ವಾಹನಗಳನ್ನು ರಸ್ತೆಯಲ್ಲೇ ನಿಲ್ಲಿಸಿ, ವ್ಯಾಪಾರಕ್ಕಿಳಿಯುತ್ತಾರೆ. ಚೌಕಾಸಿ ಮಾಡಿ ಪೀಠೋಪಕರಣ, ಇನ್ನಿತರ ಗೃಹೋಪಯೋಗಿ

■ 6ನೇ ಪುಟಕ್ಕೆ

ರಸ್ತೆಬದಿ ವಿಶಾಲ ಫುಟ್‌ಪಾತ್‌ಗಳಲ್ಲಿ ಪೀಠೋಪಕರಣ, ಬಟ್ಟೆ ಗೃಹೋಪಯೋಗಿ ವಸ್ತುಗಳನ್ನಿಟ್ಟುಕೊಂಡು ಮಾರುವುದು ಕಾನೂನುಬಾಹಿರ. ಇದರಿಂದ ವ್ಯಾಪಾರದಲ್ಲಿ ಅನಗತ್ಯ ಸ್ಪರ್ಧೆ ಉಂಟಾಗಿ ಟ್ರೇಡ್ ಲೈಸೆನ್ಸ್ ಪಡೆದು, ತೆರಿಗೆ ಪಾವತಿಸಿ ವ್ಯಾಪಾರ ಮಾಡುತ್ತಿರುವ ಅಧಿಕೃತ ಉದ್ದಿಮೆದಾರರಿಗೆ ನಷ್ಟ ಉಂಟಾಗುತ್ತದೆ. ಅಲ್ಲದೇ, ಮೈಸೂರಿನ ಸ್ವಚ್ಛತೆಗೂ ಅಡ್ಡಿಯಾಗುವುದರಿಂದ ಜಿಎಸ್‌ಟಿ, ಟ್ರೇಡ್ ಲೈಸೆನ್ಸ್ ಫೀ ಪಾವತಿಸದೇ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುವವರನ್ನು ತೆರವುಗೊಳಿಸಿ, ಮತ್ತೆ ಈ ಚಾಳಿ ಮರುಕಳಿಸದಂತೆ ಕ್ರಮ ವಹಿಸುತ್ತೇವೆ. –ಡಾ.ವೆಂಕಟೇಶ್
ಮುಖ್ಯ ಆರೋಗ್ಯಾಧಿಕಾರಿ, ಮೈಸೂರು ಮಹಾನಗರ ಪಾಲಿಕೆ

ಮೈಸೂರಿನ ಫುಟ್‌ಪಾತ್‌ಗಳಲ್ಲಿ ಅನಧಿಕೃತವಾಗಿ ತಲೆ ಎತ್ತಿರುವ ಐಷಾರಾಮಿ ಹೋಟೆಲ್‌ಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ನಗರ ಪಾಲಿಕೆಗೆ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಫುಟ್‌ಪಾತ್ ಮೇಲೆ ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುತ್ತಿರುವ ಹೋಟೆಲ್‌ಗಳಲ್ಲಿ ಸ್ಟಾರ್ ಹೋಟೆಲ್‌ಗಳಲ್ಲಿ ಸಿಗುವಂತಹ ಎಲ್ಲಾ ತರಹದ ತಿಂಡಿಗಳನ್ನು ಮಾರಾಟ ಮಾಡಲಾಗುತ್ತಿದೆ. ಬೆಲೆಯೂ ಸಹ ಅಷ್ಟೇ. ವಿಪರ್ಯಾಸವೆಂದರೆ ಈ ಹೋಟೆಲ್‌ಗಳವರು ಪಾಲಿಕೆಯಿಂದ ಪರವಾನಗಿ ಪಡೆದಿಲ್ಲ. ಗೃಹ ಬಳಕೆಯ ಸಿಲಿಂಡರ್‌ಗಳನ್ನೇ ಅನಧಿಕೃತವಾಗಿ ಬಳಸುತ್ತಾರೆ. ಶುಚಿತ್ವವೂ ಇರುವುದಿಲ್ಲ. ಅಲ್ಲಿಗೆ ತೆರಳುವ ಗ್ರಾಹಕರ ಆರೋಗ್ಯಕ್ಕೆ ಹಾನಿಯಾಗುವಂತಹ ಅಪಾಯವೂ ಇದೆ. ಪಾಲಿಕೆಯಿಂದ ಲೈಸೆನ್ಸ್ ಪಡೆದು ನಡೆಸುತ್ತಿರುವ ಹೋಟೆಲ್‌ಗಳ ಮೇಲೆ ಅಧಿಕಾರಿಗಳು ವಿನಾ ಕಾರಣ ದಾಳಿ ಮಾಡಿ, ಶುಚಿತ್ವ ಸೇರಿದಂತೆ ಎಲ್ಲವನ್ನೂ ಪರಿಶೀಲಿಸುತ್ತಾರೆ. ನಾವು ಎಲ್ಲಾ ರೀತಿಯ ಲೈಸೆನ್ಸ್‌ಗಳನ್ನು ಪಡೆದು, ಚಾಚೂ ತಪ್ಪದೆ ತೆರಿಗೆಗಳ ಪಾವತಿಸುತ್ತಿದ್ದೇವೆ. ಈ ಫುಟ್‌ಪಾತ್ ಹೋಟೆಲ್‌ಗಳಿಂದ ನಮ್ಮ ವ್ಯಾಪಾರಕ್ಕೂ ಭಾರಿ ಹೊಡೆತ ಬಿದ್ದಿದೆ. ಸರ್ಕಾರಕ್ಕೆ ತೆರಿಗೆ ನಷ್ಟವಾಗುತ್ತಿದೆ. ಹೀಗಿದ್ದರೂ ಕೂಡ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಇಲ್ಲಿನ ಆಹಾರ ಪದಾರ್ಥಗಳಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಉಂಟಾದರೆ ಹೊಣೆ ಯಾರು? ಈ ಸಂಬಂಧ ನಾವು ಪ್ರತಿಭಟನೆ ನಡೆಸುವುದಲ್ಲದೆ, ಪಾಲಿಕೆ ಅಧಿಕಾರಿಗಳ ಜಾಣ ಕುರುಡುತನ ಮುಂದುವರೆದರೆ ನಾವೂ ಕೂಡ ಫುಟ್‌ಪಾತ್‌ಗಿಳಿದು ಹೋಟೆಲ್ ನಡೆಸಬೇಕಾದ ಅನಿವಾರ್ಯತೆ ಬರುತ್ತದೆ.



– ಸಿ.ನಾರಾಯಣಗೌಡ, ಅಧ್ಯಕ್ಷರು, ಹೋಟೆಲ್ ಮಾಲೀಕರ ಸಂಘ

ಫಲಾಫಲ ದೇವರಿಗೆ ಬಿಡ್ತೇನೆ

ಸಿಎಂ ಗಾದಿಗೆ ಯಾವ ಶಾಸಕರ ಬಳಿ ಬೇಡಲ್ಲ; ಪಕ್ಷ ಕೈ ಹಿಡಿಯುತ್ತೆ!

ವಿರೋಧಿಗಳಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಎದಿರೇಟು

ಬೆಂಗಳೂರು,ಜ.11(ಕೆಎಂಶಿ)– ಮುಖ್ಯಮಂತ್ರಿ ಗಾದಿಗಾಗಿ ಯಾವ ಶಾಸಕರು, ಕಾರ್ಯಕರ್ತರ ಬಳಿ ಬೇಡಲು ಹೋಗುವುದಿಲ್ಲ, ಪಕ್ಷವನ್ನು ನಂಬಿದ್ದೇನೆ, ಪಕ್ಷ ನನ್ನ ಕೈಹಿಡಿಯುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ವಿರೋಧಿಗಳಿಗೆ ಖಡಕ್ಕಾಗಿ ತಿಳಿಸಿದ್ದಾರೆ.

ನನ್ನ ಪ್ರಯತ್ನ ನಾನು ಮಾಡುತ್ತೇನೆ, ಫಲಾಫಲ ದೇವರಿಗೆ ಬಿಡುತ್ತೇನೆ. ನನಗೆ ಯಾರ ಬೆಂಬಲವೂ ಬೇಡ, ಪಕ್ಷ ಹೇಳಿದಂತೆ ಕೆಲಸ ಮಾಡುತ್ತೇನೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ, ಅವರು ಇಂತಹ ಒತ್ತಾಯ ಮಾಡುವುದು ಬೇಡ. ನನ್ನ ಶ್ರಮಕ್ಕೆ ಪಕ್ಷ ಯಾವ ಪ್ರತಿಫಲ ಕೊಡುತ್ತದೋ ಅದನ್ನು ಸ್ವೀಕರಿಸುತ್ತೇನೆ. ಮುಖ್ಯಮಂತ್ರಿ ಗಾದಿಗಾಗಿ ಅವರಿಗೆ ಬೆಂಬಲ ನೀಡುತ್ತೇವೆ, ಇವರಿಗೆ ಬೆಂಬಲ ನೀಡುತ್ತೇವೆ ಎಂಬ ಮಾತು ಅನಗತ್ಯ. ನನಗೆ ಈ ಶಾಸಕರ ಬೆಂಬಲವೂ ಬೇಡ, ಪಕ್ಷದ ನಾಯಕರಿದ್ದಾರೆ. ಅವರು ಹೇಳಿದಂತೆ ಕಾರ್ಯಕರ್ತನಾಗಿ ದುಡಿದುಕೊಂಡಿರುತ್ತೇನೆ.

ನನ್ನ ರಾಜಕೀಯ ಜೀವನದಲ್ಲಿ ಹಲವು ತಿರುವುಗಳನ್ನು ಕಂಡಿದ್ದೇನೆ, ಅದರ ಕಷ್ಟ–ಸುಖ ನನಗೆ ಮತ್ತು ಪಕ್ಷಕ್ಕೆ ಗೊತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್‌ಗೆ ಐದು ವರ್ಷ ಅಧಿಕಾರ ನಡೆಸಲು ಜನರು ಆಶೀರ್ವಾದ ಮಾಡಿದ್ದಾರೆ. ಅವರು ಮಾಡಿರುವ ಆಶೀರ್ವಾದವನ್ನು ನಮ್ರತೆಯಿಂದ ಸ್ವೀಕರಿಸಿದ್ದು, ಪೂರ್ಣಾವಧಿ ಆಡಳಿತ ನಡೆಸುತ್ತೇವೆ.

ಮುಖ್ಯಮಂತ್ರಿ ಹಾಗೂ ನಾನು ಜೊತೆ ಜೊತೆಯಾಗಿ ನಮಗೆ ನೀಡಿರುವ ಅವಕಾಶವನ್ನು ಅಭಿವೃದ್ಧಿಗೆ ಮೀಸಲಿರಿಸುತ್ತೇವೆ. ಇದರಲ್ಲಿ ಮತ್ತೊಬ್ಬರು

■ 6ನೇ ಪುಟಕ್ಕೆ

ಮುಂದಿನ ಸಿಎಂ ಡಿ.ಕೆ.ಶಿವಕುಮಾರ್‌ಗೆ ಜೈ...!



ಶೃಂಗೇರಿ ಶಾರದಾ ಮಠದ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು.

ಚಿಕ್ಕಮಗಳೂರು, ಜ.11– ಅಧಿಕಾರ ಹಂಚಿಕೆ ಮುನ್ನೆಲೆಗೆ ಬಂದಿರುವ ಹೊತ್ತಲ್ಲಿ 'ಮುಂದಿನ ಸಿಎಂ ಡಿ.ಕೆ.ಶಿವಕುಮಾರ್' ಎಂದು ಘೋಷಣೆ ಕೂಗಿದ ಪ್ರಸಂಗ ಶೃಂಗೇರಿಯಲ್ಲಿ ಶನಿವಾರ ನಡೆದಿದೆ. ಶೃಂಗೇರಿ ಶಾರದಾ ಮಠದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ್ದ ವೇಳೆ ಕಾರ್ಯಕರ್ತರು ಈ ರೀತಿ ಘೋಷಣೆ ಕೂಗುವ ಮೂಲಕ ಅಭಿಮಾನ ಮೆರೆದರು.

ಶೃಂಗೇರಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರನ್ನು ಸ್ಥಳೀಯ ಶಾಸಕ ಟಿ.ಡಿ.ರಾಜೇಗೌಡ ಹಾಗೂ ಕಾಂಗ್ರೆಸ್ ಮುಖಂಡರು ಸ್ವಾಗತಿಸಿದರು. ಈ ವೇಳೆ ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಜೈ... ಘೋಷಣೆಯೊಂದಿಗೆ ಕಾರ್ಯಕರ್ತರೂ ಹೂಗುಚ್ಛ ನೀಡಿ ಸ್ವಾಗತಿಸಿದರು. ನಂತರ ನೇರವಾಗಿ ಶೃಂಗೇರಿ ಶಾರದಾ ಮಠಕ್ಕೆ ಆಗಮಿಸಿದ ಶಿವಕುಮಾರ್, ಆಡಳಿತ ಮಂಡಳಿ ಆಯೋಜನೆ ಮಾಡಿದ್ದ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಂತರ ಶೃಂಗೇರಿ ಶಾರದಾಂಬೆ ಸೇರಿದಂತೆ ಮಠದ ಆವರಣದಲ್ಲಿರುವ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥನೆ ಮಾಡಿದರು. ಅಲ್ಲಿಂದ ನರಸಿಂಹವನದ ಪಕ್ಕದಲ್ಲಿರುವ ಗುರು ನಿವಾಸಕ್ಕೆ ತೆರಳಿ, ಶ್ರೀಗಳ ಆಶೀರ್ವಾದ ಪಡೆದುಕೊಂಡರು.

ಡಿ.ಕೆ.ಶಿವಕುಮಾರ್ ಹಠವಾದಿ, ಒದ್ದು ಅಧಿಕಾರ ಕಿತ್ತುಕೊಳ್ಳುವಲ್ಲಿ ನಿಸ್ಸೀಮ!

ಬೆಂಗಳೂರು, ಜ.11(ಕೆಎಂಶಿ)– ಕಾಂಗ್ರೆಸ್ಸಿಗರ ಮಿಡ್‌ನೈಟ್ ಮೀಟಿಂಗ್ ನಡುವೆ ಕರ್ನಾಟಕ ಬಡವಾಗುತ್ತಿದೆ. ರಾಜ್ಯದ ಜನರು ಪರಿತಪಿಸುವಂತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಕ್ಷದ ಕಾನೂನು ಪ್ರಕೋಷ್ಠದ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೊರಗಿನಿಂದ ಬಂದವರು ಎಂಬುದು ಆಡಳಿತ ಪಕ್ಷದಲ್ಲಿನ ಕೆಲವರಿಗೆ



ವಿಜಯೇಂದ್ರ

■ 6ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 12 ಜನವರಿ 2025

ಜ.14ರಿಂದ 19ರವರೆಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ಮೈಸೂರಲ್ಲಿ ಬೀದಿನಾಟಕ; ಚಿತ್ರಕಲಾ ಶಿಬಿರ



ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಮೈಸೂರಲ್ಲಿ ಬೀದಿನಾಟಕ ಪ್ರದರ್ಶನ ಹಾಗೂ ಚಿತ್ರಕಲಾ ಶಿಬಿರಕ್ಕೆ ಚಾಲನೆ ನೀಡಲಾಯಿತು. ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮಲ್ಲಿಕಾರ್ಜುನ ಸ್ವಾಮಿ, ಡಾ.ಸುದರ್ಶನ್ ಇದ್ದಾರೆ.

ಮೈಸೂರು, ಜ.11(ಆರ್‌ಕೆ)– ಜನವರಿ 14ರಿಂದ 19ರವರೆಗೆ ನಡೆಯುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಮೈಸೂರಲ್ಲಿ ಶನಿವಾರ ಬೀದಿನಾಟಕ ಪ್ರದರ್ಶನ ಹಾಗೂ ಚಿತ್ರಕಲಾ ಶಿಬಿರ ನಡೆಯಿತು.

ಕರ್ನಾಟಕ ರಂಗಾಯಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ದೇವರಾಜ ಮಾರುಕಟ್ಟೆ ಮುಂದಿನ ಚಿಕ್ಕಗಡಿಯಾರ ಆವರಣದಲ್ಲಿ ಆಯೋಜಿಸಿದ್ದ ಬೀದಿನಾಟಕ ಪ್ರದರ್ಶನವನ್ನು ಮೈಸೂರು ಮಹಾ ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭ ಕಲಾವಿದರನ್ನುದ್ದೇಶಿಸಿ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಸಂಗೀತ, ನೃತ್ಯ, ಜಾನಪದ ಗೀತೆ, ನಾಟಕ ಸೇರಿದಂತೆ ವಿವಿಧ ಕಲಾ ಪ್ರಾಕಾರಗಳು ಇಲ್ಲಿನ ಪರಂಪರೆಯನ್ನು ಹೆಚ್ಚಿಸುತ್ತಿವೆ. ಪ್ರತೀ ವರ್ಷ ರಂಗಾಯಣವು ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆಯೋಜಿಸುವ ಮೂಲಕ ದೇಶದ ಎಲ್ಲಾ ರಾಜ್ಯಗಳ ಹಲವು ಭಾಷೆಗಳ ಕಲಾವಿದರನ್ನು ಪ್ರೋತ್ಸಾಹಿಸುತ್ತಿದೆ ಎಂದರು.


ಬೀದಿನಾಟಕಗಳ ಮೂಲಕ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಿ ಸಮಾಜದ ಸ್ವಾಸ್ಥ್ಯ ರಕ್ಷಿಸುವಲ್ಲಿ ರಂಗ ಕಲಾವಿದರು ಹಾಗೂ ಜಾನಪದ ಕಲಾ ಮಾಧ್ಯಮ ಪ್ರಮುಖ ಪಾತ್ರ ವಹಿಸಲಿದೆ ಎಂದೂ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಬೀದಿನಾಟಕ ಸಂಯೋಜಕ ಎಸ್.ರಾಮು ಹಾಗೂ ಇನ್ನಿತರ ಕಲಾವಿದರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಂತರ ಬೆಳಗ್ಗೆ 11.30 ಗಂಟೆ ವೇಳೆಗೆ ರಂಗಾಯಣ ಆವರಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಚಿತ್ರ ಕಲಾವಿದ ಎಸ್.ವಿಷ್ಣುಕುಮಾರ್, ಕಾವಾ ಡೀನ್ ಎ.ದೇವರಾಜು ಅವರು ಚಿತ್ರಕಲಾ ಶಿಬಿರವನ್ನು ಉದ್ಘಾಟಿಸಿದರು.

ವಿದೇಶಗಳಿಗೆ ಪೈಪೋಟಿ ನೀಡುವಂತೆ ಭಾರತದಲ್ಲೇ ರಕ್ಷಣಾ ಸಾಮಗ್ರಿ ಉತ್ಪಾದನೆ

ಕೃಷಿ ಸಮ್ಮಾನ್ ಪುರಸ್ಕಾರ ಕಾರ್ಯಕ್ರಮದಲ್ಲಿ ಡಿಆರ್‌ಡಿಓ ನಿವೃತ್ತ ನಿರ್ದೇಶಕ ಡಾ.ರಾಧಾಕೃಷ್ಣ ಪ್ರಶಂಸೆ



ಮೈಸೂರಿನ ಕಲಾಮಂದಿರದಲ್ಲಿ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್ ಲಾಲ್ ಬಹದ್ದೂರ್ ಜೈ ಜವಾನ್ ಜೈ ಕಿಸಾನ್ ದಿವಸ್ ಕಾರ್ಯಕ್ರಮ ಆಯೋಜಿಸಿತ್ತು.

ಮೈಸೂರು, ಜ.11(ಬಿಎಲ್‌ಯು)– ವಿದೇಶಗಳಿಗೆ ತೀವ್ರ ಪೈಪೋಟಿ ನೀಡುವಂತೆ ರಕ್ಷಣಾ ಕ್ಷೇತ್ರದ ಬಹುತೇಕ ಸಾಮಗ್ರಿಗಳನ್ನು ಈಗ ಭಾರತದಲ್ಲೇ ತಯಾರಿಸುತ್ತಿದ್ದೇವೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ನಿವೃತ್ತ ನಿರ್ದೇಶಕ ಡಾ.ರಾಧಾಕೃಷ್ಣ ಹೆಮ್ಮೆಯಿಂದ ನುಡಿದರು.

ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್ ಆಯೋಜಿಸಿದ್ದ ಲಾಲ್ ಬಹದ್ದೂರ್ ಜೈ ಜವಾನ್ ಜೈ ಕಿಸಾನ್ ದಿವಸ್ ಮತ್ತು ರಾಷ್ಟ್ರ ರಕ್ಷಾ ಸಮ್ಮಾನ್ ಹಾಗೂ ಕೃಷಿ ಸಮ್ಮಾನ್ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶಕ್ಕೆ ಅವಶ್ಯವಿರುವ ರಕ್ಷಣಾ ಸಾಮಗ್ರಿಗಳನ್ನು ಈ ಹಿಂದೆ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೆವು. ಆದರೆ ಈಗ ಭಾರತದಲ್ಲೇ ರಕ್ಷಣಾ ಸಾಮಗ್ರಿ ತಯಾರು ಮಾಡುತ್ತಿದ್ದೇವೆ. ಭಾರತದ ತಂತ್ರಜ್ಞಾನ ಅಭಿವೃದ್ಧಿ ಹಾಗೂ ಸಂಶೋಧನೆ ಎಷ್ಟರ ಮಟ್ಟಿಗೆ ಬೆಳವಣಿಗೆ ಸಾಧಿಸಿದೆ ಎಂಬುದನ್ನು ಇದು ಬಿಂಬಿಸುತ್ತದೆ ಎಂದರು.

ಡಿಆರ್‌ಡಿಓಗೆ ಸಿವಿಲ್ ಇಂಜಿನಿಯರ್ ಆಗಿ ನಾನು ಆಯ್ಕೆಯಾದೆ. ಆ ಸಂದರ್ಭದಲ್ಲಿ ಅಬ್ದುಲ್ ಕಲಾಂ ಹಾಗೂ ಹಿರಿಯ ವಿಜ್ಞಾನಿ ಅರುಣಾಚಲಂ ಶ್ರಮ ಹಾಗೂ ಬದ್ಧತೆ ನೋಡಿ ನಾವು ಉತ್ತೇಜನಗೊಂಡೆವು ಎಂದು ಡಾ.ರಾಧಾಕೃಷ್ಣ ನುಡಿದರು.

ಅಬ್ದುಲ್ ಕಲಾಂ ಹಾಗೂ ಅರುಣಾಚಲಂ ಅವರಂತೆ ನಾವೂ ಹಗಲು ರಾತ್ರಿ ಎನ್ನದೆ ಕೆಲಸ ಮಾಡಿದೆವು. ಅಗ್ನಿ ಮಿಸೈಲ್ ಯಶಸ್ವಿ ಉಡಾವಣೆ ಸಂದರ್ಭದಲ್ಲಿ ಬಹಳ ಪರಿಶ್ರಮಪಟ್ಟೆವು ಎಂದರು. ಸಿವಿಲ್ ಕಾಮಗಾರಿ ನಮ್ಮ ಜವಾಬ್ದಾರಿಯಾಗಿತ್ತು. ರಾಕೆಟ್‌ಗಳ ಉಡಾವಣೆಗೆ ಅವಶ್ಯವಿರುವ ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡುತ್ತಿದ್ದೆವು. ಆ ವೇಳೆ ಪರಿಶೀಲನೆಗಾಗಿ ಬರುವ ಅಬ್ದುಲ್ ಕಲಾಂ ಅವರು ನಮ್ಮ ಕಾರ್ಯ ನೋಡಿ ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು. 'ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್' ಎಂಬ ಅವರ ಘೋಷವಾಕ್ಯ ನಮ್ಮಲ್ಲಿ ಉತ್ತೇಜನಕ್ಕೆ ಕಾರಣವಾಯಿತು ಎಂದು ಹೇಳಿದರು.

ಕೊರೊನಾ ಅಲೆ ಮೊದಲ ಹಂತದಲ್ಲಿ ಕೇವಲ 15 ದಿನದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿದ್ದೆವು. ಎರಡನೇ ಹಂತದ 45 ದಿನದ ಅವಧಿಯಲ್ಲಿ 250 ಹಾಸಿಗೆಗಳ ಆಸ್ಪತ್ರೆ ನಿರ್ಮಿಸಿದ್ದೆವು. ಅಲ್ಲದೆ ಕಡಿಮೆ ಅವಧಿಯಲ್ಲಿ ಬೆಂಗಳೂರಿನಲ್ಲಿ ಏಳು ಅಂತಸ್ತಿನ ಡಿಆರ್‌ಡಿಓ ಕಟ್ಟಡವನ್ನು ನಿರ್ಮಾಣ ಮಾಡಿದ್ದೆವು ಎಂದು ಡಾ.ರಾಧಾಕೃಷ್ಣ ತಿಳಿಸಿದರು.

ಈ ಸಂದರ್ಭದಲ್ಲಿ ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ನಿವೃತ್ತ ಯೋಧರನ್ನು ಸನ್ಮಾನಿಸಲಾಯಿತು. ರಕ್ಷಣಾ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಸಿಎಂ.ಶ್ರೀಧರ್, ಜಿ.ಕುಮಾರಸ್ವಾಮಿ, ಸಿ.ಕುಪ್ಪುಸ್ವಾಮಿ, ಕೆ.ಗೋವಿಂದರಾಜು, ಹರೀಶ್, ಬಿ.ಮುರಳಿ, ಶೇಷ ಕುಮಾರ್, ಪಾರ್ವತಿ ಫ್ಯಾನ್ಸಿ ಗಣಪತಿ ಮತ್ತು ಆರ್.ರಂಜಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇವನೂರು ಮಹಾದೇವರಿಗೆ ಸನ್ಮಾನ...



ಕರ್ನಾಟಕ ದಲಿತ ಪ್ಯಾಂಥರ್ಸ್‌ನಿಂದ ಮೈಕಮ್ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಶ್ರೇಷ್ಠ ಸಾಹಿತಿ, ಚಿಂತಕ ದೇವನೂರು ಮಹದೇವ ಅವರನ್ನು ಸನ್ಮಾನಿಸಲಾಯಿತು.

ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷೆಗಳ ತರಬೇತಿಗೆ ಅರ್ಜಿ

ಮೈಸೂರು,ಜ.11–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಎಸ್‌ಬಿಐ ಮತ್ತು ಇತರ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಜ.18 ರೊಳಗೆ ಕಚೇರಿ ದೂ.ಸಂಖ್ಯೆ: 0821–2515944, 9964760090 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಕೋರ್ಟ್ ಆದೇಶ ಉಲ್ಲಂಘನೆ

ಸಹಾಯಕ ಪ್ರಾಧ್ಯಾಪಕರಿಗೆ ಮರು ಪದನಾಮೀಕರಣ ಮಾಡದೆ ಅನ್ಯಾಯ

ಮೈಸೂರು, ಜ.11(ಜಿಎ)–ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ನೇಮಕಗೊಂಡ ಪದ ನಾಮೀಕರಣಗೊಂಡ ಸಹಾಯಕ ಪ್ರಾಧ್ಯಾಪಕರಿಗೆ ನ್ಯಾಯಾಲಯದ ಆದೇಶದಂತೆ ಮರುಪದನಾಮೀಕರಣ ಮಾಡಿಕೊಳ್ಳದೆ ತಾಂತ್ರಿಕ ಶಿಕ್ಷಣ ಇಲಾಖೆಯು ನ್ಯಾಯಾಲಯದ ತೀರ್ಪನ್ನು ಕಡೆಗಣಿಸಿದೆ ಎಂದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸಿಂಡಿಕೇಟ್ ಮಾಜಿ ಸದಸ್ಯ ಕೆ.ವಸಂತ್‌ಕುಮಾರ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಲೋಕಸೇವಾ ಆಯೋಗವು 2009ರಲ್ಲಿ ರಾಜ್ಯದ 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ನೇಮಕಾತಿ ಮಾಡಿಕೊಂಡ, ಪದನಾಮೀಕರಣಗೊಂಡ 92 ವೃಂದ–ಎ ಸಹಾಯಕ ಪ್ರಾಧ್ಯಾಪಕರಿಗೆ ನ್ಯಾಯಾಲಯದ ಆದೇಶದಂತೆ ಸಹ ಪ್ರಾಧ್ಯಾಪಕ ಹುದ್ದೆಯನ್ನು, ಆರ್ಥಿಕ ಸೌಲಭ್ಯವನ್ನು ಒದಗಿಸಬೇಕಿತ್ತು. ಆದರೆ ಈವರೆಗೂ ಒದಗಿಸಿಲ್ಲ ಎಂದು ದೂರಿದರು.

ಈ ಅವಧಿಯಲ್ಲಿ ನೇಮಕಗೊಂಡವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಕೋರ್ಟ್ ಆದೇಶವನ್ನೂ ಸರಿಯಾಗಿ ಗ್ರಹಿಸದೇ ಪದೇ ಪದೆ ಕಾನೂನು ಹೋರಾಟ ಮಾಡುವ ಪರಿಸ್ಥಿತಿ ನಿರ್ಮಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ, ನ್ಯಾಯಾಲಯದ ತೀರ್ಪಿನ ಅನುಷ್ಠಾನವನ್ನು ಸಮರ್ಪಕವಾಗಿ ಮಾಡಬೇಕು. ಸಿಬ್ಬಂದಿಗೆ 6 ಮತ್ತು 7ನೇ ಎಐಸಿಟಿಇ ವೇತನ ಶ್ರೇಣಿಯನ್ನು ಕಲ್ಪಿಸಬೇಕು. ಇದರಿಂದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಉತ್ತಮ ಶೈಕ್ಷಣಿಕ ಚಟುವಟಿಕೆ ನಡೆಯಲು ಸಹಕಾರವಾಗುತ್ತದೆ ಎಂದು ಹೇಳಿದರು.

ಭುವಿಕ್‌ಗೆ ಐಬಿಆರ್ ಸಾಧಕ ಪ್ರಶಸ್ತಿ




ಮೈಸೂರು,ಜ.11–ಕರ್ನಾಟಕದ ಮೈಸೂರಿನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ವಿಜಯನಗರ ಶಾಲೆಯಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಭುವಿಕ್ ಎಂ.ಎಂ. (ಜನನ ಏಪ್ರಿಲ್ 12, 2012), 12 ವರ್ಷ ಮತ್ತು 7 ತಿಂಗಳ ವಯಸ್ಸಿನಲ್ಲಿ ಭಗವದ್ಗೀತೆಯ 12ನೇ ಅಧ್ಯಾಯವನ್ನು 1 ನಿಮಿಷ, 22 ಸೆಕೆಂಡುಗಳು ಮತ್ತು 82 ಮಿಲಿಸೆಕೆಂಡ್‌ಗಳಲ್ಲಿ ಓದಿದ್ದಕ್ಕಾಗಿ 'IBR ಸಾಧಕ' (ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್) ಪುರಸ್ಕಾರವನ್ನು ಡಿಸೆಂಬರ್ 5, 2024ರಂದು ಪಡೆದಿದ್ದಾರೆ.

ಇಂದು ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು,ಜ.11– ಜನವರಿ 12ರಂದು ಕರ್ನಾಟಕ ಪ್ರಾಧಿಕಾರ ವತಿಯಿಂದ 2024ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ಯುಪಿಎಸ್‌ಸಿ ಪೂರ್ವಭಾವಿ ತರಬೇತಿಗೆ ನಿಯೋಜಿಸಲು ಪ್ರವೇಶ ಪರೀಕ್ಷೆ ನಡೆಯಲಿದ್ದು, ಮಧ್ಯಾಹ್ನ 12 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಸೆಕ್ಷನ್ 163 ರೀತ್ಯ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲು ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ. ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪೀಪಲ್ಸ್ ಪಾರ್ಕ್ ಈ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ



ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆ ನಡೆಸಲಾಯಿತು.

ಮೈಸೂರು, ಜ.11–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಯದುಗಿರಿ ಯತಿರಾಜ ಮಠ ಇದರ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿಯನ್ನು ವಿಶೇಷ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳುವ ಮೂಲಕ ಆಚರಿಸಲಾಯಿತು. ದೇವಸ್ಥಾನದಲ್ಲಿ ನಿರ್ಮಿಸಿದ್ದ ವಿಶಿಷ್ಟವಾದ ವೈಕುಂಠ ದ್ವಾರವನ್ನು ಮುಂಜಾನೆಯೇ ತೆರೆಯಲಾಯಿತು. ಬಳಿಕ ವಿಶೇಷ ದರ್ಶನಕ್ಕೆ ಭಕ್ತಾದಿಗಳಿಗೆ ಅವಕಾಶ ಕಲ್ಪಿಸಿ ಕೊಡಲಾಯಿತು. ವೈಕುಂಠ ದ್ವಾರದ ಅಪಾರ ಭಕ್ತ ವೃಂದ ಸ್ವಾಮಿಯ ದರ್ಶನ ಪಡೆದು ಪುನೀತರಾದರು. ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ದೇವಸ್ಥಾನದ ಮುಖ್ಯಸ್ಥ ಕೆ.ಆರ್. ಯೋಗಾನರಸಿಂಹನ್, ಅನಂತು ವಾದ್ಯಾರ್, ವೀರರಾಘವನ್ ಮುಂತಾದವರು ಉಪಸ್ಥಿತರಿದ್ದರು. ಬೆಳಿಗ್ಗೆಯಿಂದ ರಾತ್ರಿವರೆಗೂ ತೀರ್ಥ ಪ್ರಸಾದ ವಿತರಣೆ ನಡೆಯಿತು.

ಶತಾಯುಷಿ ಶ್ರೀಮತಿ ಪ್ರಮೀಳಾ ಕೃಷ್ಣ ನಿಧನ



ಮೈಸೂರು, ಜ. 11– ಸಾಹುಕಾರ್ ಚೆನ್ನಯ್ಯ ಅವರ ಪುತ್ರಿ ಹಾಗೂ ಕ್ಯಾಪ್ಟನ್ ಕೃಷ್ಣ ಅವರ ಪತ್ನಿ ಶ್ರೀಮತಿ ಪ್ರಮೀಳಾ ಕೃಷ್ಣ (100) ನಿನ್ನೆ (ಜ. 10) ನಿಧನರಾಗಿದ್ದಾರೆ. ಮೃತರು ಪುತ್ರ ಕೆ. ಚಂದ್ರಪ್ರಕಾಶ್ ಸೇರಿದಂತೆ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಇಂದು ಬೆಂಗಳೂರಿನಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಲ್ಲಿ ಒಬ್ಬರಾದ ಹಾಗೂ 1938ರ ಶಿವಪುರ ಕಾಂಗ್ರೆಸ್ ಅಧಿವೇಶನ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಸಾಹುಕಾರ್ ಎಸ್. ಚೆನ್ನಯ್ಯ ಅವರ ಏಕಮಾತ್ರ ಪುತ್ರಿ, ಶತಾಯುಷಿ ಶ್ರೀಮತಿ ಪ್ರಮೀಳಾ ಕೃಷ್ಣ. ಇವರು ಒಕ್ಕಲಿಗರ ಸಂಘ ಹಾಗೂ ಆದಿಚುಂಚನಗಿರಿ ಮಠದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಕೆ.ಹೆಚ್. ರಾಮಯ್ಯನವರ ಪುತ್ರ ಕ್ಯಾಪ್ಟನ್ ಕೆ.ಆರ್. ಕೃಷ್ಣ ಅವರನ್ನು ವಿವಾಹವಾಗಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.01.2025 ಭಾನುವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ವಿಶೇಷ ಪೂಜೆ ಮತ್ತು ಅನ್ನದಾನಂ ಸೇವಾ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಮಾತೃ ಮಂಡಲಿ ಬಾಲಕಿಯರ ಪದವಿಪೂರ್ವ ಕಾಲೇಜು:** ವಾರ್ಷಿಕ ಎನ್‌ಎಸ್‌ಎಸ್ ಶಿಬಿರ, ಬೆಳಗ್ಗೆ 7ಕ್ಕೆ ಉಪನ್ಯಾಸಕ ಸಿದ್ದರಾಜು ಅವರಿಂದ ಧ್ವಜಾರೋಹಣ, ಮಧ್ಯಾಹ್ನ 3.30ಕ್ಕೆ ಪ್ರಾಧ್ಯಾಪಕ ಡಾ.ಬಿ.ಎಸ್. ದಿನಮಣಿ ಅವರಿಂದ ಮಹಿಳಾ ಸಬಲೀಕರಣ ಕುರಿತು ಉಪನ್ಯಾಸ, ಉಪಸ್ಥಿತರು: ನಿವೃತ್ತ ಉಪನ್ಯಾಸಕ ನಾಗೇಶ್, ಕಾಲೇಜು ಪ್ರಿನ್ಸಿಪಾಲ್ ಡಾ.ಬುಷ್‌ರಾ ಬೇಗಂ, ಅಧ್ಯಕ್ಷತೆ: ವಿದ್ಯೋದಯ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಬಸವಣ್ಣಸ್ವಾಮಿ, ಸ್ಥಳ: ಮಾತೃ ಮಂಡಲಿ ಶಿಶು ವಿಕಾಸ ಕೇಂದ್ರ, ಗೋಕುಲಂ 3ನೇ ಹಂತ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ನೆಗಡಿ, ಕೆಮ್ಮು ಮತ್ತು ಅಸ್ತಮಾಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿ ನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಜನಜಾಗರಣ ಟ್ರಸ್ಟ್, ಮೈಸೂರಿನ ರಕ್ತದಾನ ಗೋ ಭಕ್ತ ಸಂಘಟನೆ ಟ್ರಸ್ಟ್, ತೇರಾ ಪಂತ್ ಯುವ ಪರಿಷತ್, ಕರ್ನಾಟಕ ಕುಮಾವತ್ ಸಮಾಜ, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ:** ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಬೃಹತ್ ರಕ್ತದಾನ ಶಿಬಿರ, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ರಿಂದ.

■ **ನವದೆಹಲಿಯ ಕೇಂದ್ರ ಜವಳಿ ಮಂತ್ರಾಲಯದ ಜವಳಿ ಅಭಿವೃದ್ಧಿ ಆಯುಕ್ತರು, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** 'ಸಿಲ್ಕ್ ಫ್ಯಾಬ್' ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮೇಳ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 11ರಿಂದ ರಾತ್ರಿ 8.30 ರವರೆಗೆ.

■ **ಮೈಸೂರು ಜಿಲ್ಲಾ ಅಮರಶಿಲ್ಪಿ ವೇದಿಕೆ :** ಜಕಣಾಚಾರಿ ಸಂಸ್ಮರಣಾ ದಿನ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಮುಖಂಡ ಲಕ್ಷ್ಮೀ ಶಿವಣ್ಣ, ಸ್ಥಳ: ಹೆಬ್ಬಾಳು ಲಕ್ಷ್ಮೀಕಾಂತನಗರದ ಅಮರಶಿಲ್ಪಿ ಜಕಣಾಚಾರಿ ವೃತ್ತ, ಸಂಜೆ 4ಕ್ಕೆ.


■ **ಮೈಸೂರು ಮಹಾನಗರಪಾಲಿಕೆ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ರಾಷ್ಟ್ರಕವಿ ಕುವೆಂಪುರವರ 121ನೇ ಜನ್ಮದಿನೋತ್ಸವ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಭಾಷಣಕಾರರು: ವಿದ್ವಾಂಸ ಪ್ರೊ.ಎಚ್.ಎಸ್.ಹರಿಶಂಕರ್, ಮುಖ್ಯ ಅತಿಥಿಗಳು: ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಬಹುಮಾನ ವಿತರಣೆ: ಎ.ಪಿ.ನಾಗೇಶ್, ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕ ಜವರೇಗೌಡ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮರಿಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಸ್ಥಳ: ವಿಶ್ವಮಾನವ ಉದ್ಯಾನವನ, ಗನ್‌ಹೌಸ್ ಎದುರು, ಸಂಜೆ 4ಕ್ಕೆ.

■ **ಶ್ರೀ ನಿಮಿಷಾಂಬಾ ಡ್ಯಾನ್ಸ್ ಪ್ರಮೋಟರ್ಸ್ :** ಹೆಜ್ಜೆ ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ, ಅತಿಥಿಗಳು: ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಉಪಾಧ್ಯಕ್ಷೆ ಶ್ರೀಮತಿ ಡಿ. ಅನಿತಾ ಸುರೇಂದ್ರ ಕುಮಾರ್, ಆಶಿಶ್ ಮೋಹನ್ ಜೋಕರ್, ಶ್ರೀಮತಿ ಶ್ರದ್ಧಾ ಅಮಿತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಿ.ಎಂ. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸ್ಥಳ:ಕರ್ನಾಟಕ ಕಲಾಮಂದಿರ, ಸಂಜೆ 5ಕ್ಕೆ.

■ **ವಾಗ್ಭಾರತಿ ವಿದ್ಯಾಸಂಸ್ಥೆ :** ಶಾಲಾ ವಾರ್ಷಿಕೋತ್ಸವ, ಬಸವಣ್ಣನವರ ಭಾವಚಿತ್ರ ಅನಾವರಣ : ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಎಚ್.ಡಿ. ಶೈಲಜಾ, ಅಧ್ಯಕ್ಷತೆ : ರಂಗಾಯಣ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ, ಮುಖ್ಯ ಅತಿಥಿಗಳು : ಐರನ್ ವುಮೆನ್ ಆಫ್ ಮೈಸೂರು ಡಾ. ಉಷಾ ಹೆಗಡೆ, ಸ್ಥಳ: ಶಾಲಾ ಆವರಣ, ಹೊಸಹುಂಡಿ, ಸಂಜೆ 5ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಮುಖ್ಯ ಅತಿಥಿಗಳು :ಹಿರಿಯ ರಂಗಕರ್ಮಿ ವೈ.ಎನ್. ಪುಟ್ಟಣ್ಣಯ್ಯ, ರಾಗ–ರಂಗ: ರಂಗ ಸಂಗೀತ ಪ್ರಾತ್ಯಕ್ಷಿಕೆ ನುಡಿ ಸುದರ್ಶನ್, ಚಂದ್ರಶೇಖರ್ ಆಚಾರ್–ಹಾರ್ಮೋನಿಯಂ, ರೋಶನ್ ಸೂರ್ಯ–ತಬಲ, ಸ್ಥಳ:208, ಎಸ್‌ಬಿಎಂ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಚಿಕ್ಕ ಹೆಜ್ಜಾಜಿ ಮಹದೇವ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ. ಎಸ್.ಕುಮಾರ್, ಎಂ.ಎ. ಶೋಭಾ, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ 'ಚಳಿಗಾಲದಲ್ಲಿ ಕಂಡುಬರುವ ಮೂಳೆ ಮತ್ತು ಕೀಲುಗಳಿಗೆ ಸಂಬಂಧಿಸಿದ ತೊಂದರೆಗಳು ಮತ್ತು ಚಿಕಿತ್ಸೆ' ಕುರಿತು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಕೆ.ಆರ್.ಆಸ್ಪತ್ರೆಯ ಕನ್ಸಲ್ಟಂಟ್ ಆರ್ಥೋಪೆಡಿಕ್ ಸರ್ಜನ್ ಡಾ.ಬಲರಾಮ್ ಪಾಟೀಲ್. ಎಂ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟ–ಕಥೆ ಹೇಳುತ್ತಾರೆ ಬಿ. ಜಿ.ಕವಿತಾ, 10.30 KRISH-TRISH and Balty boy ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕು ಚೆಲ್ಲುವ ಬಾನುಲಿ ಸರಣಿ', 10.45 ಮಕ್ಕಳ ಮಂಟಪ–ಸ್ವರತರಂಗ ತಂಡದ ಮಕ್ಕಳಿಂದ ಸಂಕ್ರಾಂತಿ ಕುರಿತ ಕಾರ್ಯಕ್ರಮ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಬಸವರಾಜಯ್ಯ ಮತ್ತು ಸಂಗಡಿಗರಿಂದ ಕೆಂಪಾಚಾರಿ ಕಥೆ, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಒಂದಾದ ಹೊಸ ಯುಗದ ಮೂಲಸೌಕರ್ಯಗಳು ಈ ಕುರಿತು ಮಾಹಿತಿ ನೀಡುತ್ತಾರೆ ನಿವೃತ್ತ ಅಧಿಕಾರಿ ಶರಶ್ಚಂದ್ರ ರಾನಡೆ ಅವರು, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಗೋಲ್ಡ್ ಮೆಡಲ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು. ಎಂ.ನಾಗರಾಜ್ ಮತ್ತು ಮೈಸೂರು ಎಂ.ಮಂಜುನಾಥ್–ಯುಗಳ ವೈಯೋಲಿನ್ ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ವಿದುಷಿ. ಸುಲೇಖ ಭಟ್–ಹಾಡುಗಾರಿಕೆ

■ **ಸಂಗೀತ ಪ್ರಿಯರ ಬಳಗ :** ಕನ್ನಡ ಚಲನಚಿತ್ರ ಗೀತ ಗಾಯನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5ಕ್ಕೆ

■ **ಚಿದಂಬರ ನಟೇಶ ನಾಟ್ಯ ಶಾಲೆ ಟ್ರಸ್ಟ್:** ನೃತ್ಯ ಆರಾಧನಾ 2024–25, ಶಾಸ್ತ್ರೀಯ ಭರತನಾಟ್ಯ ಮತ್ತು ಹಿರಿಯ ಕಲಾವಿದರಿಗೆ ಸನ್ಮಾನ ಕಾರ್ಯಕ್ರಮ, ಉದ್ಘಾಟನೆ: ಮಾಜಿ ಸಿಂಡಿಕೇಟ್ ಸದಸ್ಯ ಡಾ.ಚಂದ್ರಶೇಖರ್, ಅಧ್ಯಕ್ಷತೆ: ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಮಂಡ್ಯ, ಕಾರ್ಯದರ್ಶಿ ಡಾ.ಈ.ಸಿ.ನಿಂಗರಾಜು, ಉಪಸ್ಥಿತರು: ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಡಾ. ನೀಲಾಂಬಿಕಾ, ಕನ್ನಡ ಉಪನ್ಯಾಸಕ ಡಾ.ಎನ್.ಗಜೇಂದ್ರ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಜ್ಞಾನಸರೋವರ ಇಂಟರ್‌ನ್ಯಾಷನಲ್ ಸ್ಕೂಲ್ :** ಸಂಸ್ಥಾಪಕರ ದಿನಾಚರಣೆ, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಸುಧಾಕರ್ ಎಸ್. ಶೆಟ್ಟಿ, ಸ್ಥಳ: ಶಾಲೆ ಆವರಣ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಕಲಾಸಂದೇಶ ಪ್ರತಿಷ್ಠಾನ :** ಸಂಜೆ 6 ರಿಂದ ನೃತ್ಯೋಪಾಸನ–2025, ಸಂಜೆ 6 ರಿಂದ ವಿದುಷಿ ಶ್ರೀಮತಿ ಮೇಘಾ ಪಿ. ರಾವ್ ಅವರಿಂದ ಭರತನಾಟ್ಯ ಮಾರ್ಗ ಪ್ರಸ್ತುತಿ, ಸಂಜೆ 7 ರಿಂದ ಸಂಭವಾಮಿ ಯುಗೇ ಯುಗೇ ನೃತ್ಯರೂಪಕ ಪ್ರಸ್ತುತಿ, ಕೆ. ಸಂದೇಶ್ ಭಾರ್ಗವ್ ಹಾಗೂ ಹರಿಕೃಷ್ಣನ್–ನಟ್ಟುವಾಂಗ, ವಿದ್ವಾನ್ ರಘುನಂದನ್ –ಹಾಡುಗಾರಿಕೆ, ವಿದ್ವಾನ್ ವಿಕ್ರಮ್ ಭಾರದ್ವಾಜ್ – ಮೃದಂಗ, ವಿದ್ವಾನ್ ಕೆ. ಮುರಳೀಧರ್ ಉಡುಪಿ–ಕೊಳಲು, ವಿದ್ವಾನ್ ಎಂ.ಡಿ. ಅರ್ಜುನ್–ಪಿಟೀಲು, ವಿದ್ವಾನ್ ಎಚ್.ಎಲ್. ಅನಂತಕೃಷ್ಣಸ್ವಾಮಿ – ರಿದಂ ಪ್ಯಾಡ್, ಸ್ಥಳ : ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ.ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಶ್ರೀ ಮಹಾಜನ ಸಭಾ :** ಧನುರ್ಮಾಸದ ಪ್ರಯುಕ್ತ ಶ್ರೀ ವೈಷ್ಣವ ಭಕ್ತಪರಾಯಣೆ ಅಂಡಾಳ್ (ಗೋದಾದೇವಿ) ವಿರಚಿತ ಮೇಲುಕೋಟೆ ಶ್ರೀ ಮುಡುಂಬೆ ರಾಮಾನುಜನ್ ಅವರಿಂದ ತಿರುಪ್ಪಾವೈ ಪಾಶುರಗಳ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 630 ರಿಂದ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ 'ಮೈ ಫ್ಯಾಮಿಲಿ' ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ್ ಮಂದಾರ್ತಿ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ರಂಗರಥ, ಸಂಚಲನ :** ಇದ್ದಾಗ ನಿಮ್ದು ಕದ್ದಾಗ ನಮ್ದು ನಾಟಕ ಪ್ರದರ್ಶನ, ನಿರ್ದೇಶನ : ಆಸಿಫ್ ಕ್ಷತ್ರಿಯ, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ಸ್ವಾಮಿ ವಿವೇಕಾನಂದರ 163ನೇ ಜಯಂತ್ಯೋತ್ಸವ ಆಚರಣೆ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಸಂಸದ ಯದುವೀರ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ ಅಧ್ಯಕ್ಷ ಡಿ.ಮಾದೇಗೌಡ, ದಿಕ್ಸೂಚಿ ಭಾಷಣ : ನಿತ್ಯಾನಂದ ವಿವೇಕವಂಶಿ, ಸ್ಥಳ: ವಿವೇಕಾನಂದ ವೃತ್ತ, ವಿವೇಕಾನಂದನಗರ, ಸಂಜೆ 7ಕ್ಕೆ.

ಮಕ್ಕಳು, ಪೋಷಕರ ಸಂಭ್ರಮದ ನಡುವೆ

ಬಿವಿಬಿ ಶಾಲೆಯ 19ನೇ ವಾರ್ಷಿಕೋತ್ಸವ 'ಭವನೋತ್ಸವ' ಅದ್ಧೂರಿ ಆಚರಣೆ

● ಪೋಷಕರ ಮನಸೆಳೆದ ಮಕ್ಕಳ ನೃತ್ಯ ಪ್ರದರ್ಶನ ● ದೇಶಪ್ರೇಮ ಸಾರುವ ಸಮೂಹ ಗಾಯನ ● ಮಕ್ಕಳ ಉಜ್ವಲ ಭವಿಷ್ಯಕ್ಕೆ ಮುನ್ನುಡಿಯಾದ ಮಹನೀಯರ ಹಿತನುಡಿ

ಮೈಸೂರು, ಜ.11(ಎಂಕೆ)– ಭಾರತೀಯ ಕಲೆ, ಸಾಹಿತ್ಯ, ಸನಾತನ ಸಂಸ್ಕೃತಿ, ಅಪ್ರತಿಮ ಪ್ರತಿಭೆಗಳ ಕಲಿಕಾ ಪ್ರೌಢಿಮೆಯ ಅನಾವರಣ. ಜೊತೆಗೆ ಮಕ್ಕಳ ಮನಸ್ಸಿನಲ್ಲಿ ಮೂಡಿದ ಅದ್ಭುತ ಕಲ್ಪನೆಗಳ ಪ್ರದರ್ಶನದ ಮೂಲಕ ಮೈಸೂರಿನ ಭಾರತೀಯ ವಿದ್ಯಾ ಭವನ (ಬಿವಿಬಿ) ಶಾಲೆಯ 19ನೇ ವಾರ್ಷಿಕೋತ್ಸವದ 'ಭವನೋತ್ಸವ 2024–25' ಅದ್ಧೂರಿಯಾಗಿ ನೆರವೇರಿತು.

ಮೈಸೂರಿನ ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಶನಿವಾರ ಮುಸ್ಸಂಜೆಯಲ್ಲಿ ಪಳಪಳನೆ ಹೊಳೆಯುವ, ಕಣ್ಮನ ಸೆಳೆಯುವ ವಸ್ತ್ರವಿನ್ಯಾಸದೊಂದಿಗೆ ಕಂಗೊಳಿಸುತ್ತಿದ್ದ ವಿದ್ಯಾರ್ಥಿಗಳ ಸಮೂಹ ಹಸಿರು ವನದ ನಡುವೆ ಸಂಗೀತ–ನೃತ್ಯದೋಕುಳಿ ನಡೆಸಿ ಭವನೋತ್ಸವಕ್ಕೆ ಮೆರುಗು ತಂದರು. ಹಾಗೆಯೇ ತಮ್ಮಲ್ಲಿನ ಕೌಶಲ್ಯಗಳನ್ನು ಅನಾವರಣಗೊಳಿಸಿ ಕೀರ್ತಿ ಪತಾಕೆ ಹಾರಿಸುವ ಮೂಲಕ ತಮ್ಮ ತಂದೆ–ತಾಯಿ ಮತ್ತು ಪೋಷಕರ ಮೊಗದಲ್ಲಿ ಮಂದಹಾಸ ಮೂಡಿಸಿದರು.

ಆರಂಭದಲ್ಲಿ ವೇದಿಕೆಗೆ ಬಿಳಿ ಮತ್ತು ಕಪ್ಪು ಬಣ್ಣದ ವಸ್ತ್ರದೊಂದಿಗೆ ಆಗಮಿಸಿದ ವಿದ್ಯಾರ್ಥಿಗಳ ತಂಡ, ಖ್ಯಾತ ಕವಿ ಚನ್ನವೀರ ಕಣವಿ ರಚಿತ 'ವಿಶ್ವ ವಿನೂತನ ವಿದ್ಯಾಚೇತನ ಸರ್ವ ಹೃದಯ ಸಂಸ್ಕಾರಿ ಜಯ ಭಾರತೀ', ಸರ್ವ ಶಿಕ್ಷಾ ಅಭಿಯಾನದ 'ಸ್ಕೂಲ್ ಚಲೇ ಹಮ್' ಹಿಂದಿ ಹಾಡು ಹಾಗೂ 'ಯು ಮೇಡ್ ಮಿ ಎ ಬಿಲಿವರ್' ಸುಪ್ರಸಿದ್ಧ ಇಂಗ್ಲಿಷ್‌ನ ಪ್ರೇರಣಾದಾಯಕ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಭಾರತೀಯತೆಯ ಅಭಿಮಾನ, ಶಾಲಾ ಕಲಿಕೆ, ನಂಬಿಕೆ ಮತ್ತು ಆತ್ಮವಿಶ್ವಾಸದ ಮಹತ್ವ ಸಾರಿದರು.

ನಂತರ ಎಲ್‌ಕೆಜಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು ಹತ್ತಾರು ಬಗೆಯ ಸಂಗೀತ ಸಂಯೋಜನೆಗಳಿಗೆ ಮನಮೋಹಕವಾಗಿ ನೃತ್ಯ ಪ್ರದರ್ಶನ ನೀಡುವ ಮೂಲಕ ಕುಣಿದು ಕುಪ್ಪಳಿಸಿದರಲ್ಲದೆ ಸಡಗರ–ಸಂಭ್ರಮದಲ್ಲಿ ಮಿಂದೆದ್ದರು. ನಿರೂಪಣೆ, ವಂದನಾರ್ಪಣೆ, ಗಣ್ಯರನ್ನು ಸ್ವಾಗತಿಸುವಿಕೆಯಲ್ಲೂ ಅತ್ಯಂತ ಶಿಸ್ತು–ಸಂಯಮದಿಂದ ಭಾಗವಹಿಸಿ ನೆರೆದಿದ್ದವರ ಗಮನ ಸೆಳೆದರು. ಹಾಗೆಯೇ ವೇದ ಪಠಣದ ಸನಾತನ ಸಂಸ್ಕೃತಿಯ ಹಿರಿಮೆ ಹೆಚ್ಚಿಸಿದರು.

ಶಾಲಾ ವೆಬ್‌ಸೈಟ್ ಉದ್ಘಾಟನೆ: ಇದೇ ವೇಳೆ ಆನ್‌ಲೈನ್ ಮೂಲಕ ಭಾರತೀಯ ವಿದ್ಯಾ ಭವನದ ಎಲ್ಲಾ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಮಾಹಿತಿ ಲಭಿಸುವ ಶಾಲೆಯ ವೆಬ್‌ಸೈಟ್ ಅನ್ನು ಉದ್ಘಾಟಿಸಿದ ಮೈಸೂರು ಬಿವಿಬಿ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು, ಭಾರತೀಯ ವಿದ್ಯಾ ಭವನ ಭಾರತೀಯತೆ ಹಾಗೂ ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಸಾಗುತ್ತಿದ್ದು, ಶಾಲೆಯ ಎಲ್ಲಾ ಶೈಕ್ಷಣಿಕ ಮಾಹಿತಿಯನ್ನು ಆನ್‌ಲೈನ್ ಮೂಲಕ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಮಕ್ಕಳ ಭವಿಷ್ಯದ ಜವಾಬ್ದಾರಿ ಶಿಕ್ಷಕರು ಮತ್ತು ಪೋಷಕರ ಮೇಲಿದೆ: ಭವನೋತ್ಸವದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಧಾನಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮಾತನಾಡಿ, ಯಾವುದೋ ಊರಿನ ಜಾತ್ರೆಯಲ್ಲಿ ಬಲೂನ್ ಮಾರುತ್ತಿದ್ದವನ ಬಳಿಗೆ ಹೋದ ಚಿಕ್ಕ ಹುಡುಗ, ನೋಡಿ ನಿಮ್ಮ ಬಳಿ ಇರೋ ಆ ಬಿಳಿ ಬಣ್ಣದ ಬಲೂನ್ ಮೇಲೋಗುತ್ತಾ ಅಂತ ಕೇಳಿದ. ಅದಕ್ಕೆ ಬಲೂನ್ ವ್ಯಾಪಾರಿ ಹೌದಪ್ಪ ಹೋಗುತ್ತೆ ಎಂದ. ಹಾಗೆಯೇ ಆ ಹುಡುಗ ಪಕ್ಕದಲ್ಲಿರುವ ಹಳದಿ ಮತ್ತು ಪಿಂಕ್ ಬಣ್ಣದ ಬಲೂನ್ ಕೂಡ ಮೇಲೋಗುತ್ತಾ ಎಂದಿದ್ದಕ್ಕೆ, ಬಲೂನ್ ವ್ಯಾಪಾರಿ... ನೋಡು ಮಗು ಬಲೂನ್‌ನಲ್ಲಿ ಬಣ್ಣ ಮುಖ್ಯ ಅಲ್ಲ. ಬಲೂನ್‌ಗಳ ಒಳಗಡೆ ಏನನ್ನು ತುಂಬಿಸಿದ್ದೇವೆಯೋ ಅದರ ಆಧಾರದ ಮೇಲೆ ಬಲೂನ್ ಮೇಲೆ ಹೋಗುತ್ತೆ ಎಂದನಂತೆ... ಈ ಕತೆ ನಮ್ಮ ಮಕ್ಕಳು, ಪೋಷಕರು ಹಾಗೂ ಶಿಕ್ಷಕರಿಗೆ ಅನ್ವಯಿಸುತ್ತದೆ. ಶಾಲಾ–ಕಾಲೇಜಿಗೆ ಬರುವ ನಮ್ಮ ಮಕ್ಕಳ ಉಜ್ವಲ ಭವಿಷ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಅವರ ಸ್ಮೃತಿಯೊಳಗಡೆ ಏನನ್ನು ತುಂಬುತ್ತೇವೆ ಎಂಬುದರ ಮೇಲೆ ಅವರ ಭವಿಷ್ಯ ಬೆಳಗುತ್ತದೆ. ಹಾಗಾಗಿ ಶಿಕ್ಷಕರು, ಪೋಷಕರು ನಮ್ಮ ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಜವಾಬ್ದಾರಿ ನಿರ್ವಹಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಕ್ಕಳ ಸರ್ವಾಂಗೀಣ ಪ್ರಗತಿಗೆ ನೆರವು: ಮೈಸೂರು ಉತ್ತರದ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ ಮಾತನಾಡಿ, ಭಾರತೀಯ ವಿದ್ಯಾಭವನ ಕೇವಲ ಪಠ್ಯ ವಿಷಯವಲ್ಲದೆ ಪಠ್ಯೇತರ ಚಟುವಟಿಕೆಗಳ ಕಲಿಸುವ ಮೂಲಕ ಮಕ್ಕಳ ಸರ್ವಾಂಗೀಣ ಪ್ರಗತಿಗೆ ನೆರವಾಗುತ್ತಿದೆ. ಈ ಶಾಲೆಯಲ್ಲಿ ವಿದ್ಯಾರ್ಥಿಗಳು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವ ನಿದರ್ಶನಗಳಿವೆ. ಕಳೆದ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ ಜಿಲ್ಲೆಯ 23 ಶಾಲೆಗಳ ಪೈಕಿ ಭಾರತೀಯ ವಿದ್ಯಾ ಭವನವೂ ಒಂದಾಗಿದ್ದು, ರಾಜ್ಯದಲ್ಲಿ 3ನೇ ಸ್ಥಾನವನ್ನು ಪಡೆದುಕೊಂಡಿತ್ತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಭಿನಂದನೆ: ಕಾರ್ಯಕ್ರಮದ ನಡುವೆ ಭಾರತೀಯ ವಿದ್ಯಾಭವನದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ಗಣನೀಯ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಅಭಿನಂದಿಸಲಾಯಿತು. ಗಣಿತ ವಿಷಯದಲ್ಲಿ ರಾಷ್ಟ್ರಮಟ್ಟದ ಸಾಧನೆ ಮಾಡಿರುವ ಯುಕೆಜಿ ಪುಟಾಣಿ ಎಂ.ಕೋಮಲ್, ಕ್ಷಣಾರ್ಧದಲ್ಲಿ ಹತ್ತಾರು ಲೆಕ್ಕಗಳಿಗೆ ಸರಿಯುತ್ತರ ನೀಡಿದ್ದನ್ನು ಕಂಡು ನೆರೆದಿದ್ದವರು ನಿಬ್ಬೆರಗಾದರು. ಕಳೆದ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 623 ಅಂಕ ಪಡೆದ ಎಸ್.ಜಾನವಿ, 621 ಅಂಕ ಪಡೆದ ಎಸ್.ಪ್ರಗತಿ, 619 ಅಂಕ ಪಡೆದ ಎಸ್.ಮೋಹಿತ್, 617 ಅಂಕ ಪಡೆದ ವೈಗಾನಶ್ರೀ, ಬಿ.ಎಲ್.ಶ್ರೇಯಸ್ ಹಾಗೂ ಕೆ.ವಿಸ್ಮಯ್‌ಗೆ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಹಾಗೆಯೇ ಶಾಲೆಯ ವಿವಿಧ ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿಗಳಿಗೂ ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಭಾರತೀಯ ವಿದ್ಯಾಭವನದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಪ್ರಾಂಶುಪಾಲರಾದ ಎಸ್.ಲೇಖಾ ನಾಯರ್ ಉಪಸ್ಥಿತರಿದ್ದರು.





ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಶನಿವಾರ ನಡೆದ ಮೈಸೂರಿನ ಭಾರತೀಯ ವಿದ್ಯಾ ಭವನ(ಬಿವಿಬಿ) ಶಾಲೆಯ 19ನೇ ವಾರ್ಷಿಕೋತ್ಸವದ 'ಭವನೋತ್ಸವ 2024–25' ಅನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. (ಎಡದಿಂದ) ಶಾಲೆಯ ಪ್ರಾಂಶುಪಾಲರಾದ ಎಸ್.ಲೇಖಾ ನಾಯರ್, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಬಿವಿಬಿ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ವಿಧಾನಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮೈಸೂರು ಉತ್ತರ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ, ಖಜಾಂಚಿ ಎ.ಟಿ.ಭಾಷ್ಯಂ ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ಪ್ರೇಕ್ಷಕ ಸಮೂಹವನ್ನು ಕಾಣಬಹುದು.

ಇನ್ನು 61 ದಿನಗಳಷ್ಟೇ ಬಾಕಿ...!

ಈಗಾಗಲೇ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳಾಪಟ್ಟಿ ಪ್ರಕಟವಾಗಿದೆ. ಮಾ.21 ರಿಂದ ಪ್ರಾರಂಭವಾಗಲಿದ್ದು, ಇನ್ನು 61 ದಿನಗಳಷ್ಟೇ ಬಾಕಿ ಉಳಿದಿದ್ದು, ಪಠ್ಯೇತರ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿ, ಇರುವಷ್ಟು ದಿನಗಳನ್ನು ಓದಿಗಾಗಿ ಮೀಸಲಿಡಿ. ಆಸಕ್ತಿ ಮತ್ತು ಶ್ರದ್ಧೆಯಿಂದ ಓದಿ. ಕಳೆದ ವರ್ಷದಂತೆ ಈ ವರ್ಷವೂ ಭಾರತೀಯ ವಿದ್ಯಾಭವನ ಶಾಲೆಯ ಮಕ್ಕಳು 625ಕ್ಕೆ 625 ಅಂಕಗಳನ್ನು ಪಡೆದುಕೊಳ್ಳಲಿ ಎಂಬುದು ಇಲಾಖೆಯ ಆಶಯವಾಗಿದೆ.

– ಎಸ್.ರೇವಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಮೈಸೂರು ಉತ್ತರ

ಶಿಕ್ಷಣವೇ ದೊಡ್ಡ ಶಕ್ತಿ...

ದೇಶದ ಪ್ರತಿಯೊಬ್ಬರಿಗೂ ಬೇಕಾಗಿರುವುದು ಶಿಕ್ಷಣ. ಶಿಕ್ಷಣಕ್ಕಿಂತ ದೊಡ್ಡ ಶಕ್ತಿ ಮತ್ತೊಂದಿಲ್ಲ. ಹಾಗಾಗಿ ಪೋಷಕರು, ಶಿಕ್ಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಯಾವುದೇ ಕಾರಣಕ್ಕೂ ಯಾರೂ ಸಹ ಶಿಕ್ಷಣದಿಂದ ವಂಚಿತರಾಗಬಾರದು. ಎಲ್ಲರಿಗೂ ಶಿಕ್ಷಣ ದೊರೆತರೆ ಮಾತ್ರವೇ ದೇಶದ ಅಭಿವೃದ್ಧಿ ಸಾಧ್ಯ.

- ಕೆ.ಹರೀಶ್‌ಗೌಡ, ಶಾಸಕ



ಪುಟಾಣಿ ಮಕ್ಕಳ ನೃತ್ಯ ಪ್ರದರ್ಶನವನ್ನು ಕಾಣಬಹುದು.

ಮಕ್ಕಳನ್ನು ಕುಟುಂಬ, ಸಮಾಜ ಮತ್ತು ದೇಶದ ಆಸ್ತಿಯನ್ನಾಗಿಸಿ...

ನಮ್ಮ ಮಕ್ಕಳನ್ನು ಇಡೀ ಜಗತ್ತು ಸ್ವೀಕಾರ ಮಾಡಬಲ್ಲ ಹಾಗೂ ಕುಟುಂಬ, ಸಮಾಜ ಮತ್ತು ದೇಶದ ಆಸ್ತಿಯನ್ನಾಗಿ ಪರಿವರ್ತಿಸುವ ಮಹತ್ವದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅದಕ್ಕಾಗಿ ಶಾಲೆ ಮುಗಿಸಿಕೊಂಡು ಬಂದ ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ಮನೆಯಲ್ಲಿದೆಯೇ... ನಾವುಗಳು ಮನೆಯಲ್ಲಿ ಮಕ್ಕಳಿಗೆ ಆದರ್ಶವಾಗಿದ್ದೇವೆಯೇ... ಉತ್ತಮ ಮೌಲ್ಯಗಳೊಂದಿಗೆ ನಾವು ಜೀವಿಸುತ್ತಿದ್ದೇವೆಯೇ... ಯುವ ಸಮೂಹವನ್ನು ಕೇವಲ ಸಂಖ್ಯೆಗೆ ಎಂದು ಬೆಳೆಸುತ್ತಿದ್ದೇವೆಯೇ... ಅಥವಾ ಇಡೀ ಜಗತ್ತು ಸ್ವೀಕರಿಸುವ ಮಾನವ ಸಂಪನ್ಮೂಲವಾಗಿ ರೂಪಿಸುವ ಪ್ರಯತ್ನ ಮಾಡುತ್ತಿದ್ದೇವೆಯೇ ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸಿ, ಎಚ್ಚೆತ್ತುಕೊಳ್ಳಬೇಕಿದೆ ಮಕ್ಕಳಿಗೆ ಮನೆಯಲ್ಲಿ ಮತ್ತು ಶಾಲೆಯಲ್ಲಿ ಒಳ್ಳೆಯದನ್ನು ಹೇಳಿಕೊಟ್ಟು, ಆ ಒಳ್ಳೆಯದರ ಜೊತೆಗೆ ಹೆಜ್ಜೆ ಹಾಕುವುದನ್ನು ಕಲಿಸಿದರೆ ದೇಶದ ಆಸ್ತಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಭಾರತೀಯ ವಿದ್ಯಾಭವನದ ಶೈಕ್ಷಣಿಕ ಕಾರ್ಯಕ್ರಮಗಳು ಶ್ಲಾಘನೀಯ.

- ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ವಿಧಾನಪರಿಷತ್ ಮಾಜಿ ಸದಸ್ಯ

ಅಂತಾರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವಕ್ಕೆ ಚಾಲನೆ



ಮೈಸೂರಿನ ಕಲೆಮನೆ ಸಭಾಂಗಣದಲ್ಲಿ ನಡೆದ 50ನೇ ಅಂತಾರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದಲ್ಲಿ ವಿವಿಧ ಕಲಾಸಾಧಕರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜ.11(ಎಸ್‌ಬಿಡಿ)– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಮಂಚೇಗೌಡನಕೊಪ್ಪಲಿನ ಕಲೆಮನೆ ಸಭಾಂಗಣದಲ್ಲಿ ಆಯೋಜಿಸಿರುವ 50ನೇ ಅಂತಾರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಶ್ರೀಗಳು, ಸಂಗೀತ, ನೃತ್ಯ, ಸಾಹಿತ್ಯ ಒಂದಕ್ಕೊಂದು ಮಿಳಿತವಾಗಿವೆ. ಈ ಕಲಾ ಪ್ರಕಾರಗಳಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಬೇಕು. ಡಾ.ಕೆ.ಕುಮಾರ್, ಕಳೆದ ಮೂರು ದಶಕಗಳಿಗೂ ಮಿಗಿಲಾಗಿ ನೃತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಅಪಾರ ಸಾಧನೆ ಮಾಡಿದ್ದಾರೆ. ಜೊತೆಗೆ ಕೇಂದ್ರವನ್ನು ಸ್ಥಾಪಿಸಿ, ನೂರಾರು ಮಂದಿಗೆ ನೃತ್ಯ ತರಬೇತಿ ನೀಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಕೊಯಮತ್ತೂರಿನ ಪಳನಿಯಪ್ಪನ್ ಪಿಳ್ಳೈ, ಬೆಂಗಳೂರಿನ ಟೆಂಪಲ್ ಆರ್ಟ್ ಸಂಸ್ಥಾಪಕ ಸತ್ಯನಾರಾಯಣರಾಜು, ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಹಾಗೂ ಸುಗಮ ಸಂಗೀತ ಗಾಯಕ ಪ್ರೊ.ಎಸ್ ಮಲ್ಲಣ್ಣ, ರಸಿಕ ಡ್ಯಾನ್ಸ್ ಅಕಾಡೆಮಿಯ ಮಂಜುಳಾ ವಿಶ್ವನಾಥ್, ಶಿವಶಕ್ತಿ ನಾಟ್ಯ ಶಾಲೆಯ ಶ್ರದ್ಧಾ ಶಿವಪ್ರಕಾಶ್ ಅವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿದ್ದರು. ಕೇಂದ್ರದ ಸಂಸ್ಥಾಪಕ ಡಾ.ಕೆ.ಕುಮಾರ್, ಅಧ್ಯಕ್ಷೆ ಡಾ.ಜಿ.ಮಾಲತಿ, ಖಜಾಂಚಿ ಕೆ.ಎಂ.ಲೇಖಾ, ಜಂಟಿ ಕಾರ್ಯದರ್ಶಿ ಕೆ.ಎಂ.ನಿಧಿ ಆನಂದ್ ಮತ್ತಿತರರಿದ್ದರು. ನಂತರ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವಿದ್ಯಾರ್ಥಿಗಳು, ಪಳನಿಯಪ್ಪನ್ ಪಿಳ್ಳೈ, ಮಂಜುಳಾ ವಿಶ್ವನಾಥ್ ಹಾಗೂ ಶ್ರದ್ಧಾ ಶಿವಪ್ರಕಾಶ್ ಶಿಷ್ಯರು ಪ್ರತ್ಯೇಕವಾಗಿ ಭರತನಾಟ್ಯ ಪ್ರದರ್ಶಿಸಿದರು.

ಬೈಕ್ ಡಿಕ್ಕಿ: ಪಾದಚಾರಿ ಸಾವು



ಮೈಸೂರು, ಜ.11(ಎಸ್‌ಬಿಡಿ)– ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿರುವ ಘಟನೆ ಮೈಸೂರು ತಾಲೂಕಿನ ದೊಡ್ಡಹುಂಡಿಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ. ದೊಡ್ಡಹುಂಡಿ ಗ್ರಾಮದ ಮಾಲೇಗೌಡರ ಪುತ್ರ ಮಹದೇವು(55) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಶುಕ್ರವಾರ ರಾತ್ರಿ ತಮ್ಮ ದ್ವಿಚಕ್ರ ವಾಹನವನ್ನು ದಾರಿಪುರದ ಗ್ಯಾರೇಜ್‌ಗೆ ಬಿಟ್ಟು ಗ್ರಾಮಕ್ಕೆ ನಡೆದು ಹೋಗುವಾಗ ಬೈಕ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು. ಶನಿವಾರ ಬೆಳಗ್ಗೆ ವೈದ್ಯಕೀಯ ಪರೀಕ್ಷೆ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಜಯಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಾಮಪತ್ರ ಸಲ್ಲಿಕೆ



ಮೈಸೂರಿನ ಗಾಂಧಿಚೌಕದಲ್ಲಿರುವ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ 2025–2030 ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಪೈಲ್ವಾನ್ ಚಿಕ್ಕಪುಟ್ಟಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಮುಡಾ ಮಾಜಿ ಸದಸ್ಯ ಕೆ.ಮಾದೇಶ್, ಲಕ್ಷ್ಮೀನಾರಾಯಣ್, ಮಂಚಪ್ಪ, ಡಾ.ಲೋಕೇಶ್ ಇನ್ನಿತರರಿದ್ದರು

ವಿವೇಕಾನಂದರ ವಾಣಿಯಲ್ಲಿ ಸರ್ವಧರ್ಮಗಳ ಸಾರವಿದೆ

● ಹಿರಿಯ ಸಾಹಿತಿ ಬನ್ನೂರು ರಾಜು ಬಣ್ಣನೆ ● ಸ್ವಾಮಿ ವಿವೇಕಾನಂದರ ಜಯಂತಿ; ಯುವ ದಿನಾಚರಣೆ

ಮೈಸೂರು, ಜ.11(ಎಸ್‌ಬಿಡಿ)– ಸ್ವಾಮಿ ವಿವೇಕಾನಂದರ ವಾಣಿ ಎಂದರೆ ಸರ್ವಧರ್ಮಗಳ ಒಳಿತಿನ ಅಮೃತದಲ್ಲಿ ಅದ್ದಿ ತೆಗೆದ ನುಡಿಮಾಲೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

ಮೈಸೂರಿನ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಹಯೋಗದಲ್ಲಿ ಸರಸ್ವತಿಪುರಂನ ಶ್ರೀಕುವೆಂಪು ಪ್ರೌಢಶಾಲೆಯಲ್ಲಿ ಶನಿವಾರ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದರ ಜಯಂತಿ ಮತ್ತು ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ವಶಕ್ತಿ, ಸರ್ವವ್ಯಾಪಿ, ಸರ್ವಸ್ಪರ್ಶಿಯೂ ಆದ ವಿವೇಕಾನಂದರ ವಾಣಿಗಳು ಸರ್ವಧರ್ಮಗಳ ಒಳಿತಿನ ಅಮೃತದಲ್ಲಿ ಅದ್ದಿ ತೆಗೆದಂತಿವೆ. 1893ರ ಸೆಪ್ಟೆಂಬರ್ 11ರಂದು ಅಮೆರಿಕದ ಚಿಕಾಗೊ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರು 'ಅಮೆರಿಕದ ಸಹೋದರ, ಸಹೋದರಿಯರೇ' ಎಂದು ಭಾಷಣ ಆರಂಭಿಸಿದ್ದು ಇನ್ನೂ ಮಾರ್ದನಿಸುತ್ತಲೇ ಇದೆ ಎಂದರು.

ವಿವೇಕಾನಂದರು ಸರ್ವ ಜೀವರಾಶಿಗಳಿಗೂ ಒಳಿತನ್ನೇ ಬಯಸಿದವರು. ಅದರಲ್ಲೂ ಸತ್ತಂತಿಹ ಮನಸ್ಸುಗಳನ್ನು ಬಡಿದೆಚ್ಚರಿಸಿ ಜಾಗೃತಿಗೊಳಿಸಿದರು. ತಮ್ಮ ಅಲ್ಪಾಯುಷ್ಯದಲ್ಲೇ ಅವರು ಅಗಾಧವಾದ ಸಾಧನೆ ಮಾಡಿ ವಿವೇಕ ಪ್ರಭೆಯಾಗಿ ದೇಶಕ್ಕೆ ಮುಂಬೆಳಕು ನೀಡಿದರು. ಯುವ ಶಕ್ತಿಯ ಬಗ್ಗೆ ಅಪಾರ ನಂಬಿಕೆ ಇಟ್ಟಿದ್ದರು. ಯುವ ಸಮುದಾಯವನ್ನು ಉತ್ತೇಜಿಸಿದರೆ ಭವಿಷ್ಯದಲ್ಲಿ ಅವರೇ ದೇಶ ಕಟ್ಟುತ್ತಾರೆ ಎಂದಿದ್ದರು. ದೈಹಿಕ ಮತ್ತು ಮಾನಸಿಕ ಸದೃಢತೆ ಜೊತೆಗೆ ನಿರ್ಭೀತ ನಡೆ ಇದ್ದರೆ ನೀವು ಏನನ್ನಾದರೂ ಸಾಧಿಸಬಲ್ಲಿರಿ ಎಂದು ಯುವಜನರನ್ನು ಹುರಿದುಂಬಿಸುತ್ತಿದ್ದರು ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದರ 'ಏಳಿ, ಎದ್ದೇಳಿ, ಎಚ್ಚರಗೊಳ್ಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಕರೆ ದೇಶಾದ್ಯಂತ ಇಂದಿಗೂ ಅನುರಣಿಸುತ್ತಿದೆ. ಅವರಿಗೆ ಧರ್ಮವು ಕೇವಲ ಸಿದ್ಧಾಂತವಾಗಿರಲಿಲ್ಲ. ದಾನವರನ್ನು ಮಾನವರನ್ನಾಗಿಸುವ ಸನ್ಮಾರ್ಗವಾಗಿತ್ತು. ಉದಾತ್ತ ಚಿಂತನೆ ಹಾಗೂ ಸರಳ ಬದುಕಿಗೆ ಬಹುದೊಡ್ಡ ನಿದರ್ಶನವಾಗಿದ್ದರು. ರಾಷ್ಟ್ರೀಯ ಸಂತ, ಆಧ್ಯಾತ್ಮಿಕ ಚೇತನ, ವೀರ ಸನ್ಯಾಸಿ ವಿವೇಕಾನಂದರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಮಾತನಾಡಿದರು. ಇದೇ ವೇಳೆ ಕಾರ್ಯಕ್ರಮದ ಅಂಗವಾಗಿ ನಡೆಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಬಿ.ಆರ್.ಜಿತ್ತನ್, ಎಲ್.ರೋಹನ್, ನಂದನ್ ಕುಮಾರ್, ಭವ್ಯಶ್ರೀ, ಸ್ಪರ್ಶ, ಸಾಹಿರಾಗೆ ಬಹುಮಾನ ವಿತರಿಸಲಾಯಿತು. ಶ್ರೀ ಕುವೆಂಪು ಪ್ರೌಢಶಾಲೆಯ ಹಿರಿಯ ಶಿಕ್ಷಕಿ ಭವ್ಯ, ಶಿಕ್ಷಕರಾದ ಯೂನಸ್ ಶರೀಫ್, ಕೃಷ್ಣ, ಮಧು, ನೇತ್ರಾ ಹಾಗೂ ಚಿತ್ರಕಲಾ ಶಿಕ್ಷಕ ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.



ಸರಸ್ವತಿಪುರಂನಲ್ಲಿರುವ ಶ್ರೀ ಕುವೆಂಪು ಪ್ರೌಢಶಾಲೆಯಲ್ಲಿ ವಿವೇಕಾನಂದರ ಜಯಂತಿ ಆಚರಿಸಲಾಯಿತು.

ರಾಮಲಲ್ಲಾ ಪ್ರತಿಷ್ಠಾಪನೆಯ ಮೊದಲ ವಾರ್ಷಿಕೋತ್ಸವ

ಅಯೋಧ್ಯೆ ಬಾಲರಾಮನಿಗೆ ಮಹಾ ಅಭಿಷೇಕ, ಭಕ್ತರಿಗೆ ಮಂಗಳ ದರ್ಶನ

ಅಯೋಧ್ಯೆ, ಜ.11– ಉತ್ತರಪ್ರದೇಶದ ಅಯೋಧ್ಯೆ ರಾಮಮಂದಿರದಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆಯ ಮೊದಲ ವಾರ್ಷಿಕೋತ್ಸವ ಸಂಭ್ರಮ ಮನೆ ಮಾಡಿದೆ. ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ರಾಮಮಂದಿರದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ಜರುಗಿವೆ.

ಪ್ರತಿಷ್ಠಾ ದ್ವಾದಶಿಯಂದು ಬಾಲರಾಮ ಮೂರ್ತಿಗೆ ಮಹಾ ಅಭಿಷೇಕ ಮಾಡಲಾಯಿತು. ನಂತರ ಮಂಗಳ ದರ್ಶನ ನಡೆಯಿತು. ಈ ವಿಶೇಷ ದಿನದಂದು ರಾಮಮಂದಿರವನ್ನು ಭವ್ಯವಾಗಿ ಅಲಂಕರಿಸಲಾಗಿತ್ತು. ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ರಾಮಲಲ್ಲಾನ ದರ್ಶನ ಪಡೆದರು.

ಅಯೋಧ್ಯೆಯಲ್ಲಿ ಹಬ್ಬದ ವಾತಾವರಣವೇ ಇತ್ತು. ಭಕ್ತರು ನೃತ್ಯ ಮಾಡುತ್ತಾ, ಹಾಡುತ್ತಾ ಮೆರವಣಿಗೆಯಲ್ಲಿ ಸಾಗಿ ರಾಮಲಲ್ಲಾನ ಆಸ್ಥಾನಕ್ಕೆ ಬಂದ ದೃಶ್ಯಗಳು ಕಂಡುಬಂದವು. ಎಲ್ಲರೂ ಶ್ರೀರಾಮನ ಭಕ್ತಿಯಲ್ಲಿ ಮಿಂದೆದ್ದರು. ಆರಾಧ್ಯ ದೈವ ರಾಮನ ದರ್ಶನಕ್ಕೆ ಕುಟುಂಬ ಸಮೇತರಾಗಿ ಭಕ್ತರು ಆಗಮಿಸಿದ್ದರು.

ಧಾರ್ಮಿಕ ಕಾರ್ಯಗಳಲ್ಲಿ, ದೇವರಿಗೆ ನೈವೇದ್ಯ ಅರ್ಪಿಸಲಾಯಿತು. ಇದಾದ ನಂತರ ಮಹಾ ಮಂಗಳಾರತಿ ಮಾಡಲಾಯಿತು. ನಂತರ ದೇವಾಲಯದ ಬಾಗಿಲುಗಳನ್ನು ಮುಚ್ಚಲಾಯಿತು. ರಾಜಭೋಗ್ ಪ್ರಕ್ರಿಯೆ ಪೂರ್ಣಗೊಂಡ ನಂತರ, ರಾಮಲಲ್ಲಾ ವಿರಾಜಮಾನನಾಗಿರುವ ಗರ್ಭಗುಡಿಯ ಬಾಗಿಲು ತೆರೆಯಲಾಯಿತು. ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಅವರ ನೇತೃತ್ವದಲ್ಲಿ ಮಹಾ ಆರತಿ ನೆರವೇರಿಸಲಾಯಿತು. ಮಹಾ ಆರತಿಯಲ್ಲಿ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರಾಮಮಂದಿರ ಸಂಕೀರ್ಣದ ಅಂಗದ್ ತಿಲಾದಲ್ಲಿ ಪ್ರತಿಷ್ಠಾ ದ್ವಾದಶಿ ಸಮಾರಂಭವನ್ನು ಉದ್ಘಾಟಿಸಿದರು. ಬಳಿಕ ರಾಮ ಜನ್ಮಭೂಮಿ ಸಂಕೀರ್ಣದಲ್ಲಿ ಸಂತರು ಮತ್ತು ಮಹಾಂತರೊಂದಿಗೆ ಅನ್ನ ಪ್ರಸಾದ ಸ್ವೀಕರಿಸಿದರು.

ಮೊದಲ ವಾರ್ಷಿಕೋತ್ಸವದ ಅಂಗವಾಗಿ ಅಯೋಧ್ಯೆಯಲ್ಲಿ 3 ದಿನಗಳ ಕಾಲ ಹತ್ತು ಹಲವು ಕಾರ್ಯಕ್ರಮಗಳು ನಡೆಯಲಿವೆ.

ರಾಮಮಂದಿರ ಅಲಂಕಾರಕ್ಕೆ 50 ಕ್ವಿಂಟಾಲ್ ಹೂಗಳನ್ನು ಬಳಸಲಾಗಿದೆ. ಬಾಲರಾಮನ ದರ್ಶನಕ್ಕೆ ಬರುವ ಭಕ್ತರಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಭದ್ರತಾ ದೃಷ್ಟಿಯಿಂದ ಎಲ್ಲೆಡೆ ಸಿಸಿಕ್ಯಾಮರಾ ಅಳವಡಿಕೆ ಮಾಡಲಾಗಿದೆ.

ದಿನಕ್ಕೆ 2 ಬಾರಿ ಅಗ್ನಿಹೋತ್ರ ಮಂತ್ರ ಪಠಣ: ಇಂದಿನಿಂದ ಮೂರು ದಿನಗಳ ಕಾಲ ಹಲವು ಕಾರ್ಯಕ್ರಮಗಳು ನಡೆಯಲಿವೆ. ಇದರ ಭಾಗವಾಗಿ ಶುಕ್ಲ ಯಜುರ್ವೇದದಿಂದ ಅಗ್ನಿಹೋತ್ರ ಮಂತ್ರಪಠಣ ಮಾಡಲಾಗುತ್ತದೆ. ಬೆಳಗ್ಗೆ 8 ರಿಂದ 11 ಹಾಗೂ ಮಧ್ಯಾಹ್ನ 2 ರಿಂದ 5 ಗಂಟೆವರೆಗೆ ಮಂತ್ರ ಪಠಣ ಮಾಡಲಾಗುತ್ತದೆ. ಇದರೊಂದಿಗೆ ಲಕ್ಷ ರಾಮ ರಕ್ಷಾ ಸ್ತೋತ್ರ ಮತ್ತು ಹನುಮಾನ್ ಚಾಲೀಸಾ ಹಾಗೂ 6 ಲಕ್ಷ ಶ್ರೀ ರಾಮ ಮಂತ್ರದ ಪಠಣ ಮಾಡಲಾಗುತ್ತದೆ. ಮಂದಿರದ ನೆಲಮಾಳಿಗೆಯಲ್ಲಿ ಪ್ರತಿದಿನ ಮಧ್ಯಾಹ್ನ 3 ಗಂಟೆಯಿಂದ 5 ಗಂಟೆವರೆಗೆ ರಾಗ ಸೇವೆ, ಸಂಜೆ 6 ಗಂಟೆಗೆ ಅಭಿನಂದನಾ ಗೀತ ಸೇವೆ ಶ್ರೀರಾಮನಿಗೆ ಅರ್ಪಣೆಯಾಗಲಿದೆ. ಮೊದಲ ಮಹಡಿಯಲ್ಲಿ ಸಂಗೀತ ಮಾನಸ ಪಠಣ ನಡೆಯಲಿದೆ.

ಶುಭ ಯೋಗಗಳು ಹಾಗೂ ದ್ವಾದಶಿ ತಿಥಿಯು 2025ರಲ್ಲಿ ಜನವರಿ 11 ರಂದು ಬಂದಿರುವುದರಿಂದ ಅಯೋಧ್ಯೆ ರಾಮಮಂದಿರದ ವಾರ್ಷಿಕ ಪ್ರಾಣ ಪ್ರತಿಷ್ಠಾಪನೆಯನ್ನು ಜನವರಿ 22ರ ಬದಲಾಗಿ ಜನವರಿ 11ರಂದು ಆಚರಿಸಲಾಗುತ್ತಿದೆ. ಈಗಾಗಲೇ ಅಯೋಧ್ಯೆಯ ರಾಮಮಂದಿರ ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದು, ಒಂದೊಂದೇ ಕಾರ್ಯಕ್ರಮಗಳು ನೆರವೇರುತ್ತಿವೆ.



ಶತಮಾನಗಳ ತ್ಯಾಗದ ಪ್ರತೀಕ ಅಯೋಧ್ಯೆ ರಾಮಮಂದಿರ

ಮೊದಲ ವಾರ್ಷಿಕೋತ್ಸವಕ್ಕೆ ಪ್ರಧಾನಿ ಮೋದಿ ಸ್ಮರಣೆ



ನವದೆಹಲಿ, ಜ.11– ಅಯೋಧ್ಯೆಯಲ್ಲಿ ನಿರ್ಮಿಸಲಾದ ಭವ್ಯವಾದ ರಾಮಮಂದಿರದಲ್ಲಿ ರಾಮಲಲ್ಲಾ ವಿಗ್ರಹದ ಪ್ರತಿಷ್ಠಾಪನೆಯ ಮೊದಲ ವಾರ್ಷಿಕೋತ್ಸವವನ್ನು ಬಹಳ ವೈಭವ ಮತ್ತು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಜನವರಿ 11ರಿಂದ 13ರವರೆಗೆ ರಾಮನಗರಿ ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾ ವಾರ್ಷಿಕೋತ್ಸವದ ಅದ್ಧೂರಿ ಆಚರಣೆ ನಡೆಯಲಿದೆ. ಅಯೋಧ್ಯೆಯಲ್ಲಿ ನಿರ್ಮಿಸಲಾದ ಭವ್ಯ ರಾಮಮಂದಿರದಲ್ಲಿ ರಾಮಲಲ್ಲಾ ವಿಗ್ರಹವನ್ನು ಸ್ಥಾಪಿಸಿದ ಮೊದಲ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲಾ ದೇಶವಾಸಿಗಳಿಗೆ ಶುಭಾಶಯಗಳನ್ನು ಕೋರಿದ್ದಾರೆ. ಇದರೊಂದಿಗೆ ಪ್ರಧಾನಿ ಮೋದಿ ರಾಮಮಂದಿರ ನಿರ್ಮಾಣಕ್ಕಾಗಿ ನಡೆದ ಶತಮಾನಗಳ ತ್ಯಾಗವನ್ನು ಸ್ಮರಿಸಿದರು.

ಅಯೋಧ್ಯೆಯ ರಾಮಮಂದಿರದ ಪ್ರಾಣ ಪ್ರತಿಷ್ಠೆಯ ಭವ್ಯ ಸಮಾರಂಭವು 2024ರ ಜನವರಿ 22ರಂದು ನಡೆದಿತ್ತು. ರಾಮಲಲ್ಲಾನ ಭವ್ಯ ವಿಗ್ರಹದ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಮುಖ ಆಚರಣೆಗಳನ್ನು ನೆರವೇರಿಸಿದ್ದರು. ರಾಮಮಂದಿರ ಉದ್ಘಾಟನೆಯ ಸಂದರ್ಭದಲ್ಲಿ, ದೇಶಾದ್ಯಂತದ ಗಣ್ಯ ವ್ಯಕ್ತಿಗಳು ಮತ್ತು ಸಾಮಾನ್ಯ ಜನರು ಶ್ರೀರಾಮನ ದರ್ಶನ ಪಡೆಯಲು ಮತ್ತು ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದರು. ಈಗ ರಾಮಮಂದಿರದ ಮೊದಲ ವಾರ್ಷಿಕೋತ್ಸವದ ಆಚರಣೆಯ ಸಂದರ್ಭದಲ್ಲಿ, ಪ್ರಧಾನಿ ಮೋದಿ ಟ್ವಿಟರ್‌ನಲ್ಲಿ ಪೋಸ್ಟ್ ಹಂಚಿಕೊಂಡು ಎಲ್ಲಾ ದೇಶವಾಸಿಗಳಿಗೆ ಶುಭಾಶಯ ಕೋರಿದ್ದಾರೆ.

ಅಯೋಧ್ಯೆಯಲ್ಲಿ ರಾಮಲಲ್ಲಾ ಸ್ಥಾಪನೆಯ ಮೊದಲ ವಾರ್ಷಿಕೋತ್ಸವದಂದು ಎಲ್ಲಾ ದೇಶವಾಸಿಗಳಿಗೆ ಶುಭಾಶಯಗಳು. ಶತಮಾನಗಳ ತ್ಯಾಗ, ತಪಸ್ಸು ಮತ್ತು ಹೋರಾಟದ ನಂತರ ನಿರ್ಮಿಸಲಾದ ಈ ದೇವಾಲಯವು ನಮ್ಮ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಶ್ರೇಷ್ಠ ಪರಂಪರೆಯಾಗಿದೆ. ಈ ದೈವಿಕ ಮತ್ತು ಭವ್ಯವಾದ ರಾಮಮಂದಿರವು ಅಭಿವೃದ್ಧಿ ಹೊಂದಿದ ಭಾರತದ ಸಂಕಲ್ಪವನ್ನು ಸಾಧಿಸುವಲ್ಲಿ ದೊಡ್ಡ ಸ್ಫೂರ್ತಿಯಾಗಲಿದೆ ಎಂದು ನನಗೆ ವಿಶ್ವಾಸವಿದೆ ಎಂದು ಪ್ರಧಾನಿ ಹೇಳಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಇರುವೆಯೊಂದು ಆನೆಯ ಬೆನ್ನೇರಿ ಸಾಗುತ್ತಿತ್ತು. ನಡುವೆ ಸೇತುವೆಯೊಂದು ಬಂತು.
ಇರುವೆ ಹೇಳಿತು : 'ಅಣ್ಣಾ... ಸೇತುವೆಗೆ ಭಾರ ಆಗುತ್ತಾ!
ನಾನೇನಾದ್ರೂ ಕೆಳಗೆ ಇಳಿಯಬೇಕಾ?'

ಮೈಸೂರು ಮಿತ್ರ

ಭಾನುವಾರ, 12 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಿನ್ನೆಯ ನೆನಪಲ್ಲಿ ಇಂದು ಜೀವಿಸಿದರೂ ನಾಳಿನ ಭರವಸೆಗಾಗಿ ಪ್ರಶ್ನೆ ಕೇಳುವುದನ್ನು ನಿಲ್ಲಿಸಬಾರದು.–ಐನ್‌ಸ್ಟೀನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧೈರ್ಯವಿದ್ದವನಿಗೆ ದೈವವೂ ಅನುಕೂಲ

ನಿಮ್ಮ ಪತ್ರಗಳು

■ ಕನಕದಾಸನಗರ –ನಂದಿ ವೃತ್ತದ ಬಳಿ ರಸ್ತೆ ಹಂಪ್ ಹಾಕಲು ಮನವಿ


ಮಾನ್ಯರೆ,

ಮೈಸೂರಿನ ಕನಕದಾಸ ನಗರದ ರಾಯಲ್ ಓಕ್ ಸಮೀಪದಿಂದ ನಂದಿ ವೃತ್ತದ ಮೂಲಕ ವರ್ತುಲ ರಸ್ತೆಗೆ ಸೇರುವ ರಸ್ತೆಯಲ್ಲಿ ವಾಹನದ ದಟ್ಟಣೆ ಮಿತಿ ಮೀರಿದೆ. ಟ್ರಾಫಿಕ್ ಪೊಲೀಸ್ ಕೆಇಬಿ ಸಮೀಪ ಯಾವಾಗಲೂ ನಿಂತಿರುತ್ತಾರೆ ಅಂತನೋ ಏನೋ ಹೆಲ್ಮೆಟ್ ಹಾಕದ ದ್ವಿಚಕ್ರ ಸವಾರರು, ಅಪ್ರಾಪ್ತ ವಯಸ್ಸಿನ ಸವಾರರು, ಇದೇ ರಸ್ತೆಯಲ್ಲಿ ಹೋಗುತ್ತಾರೆ. ಅದೂ ಕೂಡ ವಿಪರೀತ ವೇಗದಲ್ಲಿ ವಾಹನ ಚಲಾಯಿಸುತ್ತಾರೆ. ಕೆಲವರಂತೂ ಒಂದು ಕೈಯಲ್ಲಿ ಮೊಬೈಲ್ ಹಿಡಿದು ವಾಹನ ಚಲಾಯಿಸುತ್ತಾರೆ. ವರ್ತುಲ ರಸ್ತೆಯಲ್ಲಿ ಚಲಿಸಬೇಕಾದ ಕೆಲವು ಭಾರಿ ವಾಹನಗಳೂ ಕೂಡ ಇಲ್ಲಿ ಹೋಗುವುದುಂಟು. ಈ ಎಲ್ಲಾ ಕಾರಣಗಳಿಂದ ಈ ರಸ್ತೆಯಲ್ಲಿ ಅದರಲ್ಲೂ ನಂದಿ ವೃತ್ತದ ಬಳಿ ಯಾವಾಗಲೂ ಅಪಘಾತಗಳಾಗುತ್ತಿರುತ್ತದೆ. ಹೆಂಗಸರು, ಮಕ್ಕಳು, ವಯಸ್ಸಾದವರಂತೂ ನಡೆದುಕೊಂಡು ಹೋಗುವುದೇ ಕಷ್ಟವಾಗಿದೆ. ಆದ್ದರಿಂದ ಸಂಬಂಧಪಟ್ಟ ಸಂಚಾರಿ ಪೊಲೀಸರು ಇದರ ಕಡೆ ಗಮನಹರಿಸಿ ನಂದಿ ವೃತ್ತದ ಬಳಿ ರಸ್ತೆ ಹಂಪ್ ಹಾಕುವುದರ ಮೂಲಕ ಹಾಗೂ ಈ ರಸ್ತೆಯಲ್ಲೂ ತಪಾಸಣೆ ನಡೆಸುವುದರ ಮೂಲಕ ಹೆಚ್ಚಿನ ಅಪಘಾತಗಳಾಗುವುದನ್ನು ತಡೆಯಬೇಕಾಗಿ ಮನವಿ.

ಯಾವ ರಸ್ತೆಗಳಿಗೆ ಯಾರ ಹೆಸರಿಟ್ಟರೂ ಪರವಾಗಿಲ್ಲ. ರಸ್ತೆಯಲ್ಲಿ ಸುಗಮವಾಗಿ, ಸುರಕ್ಷತೆಯಿಂದ ಸಾರ್ವಜನಿಕರು ಓಡಾಡುವಂತೆ ಕ್ರಮ ಕೈಗೊಂಡರೆ ಸಾಕು.

–ರಾಘವೇಂದ್ರ ಜೋಯಿಸ್, ಮೈಸೂರು

■ ಶಿವರಾಂಪೇಟೆ ರಸ್ತೆಯಲ್ಲಿ ವ್ಯಾಪಾರಸ್ಥರಿಂದ ಪಾದಚಾರಿ ಮಾರ್ಗ ಅತಿಕ್ರಮಣ



ಮಾನ್ಯರೆ,

ಮೈಸೂರಿನ ಶಿವರಾಂಪೇಟೆ ನಗರದ ಕೇಂದ್ರ ವ್ಯಾಪಾರಿ ಬೀದಿಯಾಗಿದ್ದು, ಇಲ್ಲಿ ಯಾವಾಗಲೂ ಹೆಚ್ಚು ವಾಹನ ಸಂಚಾರ, ಜನದಟ್ಟಣೆ ಇರುತ್ತದೆ. ಹಬ್ಬದ ದಿನಗಳಲ್ಲಿ ಇನ್ನೂ ಜಾಸ್ತಿ ಜನದಟ್ಟಣೆ, ವಾಹನ ದಟ್ಟಣೆ ಇರುತ್ತದೆ. ಆದರೆ ಇಲ್ಲಿನ ಬಹಳಷ್ಟು ಅಂಗಡಿಗಳ ಮಾಲೀಕರು ತಮ್ಮ ವ್ಯಾಪಾರದ ವಸ್ತುಗಳನ್ನು ಪಾದಚಾರಿ ಮಾರ್ಗದಲ್ಲೇ ಇಟ್ಟು ಜನ ಸಂಚಾರಕ್ಕೆ ಅಡ್ಡಿಪಡಿಸಿ ಜನರು ವಾಹನ ದಟ್ಟಣೆಯ ರಸ್ತೆಯಲ್ಲೇ ಓಡಾಡುವ ಹಾಗೆ ಮಾಡಿ ಅವರನ್ನು ಅಪಾಯಕ್ಕೆ ತಳ್ಳುತ್ತಿದ್ದಾರೆ. ಓಡಾಡೋ ವಯೋವೃದ್ಧರು, ಮಕ್ಕಳ ಕತೆ ಏನಾಗಬಹುದು? ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳಾಗಲೀ, ಸಂಚಾರಿ ಪೊಲೀಸರಾಗಲೀ ಇದರ ಬಗ್ಗೆ ಕಾಳಜಿ ತೋರದೆ, ದಿವ್ಯ ನಿರ್ಲಕ್ಷ್ಯ ತೋರುತ್ತಿದ್ದಾರೆ. ಈಗಿರುವ ಶಿವರಾಂಪೇಟೆ ಪಾದಚಾರಿ ಮಾರ್ಗದ ಅತಿಕ್ರಮಣವನ್ನು ಫೋಟೋದಲ್ಲಿ ಕಾಣಬಹುದು.

–ಎಂ.ಎಸ್.ಎಸ್. ಶರ್ಮ, ಮೈಸೂರು.

■ ವ್ಯವಸ್ಥೆಯ ಸುಧಾರಣೆ ಅಗತ್ಯ

ಮಾನ್ಯರೆ,

ವಾರದ 5 ದಿನದಲ್ಲಿ 70 ಗಂಟೆ ಕೆಲಸ ಮಾಡಬೇಕು ಎಂದು ಕರೆ ನೀಡಿದ್ದ ಇನ್ಫೋಸಿಸ್‌ನ ಎನ್.ಆರ್.ನಾರಾಯಣಮೂರ್ತಿಯವರು ಕರೆ ಎಬ್ಬಿಸಿದ್ದ ಸದ್ದು ಕಡಿಮೆಯಾಗುತ್ತಿದ್ದಂತೆ, ಈಗ ಎಲ್ ಅಂಡ್ ಟಿ ಕಂಪೆನಿಯ ಮುಖ್ಯಸ್ಥ ಎಸ್.ಎನ್. ಸುಬ್ರಮಣ್ಯನ್ ಅವರು, ಹೆಂಡತಿಯ ಮುಖವನ್ನು ಎಷ್ಟು ಹೊತ್ತು ನೋಡುತ್ತಾ ಮನೆಯಲ್ಲಿ ಕುಳಿತಿರುತ್ತೀರಿ. ವಾರದಲ್ಲಿ 90 ಗಂಟೆ ಕೆಲಸ ಮಾಡಿ ಎಂದು ಕರೆ ಕೊಟ್ಟಿದ್ದಾರೆ. ಇದಕ್ಕೆ ಅವರು ಕೊಟ್ಟಿರುವ ಹೋಲಿಕೆ ಚೀನಾದ ಯುವಕನೊಬ್ಬನ ಜೊತೆಯ ಸಂವಾದ. ಅಮೇರಿಕದಲ್ಲಿ 50 ಗಂಟೆ ಕೆಲಸ ಮಾಡುತ್ತಾರೆ. ನಾವು ಚೀನಾದಲ್ಲಿ 90 ಗಂಟೆ ಕೆಲಸ ಮಾಡುತ್ತೇವೆ ಎನ್ನುವುದನ್ನು ಉಲ್ಲೇಖಿಸಿದ್ದಾರೆ. ಚೀನಾದಲ್ಲಿನ ಕಮ್ಯುನಿಸ್ಟ್ ಸರ್ವಾಧಿಕಾರ ವ್ಯವಸ್ಥೆಗೂ, ಅಮೇರಿಕದಲ್ಲಿನ ಅಧ್ಯಕ್ಷೀಯ ಪ್ರಜಾಪ್ರಭುತ್ವ ಆಡಳಿತಕ್ಕೂ, ಭಾರತದಲ್ಲಿನ ಚುನಾಯಿತ ಪ್ರಜಾಪ್ರಭುತ್ವ ವ್ಯವಸ್ಥೆಗೂ ಬಹಳ ವ್ಯತ್ಯಾಸಗಳಿವೆ. ಖಾಸಗಿ ಐಟಿ, ಬಿಟಿ ಕಂಪೆನಿಗಳಲ್ಲಿ ವಾರಕ್ಕೆ 40 ಗಂಟೆ ಕೆಲಸ ಮಾಡಿ ಬಹಳಷ್ಟು ಮಂದಿ ಜೇಬು ತುಂಬಿಸಿಕೊಂಡು ಉಳಿದ ಎರಡು ದಿನ ಮೋಜಿನಲ್ಲಿ ಕಳೆಯುತ್ತಾರೆ. ಇದು ಒಂದು ಕಡೆಯಾದರೆ ಸರ್ಕಾರಿ ಉದ್ಯೋಗಿಗಳು ಈಗ ಸಾಕಷ್ಟು ತೃಪ್ತಿದಾಯಕ ವೇತನ ಪಡೆದರೂ ವಾರದಲ್ಲಿ 6 ದಿನ ಕೆಲಸ ಮಾಡಿದರೂ, ಯಾವ ಫೈಲ್ ಕೂಡ ಲಂಚ ಕೊಡದೆ ಮುಂದೆ ಹೋಗುವುದಿಲ್ಲ. ಇಂದಿಗೂ ಬಹಳಷ್ಟು ಕಚೇರಿಗಳಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗಿ ಹಾಜರಾತಿ ಹಾಕುವ ವ್ಯವಸ್ಥೆಯೇ ಕಡ್ಡಾಯವಾಗಿ ನಡೆಯುವುದಿಲ್ಲ. ಬಯೋಮೆಟ್ರಿಕ್ ವ್ಯವಸ್ಥೆ ಇದ್ದರೂ ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವ ಧಾರ್ಷ್ಟ್ಯ ಯಾವ ಅಧಿಕಾರಿಗೂ ಇಲ್ಲ. ಯಾವ ಕೆಲಸದ ನಿಮಿತ್ತ ಹೋದರೂ ನಾಳೆ ಬಾ... ಎನ್ನುವುದು ಅವರ ಸಿದ್ಧ ಉತ್ತರವಾಗಿರುತ್ತದೆ. ಕಚೇರಿ ತೆರೆದಿರುತ್ತದೆ. ಆದರೆ ನೌಕರ ಇರುವುದಿಲ್ಲ. ಒಮ್ಮೊಮ್ಮೆ ಟೀಗೆ ಹೋಗಿರುತ್ತಾರೆ. ಒಮ್ಮೊಮ್ಮೆ ಬೇರೆ ಕಚೇರಿಗೆ ಹೋಗಿರುತ್ತಾರೆ. ಒಮ್ಮೆ ಅವರು ಇದ್ದರೂ ಆ ಫೈಲ್ ಸಿಗುತ್ತಿಲ್ಲ ಎನ್ನುತ್ತಾರೆ. ಇನ್ನೊಮ್ಮೆ ಪಕ್ಕದವರನ್ನು ಕೇಳಿದರೆ ಅವರು ಇಂದು ರಜೆ ಎನ್ನುತ್ತಾರೆ. ಇದು ಕಚೇರಿ ಸಿಬ್ಬಂದಿಗಳ ಹೊಂದಾಣಿಕೆ. ನಾಳೆಗೂ ಅದು ಪುನರಾವರ್ತನೆಯಾಗುತ್ತಿರುತ್ತದೆ. ಆಡಳಿತದಲ್ಲಿನ ವ್ಯವಸ್ಥೆ ಸುಧಾರಣೆಯಾಗದೆ, 100 ಗಂಟೆ ಕೆಲಸ ಮಾಡಿದರೂ ಅದರ ಪ್ರಯೋಜನ ಮಾತ್ರ ಅಷ್ಟೇ..

–ಮುಳ್ಳೂರು ಪ್ರಕಾಶ್, ಮೈಸೂರು.

■ ಸ್ವಾಮಿ ವಿವೇಕಾನಂದರು ಎಲ್ಲಿ ಮರೆಯಾದರು!

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಸಮೀಪ ವಿವೇಕಾನಂದ ವೃತ್ತವಿದೆ. ಅಲ್ಲಿ ಎಲ್ಲರನ್ನೂ ಆಕರ್ಷಿಸುವ ವಿವೇಕಾನಂದ ಪ್ರತಿಮೆ ಇತ್ತು. ಆದರೆ ಸರ್ಕಲ್ ಅನ್ನು ನವೀಕರಿಸುವ ಉದ್ದೇಶದಿಂದ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ತೆರವುಗೊಳಿಸಿದ್ದಾರೆ. ವೃತ್ತದ ನವೀಕರಣದ ಕೆಲಸವು ಮಂದಗತಿಯಲ್ಲಿ ಸಾಗುತ್ತಿದೆ. ವಿವೇಕಾನಂದರಿಲ್ಲದೆ ವೃತ್ತವು ಬಣಗುಟ್ಟುತ್ತಿದೆ. ಜನವರಿ 12ರಂದು ಸ್ವಾಮಿ ವಿವೇಕಾನಂದರ ಜನ್ಮದಿನ. ಆ ಸಮಯಕ್ಕಾದರೂ ಕೆಲಸವನ್ನು ಶೀಘ್ರವಾಗಿ ಪೂರ್ಣಗೊಳಿಸಿ ಸ್ವಾಮಿ ವಿವೇಕಾನಂದ ಪ್ರತಿಮೆಯನ್ನು ಸ್ಥಾಪಿಸಿ. ಇದು ಪ್ರತಿಯೊಬ್ಬರ ಬಯಕೆಯಾಗಿರುತ್ತದೆ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ನಾದಲಹರಿ




ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಅದ್ಭುತ ಕಲಾವಿದ ವೆಂಕಟಪ್ಪ

ಅರವತ್ತರ ದಶಕದ ನನ್ನ ಬಾಲ್ಯದಲ್ಲಿ ತಂದೆಯವರೊಡನೆ ಬೆಂಗಳೂರಿನ ಮಲ್ಲೇಶ್ವರದಲ್ಲಿ ಯಾವಾಗಲಾದರೊಮ್ಮೆ ವಾಯು ಸಂಚಾರಕ್ಕೆ ಹೊರಟಾಗ ಹದಿನೆಂಟನೆಯ ಅಡ್ಡ ರಸ್ತೆಯಲ್ಲಿದ್ದ ಮನೆಯೊಂದನ್ನು ಅದು ಕಲಾವಿದ ವೆಂಕಟಪ್ಪನವರ ಮನೆ ಎಂದು ತೋರಿಸಿ, ಮುಂದೆ ವೆಂಕಟಪ್ಪನವರ ಕಲೆ, ವಿಶಿಷ್ಟ ವ್ಯಕ್ತಿತ್ವ, ಸಂಗೀತ ಜ್ಞಾನ ಇತ್ಯಾದಿಗಳ ಬಗ್ಗೆ ಹೇಳ ತೊಡಗುತ್ತಿದ್ದರು. ಅದನ್ನು ಕೇಳುತ್ತ ಬೆಳೆದ ನನಗೆ ಸಹಜವಾಗಿಯೇ ಅವರ ಬಗ್ಗೆ ಒಂದು ಕುತೂಹಲ ಮೂಡಿತ್ತು. ಮುಂದೆ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಅವರ ಚಿತ್ರಗಳು, ಅವರೇ ಮಾಡಿದ ವೀಣೆ, ಉಬ್ಬು ಶಿಲ್ಪಗಳನ್ನು ನೋಡಿದಾಗ ಅವರ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಮತ್ತಷ್ಟು ಹೆಚ್ಚಾಯಿತು. ಅವರ ವೀಣಾ ಗುರುಗಳು ವೀಣೆ ಶೇಷಣ್ಣ ಎಂಬುದು ಮತ್ತಷ್ಟು ಸಮೀಪಕ್ಕೆ ತಂದಿತು. ನನ್ನ ಮನಸಿನಲ್ಲಿ ಅರಿವಿಲ್ಲದೆಯೇ ವೆಂಕಟಪ್ಪನವರ ಬಗೆಗೆ ಒಂದು ಅನಿರ್ವಚನೀಯ ಗೌರವ ಮತ್ತು ಆದರಗಳು ಮನೆ ಮಾಡಿಕೊಂಡವು. ಅವರ ಕಲೆಗಾರಿಕೆ, ವ್ಯಕ್ತಿತ್ವದ ಬಗ್ಗೆ ನಿಕಟ ಪರಿಚಯ ಆದಂತೆಲ್ಲಾ ನನ್ನ ಪ್ರಾತಃಸ್ಮರಣೀಯರ ಪಾಲಿಗೆ ಅವರು ಸೇರಿಹೋದರು.




ವೆಂಕಟಪ್ಪ



ವೆಂಕಟಪ್ಪ ರಚಿತ ವೀಣೆ ಶೇಷಣ್ಣ

ಕರ್ನಾಟಕದ ಕಲಾವಿದ ವೆಂಕಟಪ್ಪನವರು (1886–1965) ವಿಶ್ವದ ಅತ್ಯಂತ ಪ್ರಮುಖ ಚಿತ್ರಗಾರರ ಸಾಲಿನಲ್ಲಿ ನಿಲ್ಲುವ ಪ್ರತಿಭಾವಂತರು. ಕೊನೆಯುಸಿರು ಇರುವ ತನಕ ನಾನೊಬ್ಬ ಕಲಾ ವಿದ್ಯಾರ್ಥಿಯಷ್ಟೇ, ಕಲಾವಿದನಲ್ಲ ಎಂದೇ ಭಾವಿಸಿದ್ದ, ಹೇಳುತ್ತಿದ್ದ ವೆಂಕಟಪ್ಪನವರ ತಂದೆ, ತಾತನವರೆಲ್ಲ ಚಿತ್ರ ಕಲಾವಿದರೇ ಆಗಿದ್ದರು. ಕಲೆಯನ್ನೇ ತಮ್ಮ ಉಸಿರೆಂದು ಭಾವಿಸಿದ್ದ ವೆಂಕಟಪ್ಪನವರು ತಮ್ಮ ಇಡೀ ಬದುಕನ್ನು ಅದಕ್ಕಾಗಿಯೇ ಮುಡಿಪಾಗಿಟ್ಟ ಮಹಾನುಭಾವ. ನಡೆ–ನುಡಿ ಒಂದಾದ, ಶಿಸ್ತು, ಪ್ರಾಮಾಣಿಕತೆ, ಸತ್ಯ, ನಿಷ್ಠೂರ ಮಾತಿನ, ಅಚ್ಚುಕಟ್ಟುತನದ, ಸ್ವತಂತ್ರ ಮನೋಭಾವದ ಈ ವಿಶಿಷ್ಟ ವ್ಯಕ್ತಿಯು ತಮ್ಮ ದಿಟ್ಟತನಕ್ಕೆ, ನಿರ್ಭಿಡೆಗೂ ಹೆಸರಾದವರು.

ಕೃಷ್ಣಪ್ಪ ಮತ್ತು ರಂಗಮ್ಮ ದಂಪತಿಗಳ ಎರಡನೆಯ ಮಗನಾಗಿ ಹುಟ್ಟಿದ ವೆಂಕಟಪ್ಪನವರ ಬಾಲ್ಯವು ಮೈಸೂರು ಅರಮನೆಯ ನೆರೆಯಲ್ಲೇ. ನಜರ್‌ಬಾದಿನಲ್ಲಿದ್ದ ಇಂಡಸ್ಟ್ರಿಯಲ್ ಶಾಲೆಯಲ್ಲಿ ಅವರು ಚಿತ್ರ, ಗಂಧದಮರದ ಕೆತ್ತನೆ, ರೇಖಾಚಿತ್ರ, ವರ್ಣಚಿತ್ರ ಮತ್ತು ಶಿಲ್ಪಕಲೆಯ ಅಭ್ಯಾಸವನ್ನು ಪ್ರಾರಂಭಿಸಿದುದು. ಮದರಾಸಿಗೆ ಪರೀಕ್ಷೆ ಗೆಂದು ಹೋಗಿದ್ದ ವೆಂಕಟಪ್ಪನವರ ಮೇಲೆ ಇಂಗ್ಲೆಂಡಿನ ಕಲಾ ಪರಿಣತರಾದ ಆರ್ನೆಸ್ಟ್ ಬಿನಫೀಲ್ಡ್ ಹ್ಯಾವೆಲ್ ಅವರ ಪ್ರಭಾವ ಉಂಟಾಯಿತು. ಹ್ಯಾವೆಲ್ ಅವರಿಗೆ ಭಾರತೀಯ ಕಲೆಗಳ ಬಗ್ಗೆ ಅತೀವ ಗೌರವ, ಆದರ. ಅವರು ಮುಂದೆ ದೇಶದಲ್ಲಿ ಪ್ರಖ್ಯಾತವಾಗಿದ್ದ ಕಲಕತ್ತೆಯ ಸರ್ಕಾರೀ ಕಲಾಶಾಲೆಯ ಮುಖ್ಯಸ್ಥರಾದಾಗ ಬಹುಶಃ ಅವರಲ್ಲಿ ಕಲಿಯಬೇಕೆಂಬ ಹಂಬಲ ವೆಂಕಟಪ್ಪನವರಲ್ಲಿ ಮೂಡಿದ್ದಿರಬಹುದು. ಅವರ ತಂದೆಯವರು ಅರಮನೆಯ ಅಲಂಕರಣವನ್ನು ಮಾಡುತ್ತಿದ್ದಾಗ ತರುಣ ವೆಂಕಟಪ್ಪನವರೂ ಹೋಗಿ ತಂದೆಗೆ ಸಹಾಯ ಮಾಡುತ್ತಿದ್ದರು. ಕೆಲಸದಲ್ಲಿ ಇವರ ಅಚ್ಚುಕಟ್ಟುತನವನ್ನು ಗುರುತಿಸಿದ ಹಿರಿಯ ಅಧಿಕಾರಿಗಳು ಮಹಾರಾಜರಾಗಿದ್ದ ನಾಲ್ವಡಿಯವರ ಗಮನಕ್ಕೂ ಅದನ್ನು ತಂದಿದ್ದರು. ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿದ್ದ, ಕಲಾಭಿಮಾನಿಯಾಗಿದ್ದ ಆರ್.ಎಚ್.ಕ್ಯಾಂಪ್‌ಬೆಲ್ ಅವರು ವೆಂಟಪ್ಪನವರನ್ನು ಹೆಚ್ಚಿನ ಶಿಕ್ಷಣಕ್ಕಾಗಿ ಕಲಕತ್ತೆಗೆ ಕಳುಹಿಸಬೇಕೆಂದು ಮಹಾರಾಜರಲ್ಲಿ ಅರಿಕೆ ಮಾಡಿಕೊಂಡರು. ಕಲಾ ಪೋಷಕರಾಗಿದ್ದ ಮೈಸೂರರಸರು ಹೆಚ್ಚಿನ ಕಲಿಕೆಗಾಗಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕಳುಹಿಸುತ್ತಿದ್ದುದು ಅವರ ಉದಾರತನಕ್ಕೆ ಸಾಕ್ಷಿ. 1909ರಲ್ಲಿ ಹೆಚ್ಚಿನ ಶಿಕ್ಷಣಕ್ಕಾಗಿ ಕಲಕತ್ತೆಗೆ ಹೊರಟ ವೆಂಕಟಪ್ಪನವರ ಮನದಲ್ಲಿ ನಾಲ್ವಡಿಯವರ ಬಗ್ಗೆ ಕೃತಜ್ಞತೆ ತುಂಬಿತ್ತು







ವೆಂಕಟಪ್ಪನವರು ರಚಿಸಿರುವ ಪ್ರಕೃತಿಯ ಚಿತ್ರಕಲೆಗಳು

> "ಕಲೆಯ ಹೊರತಾಗಿ ಯಾವ ಆಕರ್ಷಣೆಯೂ ಅವರನ್ನು ಸೆಳೆಯಲಿಲ್ಲ. ಯಾರ ಹಂಗಿಗೂ ಒಳಗಾಗದೆ, ಯಾವ ಸಣ್ಣತನದ ಕೆಲಸಕ್ಕೂ ಕೈಹಾಕದೆ ಬದುಕಿನ ಹೆದ್ದಾರಿಯಲ್ಲೇ ಧೀಮಂತ ಹೆಜ್ಜೆ ಹಾಕಿದ ವೆಂಕಟಪ್ಪರಿಗೆ ಯಾರ ಬಗ್ಗೆಯೂ ಭಯವಿರಲಿಲ್ಲ. ತಮಗೆ ಸರಿ ಎಂದು ತೋರಿದುದನ್ನು ಮಾಡಿಯೇ ತೀರುವರು. ತಮ್ಮನ್ನು ಕೆಣಕಿದವರನ್ನು ಸುಮ್ಮನೆ ಬಿಡುವವರಲ್ಲ. ತಾವಾಗಿಯೇ ಯಾರ ತಂಟೆಗೂ ಹೋಗದ ಗಂಭೀರ ವ್ಯಕ್ತಿತ್ವ

ವೆಂಕಟಪ್ಪನವರು ಕಲಕತ್ತೆಯ ಕಲಾಶಾಲೆಗೆ ಸೇರಿದಾಗ ಹ್ಯಾವೆಲ್ಲರು ರಜೆಯ ಮೇಲೆ ಇಂಗ್ಲೆಂಡಿಗೆ ತೆರಳಿದ್ದರು. ಅವನೀಂದ್ರನಾಥ ಠಾಕೂರರು ಹಂಗಾಮಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದರು. ನಂತರ ಪರ್ಸಿ ಬ್ರೌನ್ ಎಂಬುವರು ಆ ಹುದ್ದೆಯನ್ನು ಅಲಂಕರಿಸಿದರು. ವೆಂಕಟಪ್ಪನವರು ಅವನೀಂದ್ರರ ಶಿಷ್ಯರಾದರು. ಮುಂದೆ ಖ್ಯಾತ ಕಲಾವಿದರಾದ ನಂದಲಾಲ ಬಸು, ಅಶೀತಕುಮಾರ, ಶೈಲೇಂದ್ರನಾಥ ಡೇ, ಸಮರೇಂದ್ರ ಗುಪ್ತ, ಪ್ರಮೋದಕುಮಾರ ಚಟ್ಟೋಪಾಧ್ಯಾಯ ಮುಂತಾದವರೆಲ್ಲ ಅವರ ಸಹಪಾಠಿಗಳಾಗಿದ್ದರು. ಕುಂಚಗಾರಿಕೆ, ಬಣ್ಣಗಳ ವಿನ್ಯಾಸ, ಚಿತ್ರಕಲೆಯಲ್ಲಿ ಜೀವ ತುಂಬುವ ಕಲೆ ಇತ್ಯಾದಿಗಳನ್ನೆಲ್ಲ ಅವನೀಂದ್ರನಾಥರು ಪ್ರಕೃತಿಯ ಮಡಿಲಲ್ಲಿ ತಮ್ಮ ಶಿಷ್ಯರಿಗೆ ಅತ್ಯಂತ ಪ್ರೀತಿಯಿಂದ ಧಾರೆ ಎರೆದರು. ಸೋದರಿ ನಿವೇದಿತಾರ ಸ್ನೇಹಿತೆಗಾಗಿ ಅಜಂತಾ ಗುಹೆಗಳ ಚಿತ್ರಗಳ ಯಥಾವತ್ತಾದ ಪ್ರತಿಗಳನ್ನು ಮಾಡಿಕೊಡಲು ಅವರನ್ನು ಕೇಳಿಕೊಂಡಾಗ, ಅವನೀಂದ್ರರು ತಮ್ಮ ಪ್ರಿಯ ಶಿಷ್ಯರಾಗಿದ್ದ ನಂದಲಾಲ ಬಸು ಮತ್ತು ವೆಂಕಟಪ್ಪನವರನ್ನು ಈ ಕಾರ್ಯಕ್ಕಾಗಿ ಕಳುಹಿಸಿದ್ದರು. ಶ್ರೀರಂಗಂನಿಂದ ಬಂದಿದ್ದ ರಾಮಸ್ವಾಮಿ ಅಯ್ಯಂಗಾರರೆಂಬ ವೈಣಿಕರು ಕಲಕತ್ತೆಯಲ್ಲ ತಮ್ಮ ಉದರಪೋಷಣೆಗಾಗಿ ಬಂದಿದ್ದಾಗ ಮೈಸೂರಿನವರೆಂದು ತಿಳಿದು, ವೆಂಕಟಪ್ಪನವರ ಬಿಡಾರಕ್ಕೂ ಭೇಟಿ ನೀಡಿದ್ದರು.



ಸಿದ್ಧಾರ್ಥನ ರಾಜ ಪರಿತ್ಯಾಗ



ರವೀಂದ್ರನಾಥ ಟಾಗೋರ್

ಅವರಿಂದ ಮೂರು ತಿಂಗಳು ವೀಣೆಯನ್ನು ಕಲಿತ ವೆಂಕಟಪ್ಪನವರು, ಅವರ ಬಾಯಿಂದ ತಮ್ಮ ಗುರುಗಳಾಗಿದ್ದ ವೀಣೆ ಶೇಷಣ್ಣನವರ ಬಗೆಗಿನ ಮಾತುಗಳನ್ನು ಕೇಳಿ, ಮೈಸೂರಿಗೆ ಹಿಂದಿರುಗಿದ ಮೇಲೆ, ಶೇಷಣ್ಣನವರ ಬಳಿಯೇ ವೀಣೆಯನ್ನು ಮುಂದುವರಿಸುವ ನಿರ್ಧಾರ ಕೈಗೊಂಡರು.

ಏನನ್ನೇ ಮಾಡಿದರೂ, ಅದರಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳುವುದು ಅವರ ಸಹಜ ಸ್ವಭಾವ ಆಗಿತ್ತು. ಕಲೆಯ ಬಗ್ಗೆ ಅತ್ಯಂತ ಶ್ರದ್ಧೆ, ಅಗಾಧ ತಾಳ್ಮೆ, ನಿಷ್ಠೆ, ಆಸಕ್ತಿ, ಆದರ ಮುಂತಾದ ಗುಣಗಳು ಅವರಲ್ಲಿ ಮನೆ ಮಾಡಿತ್ತು. ಮದುವೆಯಾದರೆ, ಕಲೆಯ ಕಡೆ ಗಮನ ಕಡಿಮೇಯಾದೀತೆಂದು ಅವರು ಕೊನೆಯವರೆಗೂ ನೈಷ್ಠಿಕ ಬ್ರಹ್ಮಚಾರಿಯಾಗಿಯೇ ಉಳಿದರು. "ಕಲೆಯೆ ಅವನಿಗೆ ಮಡದಿ ಮತ್ತು ಮಕ್ಕಳು" ಎಂದು ಅವನೀಂದ್ರನಾಥರು ಹೇಳುತ್ತಿದ್ದರಂತೆ. ಯಾವ ನೆಂಟರಿಷ್ಟರೊಡನೆಯೂ ಬೆರೆಯುತ್ತಿರಲಿಲ್ಲ. ಒಂಟಿಯಾಗಿಯೇ ಬದುಕುವ ಸಂಕಲ್ಪ ಮಾಡಿದ್ದರು. ಕಲೆಯ ಹೊರತಾಗಿ ಯಾವ ಆಕರ್ಷಣೆಯೂ ಅವರನ್ನು ಸೆಳೆಯಲಿಲ್ಲ. ಯಾರ ಹಂಗಿಗೂ ಒಳಗಾಗದೆ, ಯಾವ ಸಣ್ಣತನದ ಕೆಲಸಕ್ಕೂ ಕೈಹಾಕದೆ ಬದುಕಿನ ಹೆದ್ದಾರಿಯಲ್ಲೇ ಧೀಮಂತ ಹೆಜ್ಜೆ ಹಾಕಿದ ಆತನಿಗೆ ಯಾರ ಬಗ್ಗೆಯೂ ಭಯವಿರಲಿಲ್ಲ. ತಮಗೆ ಸರಿ ಎಂದು ತೋರಿದುದನ್ನು ಮಾಡಿಯೇ ತೀರುವರು. ತಮ್ಮನ್ನು ಕೆಣಕಿದವರನ್ನು ಸುಮ್ಮನೆ ಬಿಡುವವರಲ್ಲ. ತಾವಾಗಿಯೇ ಯಾರ ತಂಟೆಗೂ ಹೋಗದ ಗಂಭೀರ ವ್ಯಕ್ತಿತ್ವ. ಕಲೆಯಲ್ಲಿ ಆಸಕ್ತಿಯುಳ್ಳ ಯಾರೇ ಬಂದರೂ ಅವರಿಗೆ ಆದರದ ಸ್ವಾಗತ. ತಮ್ಮ ಚಿತ್ರಗಳನ್ನೆಲ್ಲ ತೋರಿಸಿ, ಸಾವಕಾಶವಾಗಿ ಅದನ್ನೆಲ್ಲ ವಿವರಿಸುವರು. ಚಿತ್ರಕಲೆ ಮತ್ತು ಶಿಲ್ಪ ಎರಡರಲ್ಲೂ ಅಸಾಧಾರಣ ಯಶಸ್ಸನ್ನು ಗಳಿಸಿದ್ದರು. ತಮ್ಮನ್ನು ಜನ ಹೊಗಳಲಿ ಎಂಬ ಆಸೆ ಲವಲೇಶವೂ ಇಲ್ಲ. ಬಹಳ ಮೊದಲೇ ಅಪರಿಗ್ರಹವ್ರತವನ್ನು ಪಾಲಿಸುವ ನಿರ್ಧಾರ ಕೈಗೊಂಡಿದ್ದರಿಂದ ಎಲ್ಲೇ ಹೋದರೂ ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳುವರು, ತಮ್ಮ ಬಟ್ಟೆ ತಾವೇ ಒಗೆದುಕೊಳ್ಳುವರು. ಯಾರಮೇಲೂ ಅವಲಂಬನೆ ಎಂಬುದು ಇಲ್ಲವೇ ಇಲ್ಲ.

ವೀಣೆ ಶೇಷಣ್ಣನವರ ಬಳಿ ವೀಣಾಭ್ಯಾಸ ಮಾಡಿ ಉತ್ತಮ ವೈಣಿಕರಾದದ್ದಷ್ಟೇ ಅಲ್ಲ, ಸಂಗೀತದಲ್ಲಿ ಬಹು ಚರ್ಚಿತವಾದ 22 ಶ್ರುತಿಗಳನ್ನು ವಿವರಿಸುವ ವೀಣೆಯೊಂದನ್ನೂ ತಾವೇ ತಯಾರಿಸಿದ್ದರು. ಗುರುಗಳ ಬಗ್ಗೆ ಅಪರಿಮಿತ ಭಕ್ತಿ. ಅದರ ದ್ಯೋತಕವಾಗಿ ಶೇಷಣ್ಣನವರ ಒಂದು ಶಿಲ್ಪ ಮಾಡಿದ್ದಾರೆ. ಅದರಲ್ಲಿ ತಮ್ಮ ಗುರುಭಕ್ತಿಯೆಲ್ಲವನ್ನೂ ಎರಕ ಹೊಯ್ದು, ಜೀವಂತಗೊಳಿಸಿದ್ದಾರೆ. ಶೇಷಣ್ಣನವರ ಭವ್ಯ ವ್ಯಕ್ತಿತ್ವವು ಅದ್ಭುತವಾಗಿ ಮೂಡಿಬಂದಿದೆ. ಅವರ ಪ್ರಕೃತಿ ಚಿತ್ರಣಗಳೂ ಸಹ ಅತ್ಯಂತ ಸಹಜ, ಸುಂದರ. ಅವರ ಚಿತ್ರಗಳನ್ನು, ಶಿಲ್ಪಗಳನ್ನು ಸರಕಾರವು ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕೆ ಇಟ್ಟಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2025ನೇ ಸಾಲಿನ ಕ್ಯಾಲೆಂಡರ್, ಡೈರಿ ಬಿಡುಗಡೆ

ಮೈಸೂರು ಪತ್ರಿಕಾ ಕ್ಷೇತ್ರಕ್ಕೆ ತನ್ನದೇ ಆದ ಇತಿಹಾಸವಿದೆ: ಜಿಟಿಡಿ

ಮೈಸೂರು, ಜ.11 (ಎಂಟಿವೈ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಶಾಸಕ ಜಿ.ಟಿ.ದೇವೇಗೌಡ ಹಾಗೂ ಡೈರಿಯನ್ನು ಉದ್ಯಮಿ ಪಿ.ವಿ.ಗಿರಿ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಸಮಾಜದಲ್ಲಿ ಜನಸಾಮಾನ್ಯರಿಗೆ ಆಗುವ ಅನ್ಯಾಯವನ್ನು ತಡೆದು, ನ್ಯಾಯ ಒದಗಿಸುವ ಶಕ್ತಿ ಪತ್ರಿಕಾ ರಂಗಕ್ಕೆ ಇದೆ. ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಕ್ಕೂ ಎಚ್ಚರಿಕೆ ಕೊಡುವ ಸಾಮರ್ಥ್ಯವೂ ಪತ್ರಿಕಾರಂಗಕ್ಕೆ ಇದೆ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ನಾಲ್ಕನೇ ಅಂಗ ಕೀರ್ತಿಗೂ ಪತ್ರಿಕಾರಂಗ ಪಾತ್ರವಾಗಿದೆ. ಹಾಗೆಯೇ ಯುವ ಪತ್ರಕರ್ತರು ಪತ್ರಿಕಾ ಧರ್ಮ ಕಾಪಾಡಿ ಕೊಳ್ಳುವತ್ತ ಗಮನಹರಿಸಬೇಕು ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ವಿವಿಧ ಪ್ರಶಸ್ತಿ ಪುರಸ್ಕೃತ ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಪತ್ರಿಕಾ ವಿತರಕರು ಚಳಿ, ಮಳೆ ಹಾಗೂ ಗಾಳಿಯನ್ನು ಲೆಕ್ಕಿಸದೆ ಇಂದಿಗೂ ಸೈಕಲ್ ಮೂಲಕ ಪತ್ರಿಕೆಗಳನ್ನು ಮನೆ ಮನೆಗೆ ತಲು ಪಿಸಿ ರಾಜ್ಯ, ರಾಷ್ಟ್ರದಲ್ಲಿ ನಡೆಯುವ ವಿಚಾರ ಗಳನ್ನು ತಿಳಿಸುವ ಕೆಲಸವನ್ನು ಮಾಡು ತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಪತ್ರಿಕಾ ರಂಗದಲ್ಲಿ ಸುದೀರ್ಘ ಸೇವೆ ಸಲ್ಲಿಸುತ್ತಿರುವವರನ್ನು ನಾವು ನೋಡಿದ್ದೇವೆ. ಖಾದ್ರಿ ಶಾಮಣ್ಣ, ಕೃಷ್ಣವಟ್ಟಂ ಸೇರಿದಂತೆ ಹಲವಾರು ಪತ್ರಕರ್ತರು ನಾಡಿಗೆ ಸೇವೆ ಯನ್ನು ಸಲ್ಲಿಸಿದ್ದಾರೆ ಎಂದು ಸ್ಮರಿಸಿದರು. ಡೈರಿ ಬಿಡುಗಡೆ ಮಾಡಿದ ಬಳಿಕ ಉದ್ಯಮಿ ಪಿ.ವಿ.ಗಿರಿ ಮಾತನಾಡಿದರು.

ಪತ್ರಕರ್ತರಿಗೆ ಸನ್ಮಾನ: ಇದೇ ಸಂದರ್ಭ ದಲ್ಲಿ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತ ಚೀ.ಜ. ರಾಜೀವ್, ಕರ್ನಾಟಕ ಮಾಧ್ಯಮ ಅಕಾಡಮಿ ಪ್ರಶಸ್ತಿ ಪುರಸ್ಕೃತ ಟಿ.ಗುರುರಾಜ್, ಜೆ.ಜಯಂತ್, ಪ್ರಜಾ ಸಂದೇಶ ದತ್ತಿ ಪ್ರಶಸ್ತಿ ಪುರಸ್ಕೃತರಾದ ಪಿ. ಶಿಲ್ಪಾ, ಹೆಚ್.ನರಸಿಂಹಯ್ಯ ರಾಜ್ಯ ಪ್ರಶಸ್ತಿ ಪಡೆದ ಸಾಹಿತಿ, ಪತ್ರಕರ್ತ ಬನ್ನೂರು ಕೆ.ರಾಜು ಹಾಗೂ ಪಿಹೆಚ್.ಡಿ ಪದವಿ ಪಡೆದ ನಾಗರಾಜ್ ನವೀಮನೆ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಪ್ರಗತಿಪರ ಒಕ್ಕೂಟದಿಂದ ಪ್ರತಿಭಟನೆ

ದೇಶದಲ್ಲಿನ ದ್ವೇಷ ರಾಜಕಾರಣ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಸಿ.ಟಿ.ರವಿ; ಡಾ.ಅಂಬೇಡ್ಕರ್ ವಿಚಾರವಾಗಿ ಅಮಿತ್ ಶಾ ಹೇಳಿಕೆಗೆ ಖಂಡನೆ

ಮೈಸೂರು, ಜ.11(ಎಸ್‌ಪಿಎನ್)– ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕುರಿತು ಶಾಸಕ ಸಿ.ಟಿ.ರವಿ ನೀಡಿರುವ ಹೇಳಿಕೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ನೀಡಿರುವ ಹೇಳಿಕೆ ವಿರೋಧಿಸಿ ಮೈಸೂರು ಪ್ರಗತಿಪರ ಒಕ್ಕೂಟದ ವತಿಯಿಂದ ಶನಿವಾರ ಮೈಸೂರಿನ ಚಿಕ್ಕಗಡಿಯಾರ ಮುಂಭಾಗ ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಕೇಂದ್ರದ ಬಿಜೆಪಿ ಸರ್ಕಾರ, ಅಮಿತ್ ಶಾ, ಸಿ.ಟಿ.ರವಿ ವಿರುದ್ಧ ಘೋಷಣೆಗಳುಳ್ಳ ಫಲಕಗಳನ್ನು ಪ್ರದರ್ಶಿಸಿ ಆಕ್ರೋಶ ಹೊರಹಾಕಿದರು.

ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ, ಅಂಬೇಡ್ಕರ್ ಬಗ್ಗೆ ಭಜನೆ ಮಾಡುವ ಬದಲು ಅಷ್ಟು ಸಾರಿ ದೇವರನ್ನು ಭಜನೆ ಮಾಡಿದರೆ ಸ್ವರ್ಗ ಸಿಗುತ್ತದೆ ಎಂದಿರುವ ನೀವು(ಅಮಿತ್ ಶಾ) ಮುಕ್ಕೋಟಿ ದೇವರನ್ನು ಪೂಜಿಸುತ್ತಿದ್ದೀರಲ್ಲ ಎಷ್ಟು ಮಂದಿ ಸ್ವರ್ಗಕ್ಕೆ ಹೋಗಿದ್ದೀರಿ ಲೆಕ್ಕಕೊಡಿ ಎಂದು ಪ್ರಶ್ನಿಸಿದರೆ, ಮಹಿಳಾ ಪರ ಹೋರಾಟಗಾರ್ತಿ ಸವಿತಾ ಪ.ಮಲ್ಲೇಶ್, ಸಂಸತ್‌ನಲ್ಲಿ ಅಮಿತ್ ಶಾ ಅಂಬೇಡ್ಕರ್ ಕುರಿತು ನೀಡಿರುವ ಹೇಳಿಕೆ ಆಘಾತಕಾರಿ. ರಾಜ್ಯ ಬಿಜೆಪಿಯಲ್ಲಿ ಶಾಸಕ ಸಿ.ಟಿ.ರವಿ, ಮಹಿಳಾ ಸಚಿವೆ ಕುರಿತು ನೀಡಿರುವ ಹೇಳಿಕೆ ಅಸಹ್ಯ ಹುಟ್ಟಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಲೇಖಕ ಕಮಲ್ ಗೋಪಿನಾಥ್ ಮಾತನಾಡಿ, ತಮ್ಮ ಆಡಳಿತಾವಧಿಯಲ್ಲಿ ಸಮಾಜದಲ್ಲಿ ದ್ವೇಷ ಬೆಳೆಸುವುದು ಇವರ ಕಾಯಕ ಎಂದರೆ, ಮಾಜಿ ಮೇಯರ್ ಪುರುಷೋತ್ತಮ್, ಕಳೆದ ಒಂದೂವರೆ ತಿಂಗಳಿಂದ ಕೇಂದ್ರ ಸರ್ಕಾರ ಹಾಗೂ ಶಾಸಕ ಸಿ.ಟಿ.ರವಿ ವಿರುದ್ಧ ನಿರಂತರ ಹೋರಾಟ ಮಾಡುತ್ತಿದ್ದರೂ ನಮ್ಮ ಹೋರಾಟಕ್ಕೆ ಕೇಂದ್ರ ಸರ್ಕಾರ ಗೌರವ ಕೊಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಹಿಂದ ಜವರಪ್ಪ ಮಾತ ನಾಡಿ, ಬಿಜೆಪಿ, ಸಂಘ ಪರಿವಾರದ ಚಿತಾವಣೆಯಿಂದ ಸಂವಿಧಾನವನ್ನು ಬಳಸಿಕೊಂಡೆ ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡುತ್ತಿರುವುದು ಬೇಸರದ ಸಂಗತಿ ಎಂದರು. ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್, ಪ್ರಗತಿಪರ ಮಹಿಳಾ ಮುಖಂಡರಾದ ರತಿರಾವ್, ದಲಿತ ಮುಖಂಡ ಹರಿಹರ ಆನಂದಸ್ವಾಮಿ, ಹಿರಿಯ ಪತ್ರಕರ್ತ ಟಿ.ಗುರುರಾಜ್, ಜಿ.ಪಿ.ಬಸವರಾಜು, ಮುಖಂಡರಾದ ಬಾಬುರಾಜ್, ಪಿ.ಮರಂಕಯ್ಯ, ಕೆ.ಎಸ್. ಶಿವರಾಂ, ನಾ.ದಿವಾಕರ, ಹೊಸಕೋಟೆ ಬಸವರಾಜ್, ಪ್ರೊ.ಪಂಡಿತಾರಾಧ್ಯ, ಕನ್ನಡಪರ ಹೋರಾಟಗಾರ ಮೋಹನ್ ಕುಮಾರ್ ಗೌಡ, ಸಿ.ಹರಕುಮಾರ್, ನೆಲೆ ಹಿನ್ನಲೆ ಗೋಪಾಲ್ ಕೃಷ್ಣ, ಚಿಂತನ ಚಿತ್ತಾರದ ನಿಂಗರಾಜ್ ಚಿತ್ತಣ್ಣವರ್, ಬಾಲಕೃಷ್ಣ, ದೇವಗಳ್ಳಿ ಸೋಮಶೇಖರ್, ಎಂ.ಎಫ್.ಕಲೀಂ, ಉಗ್ರನರಸಿಂಹೇಗೌಡ, ಚೌಡಹಳ್ಳಿ ಜವರಯ್ಯ, ಡಿ.ಹೊಸಳ್ಳಿ ಶಿವು, ಏಜಾಜ್ ಅಹ್ಮದ್ ಖಾನ್, ಎಂ.ಮಹಾ ಲಿಂಗಪ್ಪ, ಫರ್ವೀಜ್ ಮಲ್ಲಿಕ್, ಎಫ್.ಮನ್ಸೂರ್ ಅಹ್ಮದ್, ಡಾ.ಬಿ.ಎಸ್.ದಿನಮಣಿ, ಈ.ಧನಂಜಯ, ಟಿ.ಎಂ.ಬೇರಿ, ಸುಶೀಲ ಸೇರಿದಂತೆ ಹಲವರು ಭಾಗವಹಿಸಿದ್ದರು.



ಬಿಜೆಪಿ ನಾಯಕರ ಹೇಳಿಕೆ ವಿರೋಧಿಸಿ ಮೈಸೂರು ಪ್ರಗತಿಪರ ಒಕ್ಕೂಟದ ವತಿಯಿಂದ ಶನಿವಾರ ಮೈಸೂರಿನ ಚಿಕ್ಕಗಡಿಯಾರ ಮುಂಭಾಗ ಪ್ರತಿಭಟನೆ ನಡೆಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ನಿವೃತ್ತಿ ನಂತರ ಸೇವಾವಧಿ ವಿಸ್ತರಣೆಗೆ ಉಪರಾಷ್ಟ್ರಪತಿ ಜಗದೀಪ್ ಧನ್ಕರ್ ವಿರೋಧ

ಕಲುಷಿತ ರಾಜಕೀಯ ವಾತಾವರಣ ದೇಶಕ್ಕೆ ಹೆಚ್ಚು ಅಪಾಯಕಾರಿ



ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷರ 25ನೇ ರಾಷ್ಟ್ರೀಯ ಸಮ್ಮೇಳನ ನಡೆಯಿತು.

ಬೆಂಗಳೂರು, ಜ.11– ಸೇವಾವಧಿ ವಿಸ್ತರಣೆಗೆ ಉಪ ರಾಷ್ಟ್ರಪತಿ ಜಗದೀಪ್ ಧನ್ಕರ್ ಪರೋಕ್ಷ ವಿರೋಧ ವ್ಯಕ್ತಪಡಿಸಿದ್ದು, ಸಾರ್ವಜನಿಕ ಹುದ್ದೆಗಳಲ್ಲಿರುವ ಅಧಿಕಾರಿಗಳು ಅಥವಾ ಉನ್ನತ ವ್ಯಕ್ತಿಗಳ ಸೇವಾ ವಿಸ್ತರಣೆಗಳು ಸಾಲಿನಲ್ಲಿ ಇರುವವರಿಗೆ ಹಿನ್ನಡೆಯಾಗಿದೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜ್ಯ ಸಾರ್ವಜನಿಕ ಸೇವಾ ಆಯೋಗದ ಅಧ್ಯಕ್ಷರ 25ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸೇವಾ ವಿಸ್ತರಣೆಯು ಕೆಲವು ವ್ಯಕ್ತಿಗಳಿಗೆ ಅನಿವಾರ್ಯವಾದರೂ ಅವರ ಹಿಂದಿರುವ ವ್ಯಕ್ತಿಗಳಿಗೆ ಅದು ಹಿನ್ನಡೆಯಾಗುತ್ತದೆ ಎಂದು ಹೇಳಿದರು.

ಅನಿವಾರ್ಯತೆ ಎಂಬುದು ಒಂದು ರೀತಿಯ ಕಟ್ಟುಕತೆ. ಈ ದೇಶದಲ್ಲಿ ಪ್ರತಿಭೆ ಹೇರಳವಾಗಿದೆ. ಯಾರೂ ಅನಿವಾರ್ಯವಲ್ಲ. ಆದ್ದರಿಂದ, ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಸಾರ್ವಜನಿಕ ಸೇವಾ ಆಯೋಗಗಳು ಅಂತಹ ಸಂದರ್ಭಗಳಲ್ಲಿ ಪಾತ್ರವನ್ನು ಹೊಂದಿರುವಾಗ, ಅವು ದೃಢವಾಗಿರಬೇಕು. ಸಾರ್ವಜನಿಕ ಸೇವಾ ಆಯೋಗಗಳ ನೇಮಕಾತಿಗಳನ್ನು ಪ್ರೋತ್ಸಾಹ ಅಥವಾ ಪಕ್ಷಪಾತ ದಿಂದ ನಡೆಸಲಾಗುವುದಿಲ್ಲ ಎಂದು ಧನ್ಕರ್ ಅಭಿಪ್ರಾಯಪಟ್ಟರು.

ನಿವೃತ್ತಿಯ ನಂತರದ ನೇಮಕಾತಿಗಳನ್ನೂ ಧನ್ಕರ್ ವಿರೋಧಿಸಿದ್ದು, ಸಂವಿಧಾನದ ರಚನೆಕಾರರು ಕಲ್ಪಿಸಿಕೊಂಡಿದ್ದಕ್ಕೆ ಇದು ವಿರುದ್ಧವಾಗಿದೆ ಕೆಲವು ರಾಜ್ಯಗಳಲ್ಲಿ ಉದ್ಯೋಗಿಗಳು ಎಂದಿಗೂ ನಿವೃತ್ತರಾಗುವುದಿಲ್ಲ. ವಿಶೇಷವಾಗಿ ಪ್ರೀಮಿಯಂ ಸೇವೆಗಳಲ್ಲಿರುವವರು ಹಲವಾರು ತಾತ್ಕಾಲಿಕ ನಾಮನಿರ್ದೇಶನಗಳನ್ನು ಪಡೆಯುತ್ತಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ದೇಶದಲ್ಲಿ ಪ್ರತಿಯೊಬ್ಬರೂ ಕಾನೂನಿನ ಅಡಿಯಲ್ಲಿ ವ್ಯಾಖ್ಯಾನಿಸಲಾದ ನಿಯಮಗಳಾನುಸಾರ ನಡೆಯಬೇಕು ಎಂದರು.

ಪ್ರಶ್ನೆ ಪತ್ರಿಕೆ ಸೋರಿಕೆ ಒಂದು ಉದ್ಯಮ, ವಾಣಿಜ್ಯದ ಒಂದು ರೂಪವಾಗಿದೆ. ಇದು ನಿಗ್ರಹಿಸಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರವು ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯಯುತ ವಿಧಾನಗಳ ತಡೆಗಟ್ಟುವಿಕೆ) ಮಸೂದೆ, 2024 ಅನ್ನು ಜಾರಿಗೆ ತಂದಿರುವುದನ್ನು ಧನ್ಕರ್ ಶ್ಲಾಘಿಸಿದರು.

ರಾಜಕೀಯ ಸಾಮರಸ್ಯ ಬೇಕು: ಇದು ಭಾರತದ ಶತಮಾನವಾದರೂ, ಶಾಂತ ರಾಜಕೀಯ ವಾತಾವರಣವಿಲ್ಲದೆ ಭಾರತವು ನಿಜವಾಗಿಯೂ ಲಾಭ ಪಡೆಯುವುದಿಲ್ಲ ಎಂದ ಧನ್ಕರ್, ನಾವು ಎದುರಿಸುತ್ತಿರುವ ಹವಾಮಾನ ಬದಲಾವಣೆಗಿಂತ ಕಲುಷಿತ ರಾಜಕೀಯ ವಾತಾವರಣವು ದೇಶಕ್ಕೆ ಹೆಚ್ಚು ಅಪಾಯಕಾರಿ. ನಮ್ಮ ರಾಜಕೀಯ ವ್ಯವಸ್ಥೆಯು ಪ್ರಸ್ತುತ ತುಂಬಾ ವಿಭಜಕ ಮತ್ತು ತುಂಬಾ ಧ್ರುವೀಕೃತವಾಗಿದೆ. ರಾಜಕೀಯ ಸಂಸ್ಥೆಗಳಲ್ಲಿ ಸಂವಹನವು ಅತ್ಯುತ್ತಮ ಮಟ್ಟದಲ್ಲಿ ನಡೆಯುತ್ತಿಲ್ಲ.

ಇದಕ್ಕೆ ಪರಿಹಾರವೆಂದರೆ ರಾಜಕೀಯ ವ್ಯವಸ್ಥೆಯಲ್ಲಿ ಸಾಮರಸ್ಯ. ರಾಜಕೀಯ ವ್ಯವಸ್ಥೆಯಲ್ಲಿ ಸಾಮರಸ್ಯವಿಲ್ಲದಿದ್ದರೆ, ನೀವು ಅಪಾಯದಲ್ಲಿದ್ದೀರಿ ಎಂದು ಭಾವಿಸಿ. ನೀವು ಕಳೆದುಹೋಗಿದ್ದರೆ ಮತ್ತು ಹೊರಗಿನ ಪ್ರಪಂಚದೊಂದಿಗೆ ನಿಮಗೆ ಯಾವುದೇ ಸಂಪರ್ಕವಿಲ್ಲದಿದ್ದರೆ, ನಿಮಗೆ ವಿಷಯಗಳು ಭಯಾನಕವಾಗಿರುತ್ತವೆ ಎಂದು ಹೇಳಿದರು.

ತಂತ್ರಜ್ಞಾನ ಬಳಕೆಯಿಂದ ನೇಮಕಾತಿ ಪಾರದರ್ಶಕ: ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಸಾರ್ವಜನಿಕ ಸೇವಾ ಆಯೋಗಗಳು ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಾಗಿವೆ. ಅರ್ಹತೆ ಮತ್ತು ನ್ಯಾಯಸಮ್ಮತತೆಯನ್ನು ಎತ್ತಿಹಿಡಿಯುತ್ತವೆ ಮತ್ತು ಆಡಳಿತಕ್ಕೆ ಅಪಾರ ಕೊಡುಗೆ ನೀಡುತ್ತವೆ ಎಂದು ಹೇಳಿದರು.

1892ರಲ್ಲಿ ದಿವಾನ್ ಸರ್ ಕೆ.ಶೇಷಾದ್ರಿ ಅಯ್ಯರ್ ಅವರು ಪ್ರಾರಂಭಿಸಿದ ಮೈಸೂರು ಸಿವಿಲ್ ಸರ್ವೀಸಸ್ (ಎಂಸಿಎಸ್) ಪರೀಕ್ಷೆಯಿಂದ ಕರ್ನಾಟಕವು ಸಾರ್ವಜನಿಕ ಆಡಳಿತದಲ್ಲಿ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಈ ಪ್ರವರ್ತಕ ಹೆಜ್ಜೆಯು ವಿಶಿಷ್ಟ ಆಡಳಿತಗಾರರ ವೃಂದಕ್ಕೆ ಅಡಿಪಾಯ ಹಾಕಿತು. ಕರ್ನಾಟಕವು ಹೆಮ್ಮೆಯಿಂದ ಎತ್ತಿಹಿಡಿಯುತ್ತಿರುವ ಪರಂಪರೆಯಾಗಿದೆ ಎಂದು ಹೇಳಿದರು.

ಪ್ರಶ್ನೆಪತ್ರಿಕೆ ಸೋರಿಕೆಯಂತಹ ಸವಾಲುಗಳನ್ನು ನಿಭಾಯಿಸುವುದು ಇಂದಿಗೂ ಕರ್ನಾಟಕಕ್ಕೆ ಪ್ರಮುಖ ಆದ್ಯತೆಯಾಗಿದೆ ಎಂದ ಅವರು, ಇತರ ರಾಜ್ಯಗಳ ಅತ್ಯುತ್ತಮ ಅಭ್ಯಾಸಗಳಿಂದ ಕಲಿಯುವುದು ಮತ್ತು ಕೃತಕ ಬುದ್ಧಿಮತ್ತೆಯಂತಹ ಸುಧಾರಿತ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದರಿಂದ ನೇಮಕಾತಿ ಹೆಚ್ಚು ಪಾರದರ್ಶಕ ಮತ್ತು ಭ್ರಷ್ಟಾಚಾರ ಮುಕ್ತವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಯುಪಿಎಸ್‌ಸಿ ಅಧ್ಯಕ್ಷೆ ಪ್ರೀತಿ ಸುದಾನ್ ಮತ್ತು ಕರ್ನಾಟಕ ಸಾರ್ವಜನಿಕ ಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೆಪಿಸಿಎಲ್ ನೇಮಕಾತಿ: ಕನ್ನಡ ಭಾಷೆ ಮರು ಪರೀಕ್ಷೆಗೆ ಹೈಕೋರ್ಟ್ ಆದೇಶ



ಬೆಂಗಳೂರು,ಜ.11–ಹೈದರಾಬಾದ್–ಕರ್ನಾಟಕ ಮತ್ತು ಇತರೆ ಕೋಟಾಗಳ ಅಡಿಯಲ್ಲಿ ಜೂನಿಯರ್ ಎಂಜಿನಿಯರ್ (ಮೆಕ್ಯಾನಿಕಲ್) ಮತ್ತು ಸಹಾಯಕ ಎಂಜಿನಿಯರ್(ಮೆಕ್ಯಾನಿಕಲ್) ಹುದ್ದೆಗಳಿಗೆ ಕನ್ನಡ ಭಾಷಾ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸುವಂತೆ ಕರ್ನಾಟಕ ಹೈಕೋರ್ಟ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ(ಕೆಪಿಸಿಎಲ್)ಕ್ಕೆ ಆದೇಶಿಸಿದೆ.

ನೇಮಕಾತಿ ಅಧಿಸೂಚನೆಯು ಕನ್ನಡ ಭಾಷಾ ಪರೀಕ್ಷೆಗೆ ಗರಿಷ್ಠ 150 ಅಂಕಗಳನ್ನು ಸ್ಪಷ್ಟವಾಗಿ ಸೂಚಿಸಿದ್ದರೂ, ಈಗಾಗಲೇ ನಡೆಸಲಾದ ಪರೀಕ್ಷೆಯ ನಂತರ ಅರ್ಹತಾ ಅಂಕಗಳಾಗಿ ಕನಿಷ್ಠ 50 ಅಂಕಗಳನ್ನು ಏಕಪಕ್ಷೀಯವಾಗಿ ನಿಗದಿಪಡಿಸಿರುವುದು ನ್ಯಾಯಯುತವಾಗಿಲ್ಲ ಅಥವಾ ಪಾರದರ್ಶಕ ಕ್ರಮವಲ್ಲ ಎಂದು ನ್ಯಾಯಾಲಯ ಹೇಳಿದೆ.

ಕನ್ನಡ ಭಾಷಾ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳಿಗೆ ಬದಲಾಗಿ 36 ಅಂಕಗಳನ್ನು ಗಳಿಸಿದ್ದಾರೆ ಎಂಬ ಕಾರಣಕ್ಕೆ ವಿಜಯಪುರ ಜಿಲ್ಲೆಯ ಗೀತಾ ಚವಾಣ್ ಅವರ ಆಯ್ಕೆಯನ್ನು ತಿರಸ್ಕರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರು, ಪರೀಕ್ಷೆ ನಡೆಸಿದ ನಂತರ ನಿಗದಿಪಡಿಸಲಾದ ಕನಿಷ್ಠ 50 ಅಂಕಗಳ ಅರ್ಹತೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸೇವಾ(ಕೇಡರ್, ನೇಮಕಾತಿ, ಪ್ರೊಬೇಷನ್, ಬಡ್ತಿ ಮತ್ತು ಹಿರಿತನ) ನಿಯಮಗಳು, 1988ರ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಹೇಳಿದೆ.

ಬ್ರಾಂಡೆಡ್ ಗಾರ್ಮೆಂಟ್ಸ್, ಶೂ ವಿಶೇಷ ರಿಯಾಯ್ತಿ ಮಾರಾಟ



ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬ್ರಾಂಡೆಡ್ ಗಾರ್ಮೆಂಟ್ಸ್ ಮತ್ತು ಶೂ ವಿಶೇಷ ರಿಯಾಯ್ತಿ ಮಾರಾಟ

ಮೈಸೂರು, ಜ.11– ಬ್ರಾಂಡೆಡ್ ಗಾರ್ಮೆಂಟ್ಸ್ ಮತ್ತು ಶೂ ವಿಶೇಷ ರಿಯಾಯ್ತಿ ಮಾರಾಟವನ್ನು ಜನವರಿ 17 ರವರೆಗೆ ಮೈಸೂರು, ಕುವೆಂಪುನಗರ, ಉದಯರವಿ ರಸ್ತೆಯಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ.

ಐವತ್ತು ಸಾವಿರ ವಿವಿಧ ಬಗೆಯ ಬ್ರಾಂಡೆಡ್ ಸಿದ್ಧ ಉಡುಪುಗಳು, ಸೀರೆ ಗಳು ಮತ್ತು ಶೂಗಳ ಬೃಹತ್ ಮಾರಾಟವಿದು. ಬ್ರಾಂಡೆಡ್ ಫುಟ್‌ವೇರ್ ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್ಸ್, ಜಾಕೆಟ್ಸ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್ಸ್‌ಗಳು ಇಲ್ಲಿ ಲಭ್ಯವಿರುತ್ತದೆ. ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ಆಫರ್ ದರದಲ್ಲಿ ಲಭ್ಯವಿದೆ. ಬ್ರಾಂಡೆಡ್ ಪೂಮಾ, ನೈಕ್, ವುಡ್‌ಲ್ಯಾಂಡ್, ಅಂತ ಯುಎಸ್ ಪೋಲೋ, ಎಸಿಕ್ಸ್, ಕೆಟಿಯು, ನ್ಯೂ ಬ್ಯಾಲೆನ್ಸ್, ಕ್ಯಾಂಪಸ್, ವಿವಿಧ ಕಂಪನಿಗಳ ಬ್ರಾಂಡೆಡ್ ಶೂಗಳು, ಭಾರಿ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿವೆ. ಪ್ರತಿದಿನ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಈ ಪ್ರದರ್ಶನ ಹಾಗೂ ಮಾರಾಟ ಸೌಲಭ್ಯವಿದೆ. ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ.

ಪುಷ್ಪ–2 ಕಾಲ್ತುಳಿತ ಪ್ರಕರಣ

ನಟ ಅಲ್ಲು ಅರ್ಜುನ್‌ಗೆ ಬಿಗ್ ರಿಲೀಫ್



ಹೈದರಾಬಾದ್, ಜ.11– ಪುಷ್ಪ 2 ಕಾಲ್ತುಳಿತ ಪ್ರಕರಣದಲ್ಲಿ ತೆಲುಗಿನ ಖ್ಯಾತ ನಟ ಅಲ್ಲು ಅರ್ಜುನ್‌ಗೆ ಬಿಗ್ ರಿಲೀಫ್ ಸಿಕ್ಕಿದೆ. ಸ್ಥಳೀಯ ನ್ಯಾಯಾಲಯವೊಂದು ಅವರ ಜಾಮೀನಿನ ಷರತ್ತನ್ನು ಸಡಿಲಗೊಳಿಸಿದ್ದು, ಪ್ರತಿ ಭಾನುವಾರ ತನಿಖಾಧಿಕಾರಿ ಮುಂದೆ ಹಾಜರಾಗುವುದರಿಂದ ವಿನಾಯಿತಿ ನೀಡಿದೆ.

ಅಗತ್ಯವಿದ್ದಾಗ ಚಿಕ್ಕಡಪಲ್ಲಿ ಪೊಲೀಸ್ ಠಾಣೆಯ ಎಸ್‌ಎಚ್‌ಒ ಮುಂದೆ ಹಾಜರಾಗಬೇಕು ಎಂಬ ಷರತ್ತಿನೊಂದಿಗೆ ನಿರ್ದಿಷ್ಟ ದೇಶಗಳಿಗೆ ವಿದೇಶ ಪ್ರಯಾಣಕ್ಕೆ ನ್ಯಾಯಾಲಯ ಅವರಿಗೆ ಅನುಮತಿ ನೀಡಿದೆ.

ಪ್ರತಿ ಟ್ರಿಪ್‌ಗೆ ಅವರ ಪ್ರಯಾಣದ ವೇಳಾಪಟ್ಟಿಯನ್ನು SHOಗೆ ತಿಳಿಸಲು ಮತ್ತು ಚಾರ್ಜ್‌ಶೀಟ್ ಸಲ್ಲಿಸುವವರೆಗೆ ವಿದೇಶದಲ್ಲಿ ಅವರು ತಂಗಿರುವ ಸ್ಥಳದ ವಿವರಗಳನ್ನು ಒದಗಿಸುವಂತೆ ನಿರ್ದೇಶಿಸಲಾಗಿದೆ. ಉಳಿದ ಜಾಮೀನು ಷರತ್ತುಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದು ನ್ಯಾಯಾಲಯ ಶುಕ್ರವಾರ ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.

ಜಾಮೀನು ಷರತ್ತುಗಳನ್ನು ಸಡಿಲಿಸುವಂತೆ ಅಲ್ಲು ಅರ್ಜುನ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಹಿಂದೆ ಜ.3ರಂದು ಅಲ್ಲು ಅರ್ಜುನ್‌ಗೆ ನಿಯಮಿತ ಜಾಮೀನು ನೀಡುವಾಗ ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರ ನಡುವೆ ಎರಡು ತಿಂಗಳವರೆಗೆ ಅಥವಾ ಚಾರ್ಜ್‌ಶೀಟ್ ಸಲ್ಲಿಕೆಯಾಗುವವರೆಗೆ ತನಿಖಾಧಿಕಾರಿಯ ಮುಂದೆ ಹಾಜರಾಗುವಂತೆ ನ್ಯಾಯಾಲಯ ಸೂಚಿಸಿತ್ತು

ಕೋರ್ಟ್ ಅನುಮತಿ ಪಡೆಯದೆ ದೇಶ ತೊರೆಯದಂತೆ ನಿರ್ಬಂಧಿಸಿತ್ತು. ಅಲ್ಲದೇ ತನಿಖೆಗೆ ಸಹಕರಿಸುವಂತೆ ಮತ್ತು ತನಿಖೆಯಲ್ಲಿ ಮಧ್ಯಪ್ರವೇಶಿಸುವುದು ಅಥವಾ ಯಾವುದೇ ರೀತಿಯಲ್ಲಿ ಸಾಕ್ಷಿಗಳ ಮೇಲೆ ಪ್ರಭಾವ ಬೀರುವುದನ್ನು ತಡೆಯುವಂತೆ ನ್ಯಾಯಾಲಯ ನಿರ್ದೇಶಿಸಿತ್ತು.

ಅಭಿನಂದನೆ



ಮೈಸೂರು ದಸರಾ ವಸ್ತುಪ್ರದರ್ಶನದ ಲಲಿತ ಕಲಾ ಮತ್ತು ಕರಕುಶಲ ಉಪಸಮಿತಿಯ ಮುಕ್ತಾಯ ಸಮಾರಂಭದಲ್ಲಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ (ಪರಿಶಿಷ್ಟ ಜಾತಿ) ಉಪಾಧ್ಯಕ್ಷ ಸುಭಾಷ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಶೌಕತ್ ಅಲಿ, ಉಪಾಧ್ಯಕ್ಷ ಚಂದ್ರು, ಶಾಂತಮ್ಮ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾ ಡಿ.ಅವಧಾನಿಗೆ ಪಿಹೆಚ್‌ಡಿ ಪದವಿ



ಮೈಸೂರು,ಜ.11–ಡಾ.ರತಿ ಬಿ.ಮೆನನ್ ಅವರ ಮಾರ್ಗದರ್ಶನದಲ್ಲಿ ವಿದ್ಯಾ ಡಿ.ಅವಧಾನಿ ಅವರು ವಾಣಿಜ್ಯಶಾಸ್ತ್ರದಲ್ಲಿ ಮಂಡಿಸಿದ "ಎ ಸ್ಟಡಿ ಆನ್ ಸ್ಪಿರಿಚುಯಲ್ ಇಂಟೆಲಿಜೆನ್ಸ್, ಎಮೋಶನಲ್ ಇಂಟೆಲಿಜೆನ್ಸ್ ಅಂಡ್ ವರ್ಕ್‌ಲೈಫ್ ಬ್ಯಾಲನ್ಸ್ ಅಮೋಂಗ್ ದಿ ಎಂಪ್ಲೋಯೀಸ್ ಆಫ್ ಪ್ರೈವೇಟ್ ಇನ್‌ಶ್ಯೂರನ್ಸ್ ಸೆಕ್ಟರ್" ಮಹಾಪ್ರಬಂಧಕ್ಕೆ ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ ಪಿಹೆಚ್.ಡಿ ಪದವಿ ನೀಡಿದೆ.

ಜ.19, ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ

ಮೈಸೂರು, ಜ. 11– ಮೈಸೂರಿನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ಬೆಳ್ಳಿ ಹಬ್ಬದ ಉತ್ಸವದ ಅಂಗವಾಗಿ ಜ.19ರಂದು ಬೆಳಗ್ಗೆ 8.30ರಿಂದ ಸಂಜೆ 7.30ರವರೆಗೆ ಜಗನ್ಮೋಹನ ಅರಮನೆಯಲ್ಲಿ ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯು ವಿವಿಧ ವಯೋಮಾನಗಳಿಗನುಗುಣವಾಗಿ ಎಂಟು ಗುಂಪುಗಳಲ್ಲಿ, ಸ್ತ್ರೀ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ನಡೆಯಲಿದೆ. ಭಾಗವಹಿಸಲು ಆಸಕ್ತಿಯುಳ್ಳವರು ಜನವರಿ 15ರೊಳಗೆ ಮೊ. 9449886387 ಮೂಲಕ ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ.

ದೆಹಲಿ ಮದ್ಯ ನೀತಿಯಿಂದ ಸರ್ಕಾರದ ಬೊಕ್ಕಸಕ್ಕೆ 2,026 ಕೋಟಿ ರೂ. ನಷ್ಟ: ಸಿಎಜಿ ವರದಿ



ಕೇಜ್ರಿವಾಲ್


ನವದೆಹಲಿ, ಜ11– ದೆಹಲಿ ಮದ್ಯ ನೀತಿ ಅಕ್ರಮದಿಂದಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರೋಬ್ಬರಿ 2,026 ಕೋಟಿ ರೂ. ಆದಾಯ ನಷ್ಟವಾಗಿದೆ ಎಂದು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ವರದಿ ಬಹಿರಂಗಪಡಿಸಿದೆ.

ಮದ್ಯ ನೀತಿಯಲ್ಲಿ ಬಹಳಷ್ಟು ಲೋಪದೋಷಗಳು ಕಂಡುಬಂದಿದ್ದು, ಪರವಾನಗಿ ನೀಡುವಲ್ಲಿ ನಿಯಮ ಉಲ್ಲಂಘನೆ ಮಾಡಿರುವುದು ವರದಿಯಲ್ಲಿ ಕಂಡುಬಂದಿದೆ. ಈ ಹಿಂದೆ ಕೇಜ್ರಿವಾಲ್ ನೇತೃತ್ವದ ಸರ್ಕಾರ ಜಾರಿಗೊಳಿಸಿದ್ದ ಮದ್ಯ ನೀತಿಯು ಉದ್ದೇಶಿತ ಗುರಿ ಸಾಧಿಸುವಲ್ಲಿ ವಿಫಲವಾಗಿದೆ. ಮುಖ್ಯವಾಗಿ ಆಪ್ ನಾಯಕರು ಕಿಕ್‌ಬ್ಯಾಕ್ ಲಾಭ ಪಡೆದಿದ್ದಾರೆ. ಮದ್ಯ ನೀತಿ ಅನುಷ್ಠಾನಗೊಳಿಸುವಲ್ಲಿ ಅಂದಿನ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ನೇತೃತ್ವದ ಸಚಿವರ ಗುಂಪು ತಜ್ಞರ ಸಮಿತಿಯ ಶಿಫಾರಸುಗಳನ್ನು ಕಡೆಗಣಿಸಿದೆ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖವಾಗಿದೆ ಎಂದು ವರದಿಗಳು ತಿಳಿಸಿವೆ.

ಹೊಸ ಮದ್ಯ ನೀತಿ ದೆಹಲಿಯ ವಿಧಾನಸಭೆಯಲ್ಲಿ ಮಂಡನೆಯಾಗದೆಯೇ ಜಾರಿಗೆ ತರಲಾಗಿದೆ. ನೀತಿಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ಕ್ಯಾಬಿನೆಟ್ ಅಥವಾ ರಾಜ್ಯಪಾಲರ ಅನುಮೋದನೆಯಿಲ್ಲದೆ ತೆಗೆದುಕೊಳ್ಳಲಾಗಿದೆ. ಎಲ್ಲಾ ಘಟಕಗಳಿಗೆ ಬಿಡ್ ಮಾಡಲು ಅವಕಾಶ ಕಲ್ಪಿಸಲಾಗಿತ್ತು ಅಲ್ಲದೇ ಬಿಡ್‌ದಾರರ ಆರ್ಥಿಕ ಪರಿಸ್ಥಿತಿಯನ್ನೂ ಪರಿಶೀಲಿಸಿರಲಿಲ್ಲ ಇದರೊಂದಿಗೆ ಹೆಚ್ಚುವರಿಯಾಗಿ ನಿಯಮ ವಿಧಿಸುವವರಿಗೆ ಉದ್ದೇಶಪೂರ್ವಕವಾಗಿ ದಂಡ ವಿಧಿಸುವುದನ್ನು ಕೈಬಿಡಲಾ ಗಿದೆ ಎಂದು ಸಿಎಜಿ ವರದಿ ಹೇಳಿದೆ.

ಏನಿದು ಹಗರಣ?: ಕೋವಿಡ್ 2ನೇ ಅಲೆ ಉತ್ತುಂಗದಲ್ಲಿದ್ದಾಗ ಮನೀಶ್ ಸಿಸೋಡಿಯಾ 2021ರ ಏಪ್ರಿಲ್‌ನಲ್ಲಿ ಕ್ಯಾಬಿನೆಟ್ ಅನುಮೋದನೆ ಇಲ್ಲದೇ ಮದ್ಯದಂಗಡಿ ಟೆಂಡರ್‌ಗೆ ಅರ್ಜಿ ಸಲ್ಲಿಸಿದವರ 144.36 ಕೋಟಿ ಪರವಾನಗಿ ಶುಲ್ಕವನ್ನು ಮನ್ನಾ ಮಾಡಲು ಆದೇಶ ಹೊರಡಿಸು ತ್ತಾರೆ. ಈ ಮಹತ್ವದ ನಿರ್ಧಾರದ ಬಳಿಕ ಮೇ ತಿಂಗಳಿನಲ್ಲಿ ಕೇಜ್ರಿವಾಲ್ ನೇತೃತ್ವದ ಕ್ಯಾಬಿನೆಟ್ ಸಭೆ ಕರೆದು ಅಬಕಾರಿ ನೀತಿಯಲ್ಲಿ ಬದಲಾವಣೆ ಮಾಡುತ್ತದೆ. ಮದ್ಯವನ್ನು ಹೋಮ್ ಡೆಲಿವರಿ ಮಾಡಬಹುದು. ಅಲ್ಲದೇ ಮದ್ಯದ ಅಂಗಡಿಗಳನ್ನು ಬೆಳಗಿನ ಜಾವ 3 ಗಂಟೆಯವರೆಗೆ ತೆರೆಯಬಹುದು. ಪರವಾನಗಿದಾರರು ಅನಿಯಮಿತ ರಿಯಾಯಿತಿಗಳನ್ನು ನೀಡಲು ನೀತಿ ಅನುಮತಿ ಕಲ್ಪಿಸಿತ್ತು. ಲೆಫ್ಟಿನೆಂಟ್ ಗವರ್ನರ್ ಅವರು ಕ್ಯಾಬಿನೆಟ್ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಳಿಕ ದೆಹಲಿ ಸರ್ಕಾರ ತನ್ನ ನಿರ್ಧಾರ ವನ್ನು ಹಿಂದಕ್ಕೆ ಪಡೆಯುತ್ತದೆ. ಆದರೆ ಸಿಸೋಡಿಯಾ ಕೈಗೊಂಡ ನಿರ್ಧಾರ ಮುಂದುವರಿಯುತ್ತದೆ.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣಾ ಪ್ರಚಾರ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ 2025–30ನೇ ಸಾಲಿನ ಮಂಡಳಿ ನಿರ್ದೇಶಕರ ಚುನಾವಣೆಯ ಎಸ್‌ಬಿಎಂ ಮಂಜು ನೇತೃತ್ವದ ತಂಡದಿಂದ ನಗರದ ವಿವಿಧ ಬಡಾವಣೆಗಳಲ್ಲಿ ಪ್ರಚಾರ ನಡೆಸಲಾಯಿತು. ಈ ವೇಳೆ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಎಸ್‌ಬಿಎಂ ಮಂಜು, ನಿರ್ದೇಶಕರಾದ ರವಿಕುಮಾರ್ (ರಾಜಕೀಯ), ಎಸ್.ಅರವಿಂದ. ಎಸ್.ಆರ್. ರವಿಕುಮಾರ್, ಮಂಚಪ್ಪ, ವಸಂತ ಮುನಿಶ್, ಭಾಗ್ಯಮ್ಮ ಕುಮಾರ್‌ಗೌಡ, ರೋಹಿತ್, ವಿಕಾಸ್ ವೈ ಉಪಸ್ಥಿತರಿದ್ದರು.

ಜ.15, ಸ್ವಾಮಿ ವಿವೇಕಾನಂದರ ಜನ್ಮ ದಿನೋತ್ಸವ



ಮೈಸೂರು,ಜ.11–ಮೈಸೂರಿನ ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಜ.15ರಂದು ಸಂಜೆ 5.30 ಗಂಟೆಗೆ ಜೆ.ಪಿ.ನಗರದಲ್ಲಿರುವ ಮಾಧವ ಶೆಣೈ ಸಭಾಂಗಣದಲ್ಲಿ ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಶಿವಕುಮಾರ್ ಸಾರಥ್ಯದಲ್ಲಿ ಸ್ವಾಮಿ ವಿವೇಕಾನಂದರ 163ನೇ ಜನ್ಮ ದಿನೋತ್ಸವ ಸಮಾರಂಭ ಮತ್ತು ಮುದ್ದುರಾಮ ಖ್ಯಾತಿಯ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ತುಮಕೂರಿನ ಸುಕ್ಷೇತ್ರ ಹಿರೇಮಠ ತಪೋವನದ ಪೀಠಾಧಿಪತಿ ಡಾ.ಶ್ರೀ ಶಿವಾನಂದ ಶಿವಾಚಾರ್ಯ ಶ್ರೀ ಕಾರ್ಯಕ್ರಮ ಉದ್ಘಾಟಿಸುವುದರೊಂದಿಗೆ ವಿಶೇಷ ಉಪನ್ಯಾಸ ನೀಡುವರು. ಸಂಸ್ಕೃತಿ ಚಿಂತಕ ಶಂಕರ್ ದೇವನೂರು ಅಧ್ಯಕ್ಷತೆ ವಹಿಸುವರು. ಪ್ರಾಧ್ಯಾಪಕರಾದ ಬೆಟ್ಟಸ್ವಾಮಿ, ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಇದೇ ವೇಳೆ 69 ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮತ್ತು ವಿಶಿಷ್ಟ ಸೇವೆ ಸಲ್ಲಿಸಿದ ಸಂಸ್ಥೆಯ ನೌಕರರಿಗೆ ಪ್ರೋತ್ಸಾಹ ಧನ ವಿತರಿಸಲಾಗುವುದು.

ಇಂದು ಎಂಜಿಪಿಯಿಂದ ವಿಶ್ವ ಗ್ರಾಹಕರ ದಿನಾಚರಣೆ

ಮೈಸೂರು, ಜ. 11–ಮೈಸೂರು ಗ್ರಾಹಕರ ಪರಿಷತ್ ವತಿಯಿಂದ ಜ.12ರಂದು ಸಂಜೆ 4 ಗಂಟೆಗೆ ಯಾದವಗಿರಿ ಎಂಜಿಪಿ ಕಚೇರಿಯಲ್ಲಿ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಪ್ರಜೆಗಳ ಜೀವನ ಶೈಲಿಗಳನ್ನು ಸುಸ್ಥಿರತೆಯೊಂದಿಗೆ ಉತ್ತಮಗೊಳಿಸುವುದರ ಜೊತೆಗೆ, ಗ್ರಾಹಕನ ಸುರಕ್ಷತೆ ಮತ್ತು ಸಬಲೀಕರಣಗಳೇ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯ ಧ್ಯೇಯ. ಅದರಲ್ಲೂ, ಮೈಸೂರಿನ ನಾಗರಿಕರಲ್ಲಿ ಇತ್ತೀಚೆಗೆ ಕ್ಷೀಣಿಸುತ್ತಿರುವ ಗ್ರಾಹಕ ಪ್ರಜ್ಞೆ ಮತ್ತು ಪಾತ್ರಗಳ ಬಗ್ಗೆ ಅರಿವು ಮೂಡಿಸಲಾಗುವುದು. NSS ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದಲ್ಲಿ ಚರ್ಚೆಗಳಿಗೆ ಹೊಸ ದಿಶೆ, ಆಯಾಮ ದೊರಕಬಹುದು. ಹಾಗಾಗಿ ಈ ಬಾರಿಯ ವಿಶ್ವ ಗ್ರಾಹಕ ದಿನಾಚರಣೆಯು ಹಿಂದಿಗಿಂತಲೂ ಮಹತ್ವದ್ದಾಗಿದೆ. ಮಾಹಿತಿಗೆ ದೂರವಾಣಿ: 0821–2515150 ಸಂಪರ್ಕಿಸಬಹುದು.

ಶ್ರೀ ರಾಮ ಸೇವಾ ಅರಸು ಮಂಡಳಿ ನೂತನ ಪದಾಧಿಕಾರಿಗಳು

ಮೈಸೂರು,ಜ.11–ನಂಜರಾಜ ಬಹದ್ದೂರ್ ಎಜುಕೇಷನ್ ಛಾರಿಟಿ ಫಂಡ್ ಬೋರ್ಡಿಂಗ್, ಶ್ರೀ ರಾಮ ಸೇವಾ ಅರಸು ಮಂಡಳಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಸುಂದರ ರಾಜೇ ಅರಸ್, ಉಪಾಧ್ಯಕ್ಷರಾಗಿ ಗಣೇಶ್‌ರಾಜೇ ಅರಸ್ ಡಿ., ಕಾರ್ಯದರ್ಶಿಯಾಗಿ ಬಿ.ಜಿ. ನಟರಾಜೇ ಅರಸ್, ಸಹ ಕಾರ್ಯದರ್ಶಿಯಾಗಿ ವೀರರಾಜೇ ಅರಸ್, ಖಜಾಂಚಿಯಾಗಿ ವೆಂಕಟಸುಬ್ಬರಾಜೇ ಅರಸ್ ಕೆ.ವಿ., ನಿರ್ದೇಶಕರಾಗಿ ಶ್ರೀಮತಿ ವಿಜಯ ಅರಸ್, ರಘುರಾಜೇ ಅರಸ್, ಕೃಷ್ಣೇ ಅರಸ್, ಎಂ.ಸಿ.ವಿನಯ್, ಶ್ರೀಮತಿ ಸುಲೇಖ ಅರಸ್, ಪ್ರಕಾಶ್‌ರಾಜೇ ಅರಸ್, ಶ್ರೀಮತಿ ಅಶ್ವಿನಿ ಸಿ., ಮಹೇಶ್ ಅರಸ್ ಕೆ.ಎಸ್., ಮಹೇಶ್ ಅರಸ್ ಕೆ., ಅಭಿನಂದನ್ ಅರಸ್ ಆಯ್ಕೆಯಾಗಿದ್ದಾರೆ.

ಸರ್ಕಾರಿ ಶಾಲೆಗಳು ಆಧುನಿಕ ಗುರುಕುಲಗಳಿದ್ದಂತೆ

ಕುಂಬಾರಕೊಪ್ಪಲಿನ ಸರ್ಕಾರಿ ಶಾಲೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಬಣ್ಣನೆ



ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಶನಿವಾರ ಆಯೋಜಿಸಿದ್ದ ಚಾಮರಾಜ ಕ್ಷೇತ್ರದ ಪ್ರೌಢಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶುಭ ಸಂದೇಶ ಪತ್ರ, ಕಲಿಕಾ ಬೆಂಬಲ ಪುಸ್ತಕ ವಿತರಿಸಲಾಯಿತು.

ಮೈಸೂರು, ಜ.11(ಜಿಎ)–ಸರ್ಕಾರಿ ಶಾಲೆಗಳು ಆಧುನಿಕ ಗುರುಕುಲಗಳಿದ್ದಂತೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಬಣ್ಣಿಸಿದ್ದಾರೆ.

ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಆಯೋಜಿಸಿದ್ದ ಚಾಮರಾಜ ಕ್ಷೇತ್ರದ ಪ್ರೌಢಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶುಭ ಸಂದೇಶ ಪತ್ರ, ಕಲಿಕಾ ಬೆಂಬಲ ಪುಸ್ತಕ ವಿತರಣೆ, 2024ರ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯೋಪಾಧ್ಯಾಯರ ಅಭಿನಂದನಾ ಸಮಾರಂಭ ಉದ್ಘಾಟಿಸಿ, ಅವರು ಮಾತನಾಡಿದರು.

ಖಾಸಗಿ ಶಾಲೆಯಲ್ಲಿ ಓದಿದವರು ಇಂಜಿನಿಯರ್, ವೈದ್ಯರು ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸಿಕೊಂಡು ಲಕ್ಷಾಂತರ ರೂ. ಸಂಬಳ ಪಡೆದುಕೊಳ್ಳುತ್ತಾರೆ. ಆದರೆ, ನಿಜವಾಗಿಯೂ ದೇಶಕ್ಕೆ ಕೊಡುಗೆ ನೀಡಿದ ಬಹುತೇಕ ಮಹನೀಯರು ಸರ್ಕಾರಿ ಶಾಲೆಯಲ್ಲಿ ಓದಿ ಸಾಧನೆ ಮಾಡಿದ್ದಾರೆ. ಆದ್ದರಿಂದ ಪೋಷಕರು ಸರ್ಕಾರಿ ಶಾಲೆ ಎಂದರೆ ತಾತ್ಸಾರ ಮಾಡಬೇಡಿ ಎಂದು ಅವರು ಹೇಳಿದರು.

ಸರ್ಕಾರಿ ಶಾಲೆ ಮಕ್ಕಳು ಯಾವುದರಲ್ಲಿಯೂ ಕಡಿಮೆ ಇಲ್ಲ. ಶಾಲೆಯಿಂದಲೇ ಸಾಕಷ್ಟು ಸಾಮರ್ಥ್ಯವನ್ನು ಬೆಳೆಸಿಕೊಂಡು ಸಮಾಜದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುತ್ತಾರೆ. ಸರ್ಕಾರಿ ಶಾಲೆಯ ಶಿಕ್ಷಕರು ಬಡತನದಿಂದ ಸರ್ಕಾರಿ ಶಾಲೆಗಳಲ್ಲಿ ಓದಿ ಮಕ್ಕಳಿಗೂ ಉಜ್ವಲ ಭವಿಷ್ಯ ಕಟ್ಟಿಕೊಡಲು ಶ್ರಮಿಸುತ್ತಾರೆ ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶುಭ ಸಂದೇಶ ಪತ್ರ, ಕಲಿಕಾ ಬೆಂಬಲ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಸಾಮಾನ್ಯ ಕಾರ್ಯಕ್ರಮಗಳಂತೆ ಮಾಡಬಹುದಾಗಿತ್ತು. ಆದರೆ, ನಾನೇ ಈ ರೀತಿ ವಿಶೇಷ ಕಾರ್ಯರೂಪಿಸಿ ಎಂದು ತಿಳಿಸಿ, ಕುಂಬಾರಕೊಪ್ಪಲಿನಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲು ಸೂಚಿಸಿದ್ದೆ ಎಂದ ಅವರು, ಮೈಸೂರಿನ ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆಜಿ.ಕೊಪ್ಪಲಿನಲ್ಲಿ ಇಂದಿಗೂ ಗ್ರಾಮಗಳ ವಾತಾವರಣವಿದೆ. ಅಲ್ಲಿನ ಜನರಿಗೆ ಗ್ರಾಮೀಣ ರೀತಿಯ ಜೀವನವೇ ಅಚ್ಚುಮೆಚ್ಚು. ಈ ಭಾಗದಲ್ಲಿ ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸಲು ಗ್ರಾಮದ ಸಹಕಾರವು ಮುಖ್ಯವಾಗಿರುವುದರಿಂದ ಗ್ರಾಮಸ್ಥರೊಟ್ಟಿಗೆ ಈ ಕಾರ್ಯಕ್ರಮ ಆರಂಭಿಸಿದ್ದೇನೆ. ಮುಂದಿನ ದಿನಗಳಲ್ಲಿ ಇದು ಕ್ಷೇತ್ರದಾದ್ಯಂತ ನಡೆಯುತ್ತದೆ ಎಂದರು.

ಕಲಿಕಾ ಬೆಂಬಲ ಪುಸ್ತಕದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೇಕಿರುವ ಎಲ್ಲಾ ರೀತಿಯ ಅಂಶಗಳಿವೆ. ಒಂದೆರಡು ಅಂಕಗಳಿಂದ ಫೇಲ್ ಆಗುವವರ ಸಂಖ್ಯೆ ಹೆಚ್ಚಿರುವುದರಿಂದ ಅಂತಹವರಿಗೆ ಈ ಪುಸ್ತಕ ಸಾಕಷ್ಟು ಸಹಕಾರಿಯಾಗಲಿದೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಟರ್ನಿಂಗ್ ಪಾಯಿಂಟ್ ಆಗಿರುವುದರಿಂದ ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ಹಾಕಿ ಅಭ್ಯಾಸ ಮಾಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ 2024ರ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ 21 ಶಾಲಾ ಮುಖ್ಯೋಪಾಧ್ಯಾಯರನ್ನು ಅಭಿನಂದಿಸಿ, ಮಕ್ಕಳಿಗೆ ಕಲಿಕಾ ಬೆಂಬಲ ಪುಸ್ತಕ ವಿತರಿಸಿದರು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ, ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಚೇತನ, ಅರ್ಪಣ, ಯೋಗಲಕ್ಷ್ಮಿ, ಸೇರಿದಂತೆ ಗ್ರಾಮಸ್ಥರು, ಮುಖಂಡರು ಉಪಸ್ಥಿತರಿದ್ದರು.

ಪ್ರಿನ್ಸೆಸ್ ರಸ್ತೆಯಲ್ಲಿ ಮಹಾರಾಣಿ ಪುತ್ಥಳಿ ನಿರ್ಮಾಣ

ದಾಸಪ್ಪ ವೃತ್ತದಿಂದ ಒಂಟಿಕೊಪ್ಪಲ್ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂದು ನಾಮಕರಣ ಮಾಡಿ, ನಾಮಫಲಕ ಅಳವಡಿಸುತ್ತೇವೆ. ಜೊತೆಗೆ ಈ ಮಾರ್ಗದಲ್ಲಿ ಮಹಾರಾಣಿಯವರ ಒಂದು ಪುತ್ಥಳಿ ನಿರ್ಮಿಸುತ್ತೇವೆ. ಈ ನಡುವೆ ಜನರಿಗೆ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ ಮಾಡಿರುವ ಕಾರ್ಯಗಳ ಬಗ್ಗೆ ಮೆಚ್ಚುಗೆ ಇದೆ. ಈ ಹಿನ್ನೆಲೆಯಲ್ಲಿ ರಸ್ತೆಗೆ ಅವರ ಹೆಸರು ಇಡುವುದರಿಂದ ಯಾರೂ ಆಕ್ಷೇಪ ವ್ಯಕ್ತಪಡಿಸುವುದಿಲ್ಲ ಎಂಬ ಭರವಸೆ ಇದೆ. ಈ ರಸ್ತೆಗೆ ಒಂಟಿಕೊಪ್ಪಲ್ ವೃತ್ತದ ವರೆಗೆ ಮಾತ್ರ ಪ್ರಿನ್ಸೆಸ್ ರಸ್ತೆ ಎಂದು ಹೆಸರಿದೆ. ಆದರೆ, ಒಂಟಿಕೊಪ್ಪಲ್ ವೃತ್ತದಿಂದ ರಾಯಲ್ ಇನ್ ಜಂಕ್ಷನ್‌ವರೆಗೆ ಕೆಆರ್‌ಎಸ್ ರಸ್ತೆ ಎಂದು ಹೆಸರಿದೆ. ಈ ಹಿನ್ನೆಲೆಯಲ್ಲಿ ಅಲ್ಲಿ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಹೆಸರು ಇಡಲು ನಿರ್ಧರಿಸಲಾಗಿದೆ. ಈ ಕುರಿತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಬಳಿಯೂ ಚರ್ಚಿಸಲಾಗಿದೆ.

ಮೈಸೂರು ಮಿತ್ರ

ಶ್ರೀರಂಗಪಟ್ಟಣದ ಪ್ರಮುಖ ಆಸ್ತಿಗಳು ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಾಗಿರುವುದನ್ನು ಖಂಡಿಸಿ

ಜ.20ಕ್ಕೆ ಶ್ರೀರಂಗಪಟ್ಟಣ ಬಂದ್‌ಗೆ ಕರೆ

ಶ್ರೀರಂಗಪಟ್ಟಣ: ಶ್ರೀರಂಗಪಟ್ಟಣದ ಪ್ರಮುಖ ಆಸ್ತಿಗಳು ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಾಗಿರುವುದನ್ನು ಖಂಡಿಸಿ ಜ.20 ರಂದು ಶ್ರೀರಂಗಪಟ್ಟಣ ಬಂದ್‌ಗೆ ವಿವಿಧ ಸಂಘಟನೆಗಳು ಕರೆ ನೀಡಿವೆ.

ಶ್ರೀರಂಗಪಟ್ಟಣದ ಶ್ರೀ ಲಕ್ಷ್ಮಿ ನರಸಿಂಹ ದೇವಸ್ಥಾನದ ಆವರಣದಲ್ಲಿ ಹಿಂದೂ ಜಾಗರಣಾ ವೇದಿಕೆ, ಆರ್‌ಎಸ್‌ಎಸ್, ರೈತ ಸಂಘ, ಒಕ್ಕಲಿಗರ ಸಂಘ, ಸವಿತ ಸಮಾಜ, ದಲಿತ ಸಂಘಟನೆ, ಪುರಸಭಾ ಸದಸ್ಯರು, ವಕೀಲರು ಸೇರಿದಂತೆ ಪಕ್ಷಾತೀತವಾಗಿ ವಿವಿಧ ಸಂಘಟನೆಗಳು ಒಗ್ಗೂಡಿ "ತಾಲೂಕು ರೈತ ಹಿತ ರಕ್ಷಣಾ ಸಮಿತಿ" ಹೆಸರಲ್ಲಿ ವಕ್ಫ್ ಮಂಡಳಿ ವಿರುದ್ಧ ಬೃಹತ್ ಹೋರಾಟಕ್ಕೆ ಕರೆ ನೀಡಲಾಯಿತು.

ಅಂದು ತಾಲೂಕಿನಾದ್ಯಂತ ಸ್ವಯಂ ಪ್ರೇರಿತರಾಗಿ ಬಂದ್ ಮಾಡಿ, ಪ್ರತಿಯೊಬ್ಬರು ಸಹಕಾರ ನೀಡುವ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು. ಜೊತೆಗೆ ಪಟ್ಟಣದ ಬೆಂಗಳೂರು–ಮೈಸೂರು ಹೆದ್ದಾರಿ ಬಳಿ ಇರುವ ಕುವೆಂಪು ವೃತ್ತದಿಂದ ತಾಲೂಕು ಕಚೇರಿ ವರೆವಿಗೂ ಪ್ರತಿಭಟನೆ ನಡೆಸಲಾಗುವುದು. ಪ್ರತಿಭಟನಾ ಸ್ಥಳಕ್ಕೆ ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಆಗಮಿಸಿ ವಕ್ಫ್ ಬೋರ್ಡ್ ಸಮಸ್ಯೆಯನ್ನು ಶಾಶ್ವತವಾಗಿ ಬಗೆ ಹರಿಸಲು ದಿನಾಂಕ ನಿಗದಿ ಮಾಡಿ, ಕಾರ್ಯಪ್ರವೃತ್ತರಾಗಬೇಕು. ಇಲ್ಲದಿದ್ದರೆ ಅಮರಣಾಂತರ ಉಪವಾಸ ಸತ್ಯಾಗ್ರಹ ನಡೆಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಶ್ರೀರಂಗಪಟ್ಟಣ ತಾಲೂಕಿನಲ್ಲಿ ರೈತರ ಜಮೀನು, ದೇಗುಲ, ಶಾಲೆ, ಸೇರಿದಂತೆ ಸರ್ಕಾರಿ ಕಚೇರಿ ಹಾಗೂ ಸರ್ಕಾರಿ ಸ್ಮಾರಕಗಳನ್ನು ವಕ್ಫ್ ಬೋರ್ಡ್ ಹೆಸರಿಗೆ ಸೇರಿಸಿಕೊಳ್ಳುತ್ತಿರುವ ಹಿನ್ನೆಲೆ ವಿವಿಧ ಸಂಘಟನೆಗಳ ನೂರಾರು ಮಂದಿ ಮುಖಂಡರು ಸಭೆ ನಡೆಸಿ ತಾಲೂಕಿನ ಜನತೆ ಬೃಹತ್ ಹೋರಾಟಕ್ಕೆ ಮುಂದಾಗುವಂತೆ ಕರೆ ನೀಡಿದರು.



ಶ್ರೀರಂಗಪಟ್ಟಣ ಬಂದ್ ಸಂಬಂಧ ನಡೆದ ಸಭೆಯಲ್ಲಿ ವಿವಿಧ ಸಂಘಟನೆಗಳು ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಿದವು.

ಮಂಡ್ಯ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ

ಶ್ರೀರಂಗಪಟ್ಟಣ: ತಾಲೂಕಿನಲ್ಲಿ ವಕ್ಫ್ ಬೋರ್ಡ್ ವಿವಾದ ದಿನೇ ದಿನೇ ಉಲ್ಬಣಿಸುತ್ತಿದ್ದು, ಇದನ್ನು ಸರಿಪಡಿಸುವಂತೆ ರಾಜ್ಯ ಸರ್ಕಾರ ಹಾಗೂ ಅಧಿಕಾರಿಗಳನ್ನು ಆಗ್ರಹಿಸಿ ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಕುವೆಂಪು ವೃತ್ತದ ಬಳಿಯ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಂಘದ ಸಂಸ್ಥಾಪಕ ಅಧ್ಯಕ್ಷ ಶಂಕರ್ ಬಾಬು ನೇತೃತ್ವದಲ್ಲಿ ರಾಜ್ಯ ಸರ್ಕಾರ, ವಕ್ಫ್ ಬೋರ್ಡ್ ಹಾಗೂ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಘೋಷಣೆ ಕೂಗಿ ಕೆಲ ಕಾಲ ಪ್ರತಿಭಟಿಸಿದರು.

ಕೈಯಲ್ಲಿ ಕಬ್ಬಿನ ಜೊಲ್ಲೆ ಹಾಗೂ ಕರ್ನಾಟಕ ಧ್ವಜ ಹಿಡಿದು, ಹೆದ್ದಾರಿಯಲ್ಲಿ ವಕ್ಫ್ ಬೋರ್ಡ್ ಎಂದು ನಮೂದಾಗಿರುವ ಆರ್‌ಟಿಸಿ ಸುಟ್ಟು ಉರುಳಿ ಸೇವೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಕೂಡಲೆ ವಕ್ಫ್ ಬೋರ್ಡ್ ಹೆಸರನ್ನು ಕೈಬಿಡುವಂತೆ ಆಗ್ರಹಿಸಿದರು.

ಶಂಕರ್‌ಬಾಬು ಮಾತನಾಡಿ, ಈ ಹಿಂದಿನ ಸರ್ಕಾರಗಳು ಬಹುತೇಕ ರೈತರ ಕಣ್ಣೀರೊರೆಸುವ ಕೆಲಸ ಮಾಡುತ್ತಿದ್ದವು, ಆದರೆ ಇಂದಿನ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರ ಕಣ್ಣಲ್ಲಿ ರಕ್ತ ಬರಿಸುವಂತೆ ನಡೆದುಕೊಳ್ಳುತ್ತಿದೆ. ನಮ್ಮ ತಾತ, ಮುತ್ತಾತಂದಿರ ಕಾಲದಿಂದಲೂ ಬೇಸಾಯ ಮಾಡಿಕೊಂಡು ಬರುತ್ತಿರುವ ಜಮೀನಿನ ಆರ್‌ಟಿಸಿಗಳಲ್ಲಿ ವಕ್ಫ್ ಬೋರ್ಡ್ ಎಂಬ ಗುಮ್ಮನನ್ನು ರೈತರ ಜಮೀನು ಹಾಗೂ ಐತಿಹಾಸಿಕ ಕಟ್ಟಡಗಳಲ್ಲಿ ಸೇರಿಸುತ್ತಿರುವುದು ವಿಪರ್ಯಾಸ ಎಂದ ಅವರು, ಕೂಡಲೇ ನಮೂದಿಸಿರುವ ವಕ್ಫ್ ಮಂಡಳಿ ಹೆಸರು ಕೈ ಬಿಡಬೇಕು. ಜನಪ್ರತಿನಿಧಿಗಳು ಈ ಸಂಬಂಧ ರೈತರೊಂದಿಗೆ ಧ್ವನಿಯಾಗಿ ನಿಲ್ಲಬೇಕು. ಇಲ್ಲದಿದ್ದರೆ ಜನಪ್ರತಿನಿಧಿಗಳು ಹೋದಲೆಲ್ಲ ಕಪ್ಪುಪಟ್ಟಿ ತೋರಿಸಿ, ಮಸಿ ಬಳಿಯುವ ಮೂಲಕ ತಕ್ಕ ಶಾಸ್ತಿ ಮಾಡುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷ ಬಳ್ಳೆಕೆರೆ ಶ್ರೀಕಾಂತ್, ರಾಜ್ಯ ಸಂಘಟನಾ ಕಾರ್ಯದರ್ಶಿ ಜಗದೀಶ್‌ಗೌಡ, ಬಾಳೆಹಣ್ಣು ಮಂಜು, ಛಾಯಾದೇವಿ, ಅಂಕಶೆಟ್ಟಿ, ಸತ್ಯಮೂರ್ತಿ, ಕೂಡಲಕುಪ್ಪೆ ಕುಮಾರ್, ಬೋರಪ್ಪ ಗಾಯಿತ್ರಮ್ಮ, ಮಂಗಳಮ್ಮ, ಮಾದಮ್ಮ, ಸುರೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.



ಬೆಂಗಳೂರು–ಮೈಸೂರು ಹಳೆ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸುತ್ತಿರುವುದು.

ತಾಯಿಗೆ ಹಾಸ್ಟೆಲ್ ಉಸ್ತುವಾರಿ ವಹಿಸಿದ್ದ ವಾರ್ಡನ್

ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಸ್ಟೆಲ್‌ಗೆ ದಿಡೀರ್ ಭೇಟಿ, ವಾರ್ಡನ್‌ಗೆ ತರಾಟೆ

ಪಾಂಡವಪುರ, ಜ.11– ವಾರ್ಡನ್‌ರೊಬ್ಬರು ತನ್ನ ಬದಲು ತನ್ನ ತಾಯಿಯನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಉಸ್ತುವಾರಿ ನೋಡಿಕೊಳ್ಳಲು ನೇಮಿಸಿದ್ದ ಪ್ರಕರಣವೊಂದು ಬೆಳಕಿಗೆ ಬಂದಿದ್ದು, ವಿಷಯ ತಿಳಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸ್ಥಳಕ್ಕೆ ದಿಡೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿ ದೂರವಾಣಿ ಮೂಲಕ ತರಾಟೆಗೆ ತೆಗೆದುಕೊಂಡಿರುವ ಘಟನೆ ಸಂಭವಿಸಿದೆ.

ತಾಲೂಕಿನ ಕೆರೆತೊಣ್ಣೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಾರ್ಡನ್ ಅರುಣ್‌ಕುಮಾರ್‌ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡರು.

ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದ ಅರುಣ್ ಕುಮಾರ್ ಅವರನ್ನು ತಾಲೂಕಿನ ಕೆರೆತೊಣ್ಣೂರಿನಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಹೆಚ್ಚುವರಿ ವಾರ್ಡನ್ ಕರ್ತವ್ಯ ನಿರ್ವಹಿಸಲು ನಿಯೋಜನೆ ಮಾಡಲಾಗಿತ್ತು. ಕಳೆದ ಒಂದು ವರ್ಷದಿಂದಲೂ ಹೆಚ್ಚುವರಿ ವಾರ್ಡನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅರುಣ್ ಕುಮಾರ್ ಸರಿಯಾಗಿ ಹಾಸ್ಟೆಲ್‌ಗೆ ಹಾಜರಾಗುತ್ತಿರಲಿಲ್ಲ. ಜತೆಗೆ ವಾರ್ಡನ್ ಅರುಣ್‌ಕುಮಾರ್ ಕೆರೆತೊಣ್ಣೂರು ಗ್ರಾಮದವರೇ ಆಗಿದ್ದರಿಂದ ಬದಲು ತಮ್ಮ ತಾಯಿ ವನಜಾಕ್ಷಿ ಅವರನ್ನು ಹಾಸ್ಟೆಲ್ ನಲ್ಲಿ ಇರಿಸಿ ಉಸ್ತುವಾರಿ ನೋಡಿಸಿಕೊಳ್ಳಲು ಬಿಟ್ಟಿದ್ದರು.

ವಾರ್ಡನ್ ತಾಯಿ ವನಜಾಕ್ಷಿ ಮಕ್ಕಳು ಹಾಗೂ ವಸತಿ ಶಾಲೆ ಸಿಬ್ಬಂದಿಗಳೊಂದಿಗೆ ದುರ್ವರ್ತನೆ ತೋರುವ ಜತೆಗೆ ಮಕ್ಕಳಿಗೆ ಬೈಯುತ್ತಿದ್ದರು, ಮಕ್ಕಳಿಗೆ ಗುಣಮಟ್ಟದ ಊಟವನ್ನು ಸಹ ನೀಡುತ್ತಿರಲಿಲ್ಲ ಇದರಿಂದ ಮನನೊಂದ ವಸತಿಯ ಶಾಲೆ ಮಕ್ಕಳು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ದೂರು ನೀಡಿದ್ದರು. ಈ ವಿಚಾರ ತಿಳಿದು ಹಾಸ್ಟೆಲ್‌ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಧಿಡೀರ್ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ವಾರ್ಡನ್ ಹಾಸ್ಟೆಲ್‌ನಲ್ಲಿ ಇರಲಿಲ್ಲ. ಶಾಸಕರು ಮಕ್ಕಳೊಂದಿಗೆ ಚರ್ಚಿಸಿದಾಗ ಹಾಸ್ಟೆಲ್ ವಾರ್ಡನ್ ಅರುಣ್‌ಕುಮಾರ್ ಹಾಗೂ ತಾಯಿ ವನಜಾಕ್ಷಿ ಅವರ ಮೇಲೆ ದೂರಿನ ಸುರಿಮಳೆಗೈದಿದ್ದಾರೆ. ಇದರಿಂದ ಕುಪಿತಗೊಂಡ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸ್ಥಳದಿಂದಲೇ ಹಾಸ್ಟೆಲ್ ವಾರ್ಡನ್ ಅರುಣ್ ಕುಮಾರ್‌ಗೆ ದೂರವಾಣಿ ಕರೆಮಾಡಿ ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡಿದ್ದಾರೆ.

ಹಾಸ್ಟೆಲ್ ವಾರ್ಡನ್ ಆಗಿರುವ ನೀನು ಹಾಸ್ಟೆಲ್‌ನಲ್ಲಿ ಇರದೆ ಎಲ್ಲಿಗೆ ಹೋಗಿದ್ದೀಯ? ನೀನು ಎಲ್ಲಿ ವಾಸ್ತವ್ಯ ಇರಬೇಕು? ನಿನ್ನ ಬದಲು ನಿನ್ನ ತಾಯಿಯನ್ನು ಯಾಕೆ ಇಲ್ಲಿ ಬಿಟ್ಟಿದ್ದೀಯ? ನಿಮ್ಮ ಅಮ್ಮನಿಗೂ ಹಾಸ್ಟೆಲ್‌ಗೂ ಏನು ಸಂಬಂಧ? ನಿಮ್ಮ ಅಮ್ಮ ಯಾಕೆ ಮಕ್ಕಳಿಗೆ ಬೈಯಬೇಕು? ನಿಮ್ಮ ಫ್ಯಾಮಿಲಿ ಬಿಸಿನೆಸ್ ಮಾಡೋಕಾ ನೀನು ಹಾಸ್ಟೆಲ್ ಕೆಲಸ ತೆಗೆದುಕೊಂಡಿರೋದು? ಇದೇನು ನಿಮ್ಮ ತಾಯಿ ಮನೆ ಆಸ್ತಿನಾ? ನೀವು ಹಾಸ್ಟೆಲ್ ಒಳಗಡೆ ಬರಬೇಡಿ. ನೀವು ಯಾರಾದರು ಹಾಸ್ಟೆಲ್ ಒಳಗಡೆ ಬಂದರೆ ಕಾಲು ಕತ್ತರಿಸುತ್ತೇನೆ ಎಂಬ ಎಚ್ಚರಿಕೆಯನ್ನು ದೂರವಾಣಿ ಮೂಲಕ ವಾರ್ಡನ್‌ಗೆ ನೀಡಿದ್ದಾರೆ.

ಹಾಸ್ಟೆಲ್‌ನಲ್ಲಿರುವ ಮಕ್ಕಳು ಆತಂಕಕ್ಕೆ ಒಳಗಾಗುವುದು ಬೇಡ, ನಿಮಗೆ ಏನಾದರೂ ತೊಂದರೆ ಬಂದರೆ ನನಗೆ ಮಾಹಿತಿ ನೀಡಿ ಎಂದು ಮಕ್ಕಳಿಗೆ ಧೈರ್ಯತುಂಬಿ ಕಳುಹಿಸಿದರು.



ಮೊಬೈಲ್ ಕರೆ ಮೂಲಕ ವಾರ್ಡನ್‌ಗೆ ತರಾಟೆ ತೆಗೆದುಕೊಳ್ಳುತ್ತಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ.

ಮಂಡ್ಯದಲ್ಲಿ ಜೆಡಿಎಸ್ ಸಂಘಟನೆಯಾಗಬೇಕು

ಮಂಡ್ಯ,ಜ.11– ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ಸಂಘಟನೆ ಬಲವರ್ಧನೆ ಆಗಬೇಕು, ಜಿಲ್ಲೆಯಲ್ಲಿ ಹಲವಾರು ಸಮಸ್ಯೆಗಳಿದ್ದು, ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದಲ್ಲಿ ಇರುವ ನ್ಯೂನತೆಗಳನ್ನು ಚರ್ಚೆ ಮಾಡಿ ಅಂತಿಮ ಸಲಹೆ ಪಡೆದು ಪಕ್ಷ ಬಲವರ್ಧನೆ ಮಾಡಲು ಸಭೆ ಕರೆದಿದ್ದೇವೆ ಎಂದು ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಡಾ.ಕೆ.ಅನ್ನದಾನಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದ ಪಕ್ಷ ಸಂಘಟನೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ದಲಿತ ಸಂಘಟನೆಗಳನ್ನು ಬಳಸಿಕೊಳ್ಳುತ್ತಿರುವ ಬಗ್ಗೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಯಾವುದೇ ಪಕ್ಷ ಆಗಬಹುದು, ಬೇರೆ ಯಾರಾದರು ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದರೆ ಹೋರಾಟ ಮಾಡುತ್ತೇವೆ. ಅಂಬೇಡ್ಕರ್ ದಲಿತರ ಸ್ವಾಭಿಮಾನದ ಸಂಕೇತ, ಅವರು ನಮಗೆ ಶಕ್ತಿ. ಕಾಂಗ್ರೆಸ್ ಸರ್ಕಾರ ಎಸ್ಸಿಪಿ, ಟಿಎಸ್‌ಪಿ ಯೋಜನೆಯ 25 ಸಾವಿರ ಕೋಟಿ ದಲಿತರ ಅಭಿವೃದ್ಧಿಗೆ ಇಟ್ಟಿದ್ದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆ ಮಾಡಿದ್ದಾರಲ್ಲ ಕಾಂಗ್ರೆಸ್ ಎಸ್ಸಿ ವಿಭಾಗದ ಪಾಳೇಗಾರರು ಸತ್ತು ಹೋಗಿದ್ದೀರಾ ಎಂದು ಪ್ರಶ್ನೆ ಮಾಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್‌ಗೆ ಅಪಮಾನ ಮಾಡಿದ್ದಾರೆ ಎಂದು ರಾಜ್ಯದಲ್ಲಿ ಹಲವಾರು ಸಂಘಟನೆಗಳು ಹೆಸರೇಳಿಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ದಲಿತರಿಗೆ ಅಂಬೇಡ್ಕರ್ ಕೊಟ್ಟ ಸವಲತ್ತುಗಳನ್ನು ಕಿತ್ತುಕೊಳ್ಳುತ್ತಿದ್ದರು ಹೋರಾಟ ಮಾಡದೇ ಅನ್ಯಾಯ ವೆಸಗುತ್ತಿವೆ ಆದರೆ ನಿಮ್ಮಗಳ ವಿರುದ್ಧ ಜೆಡಿಎಸ್‌ನವರು ನಾವು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರದಲ್ಲಿ ದಲಿತರಿಗೆ ಅನ್ಯಾಯವಾಗುತ್ತಿದ್ದರು ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರು ಅಸೆಂಬ್ಲಿಯಲ್ಲಿ ಬಾಯಿಬಿಚ್ಚಿ ಮಾತಾಡಲಿಲ್ಲ ನೀವು ಎಂಥ ಮೋಸಗಾರರು ಇದ್ದೀರಾ ಎಂದು ಛೇಡಿಸಿದರು.

ರಾಜ್ಯದಲ್ಲಿರುವುದು ಅಂಬೇಡ್ಕರ್ ಸಿದ್ಧಾಂತವಲ್ಲ ಸಿದ್ದರಾಮಯ್ಯ ಅವರ ಸಿದ್ಧಾಂತ ಎಂದು ಹೇಳಿರುವ ಶಾಸಕ ನರೇಂದ್ರ ಸ್ವಾಮಿ ಅವರ ವಿರುದ್ಧ ಸಂಘಟನೆಗಳು ಪ್ರತಿಭಟನೆ ಮಾಡಲಿಲ್ಲ. ಕಾಂಗ್ರೆಸ್ ಪಕ್ಷ ದಲಿತರಿಗೆ ರಕ್ಷಣೆ ಮಾಡದೆ ದಲಿತರನ್ನು ಮೂರ್ಖರನ್ನಾಗಿ ಮಾಡುತ್ತಿದೆ. ಜನತಾ ಪರಿವಾರದಿಂದ ಮಾತ್ರ ದಲಿತ ಸಮಾಜಕ್ಕೆ ಸಹಕಾರಿಯಾಗಿದೆ. ಮುಸ್ಲಿಮರನ್ನು ಓಲೈಸಿಕೊಳ್ಳುವ ರೀತಿ ಸಂವಿಧಾನದ ಹೆಸರಿನಲ್ಲಿ ದಲಿತರನ್ನು ಒಲೈಸಿಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ಈ ನಿಟ್ಟಿನಲ್ಲಿ ದಲಿತರು ಜೆಡಿಎಸ್ ಪಕ್ಷ ಬೆಳೆಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ಸಂಘಟನೆ ಮಾಡಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗ ಜಿಲ್ಲಾಧ್ಯಕ್ಷ ಹಾಗೂ ದಿಶಾ ಸಮಿತಿ ಜಿಲ್ಲಾ ಸದಸ್ಯ ಸಾತನೂರು ಎಸ್.ಡಿ. ಜಯರಾಮ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಭದ್ರಾಚಲಮೂರ್ತಿ ಮುಖಂಡರಾದ ಶಂಕರ್, ಬೊಮ್ಮರಾಜು, ನರಸಿಂಹಮೂರ್ತಿ, ಕಾಳಪ್ಪ ಸೇರಿದಂತೆ ಜೆಡಿಎಸ್ ವಿಭಾಗದ ಪದಾಧಿಕಾರಿಗಳು ಹಾಜರಿದ್ದರು.



ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡುತ್ತಿರುವ ಮಾಜಿ ಶಾಸಕ ಅನ್ನದಾನಿ.

ಅಕ್ಷರ ಜಾತ್ರೆ, ಕೃತಿ ಬಿಡುಗಡೆ

ಮಂಡ್ಯ, ಜ.11– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂ(ಮಂಡ್ಯ) ಆಶ್ರಯದಲ್ಲಿ ಹತ್ತನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ, ವಿವಿಧ ಪ್ರಶಸ್ತಿ ಪ್ರದಾನ ಹಾಗೂ ರೂಪಾ ಮಂಜುನಾಥ್ ಹೊಸಹಳ್ಳಿ ಅವರ 'ಕಾವ್ಯ ಕೌಸ್ತುಭ' ಕೃತಿ ಬಿಡುಗಡೆ ಸಮಾರಂಭವನ್ನು ಜ.12ರಂದು ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ.ಶಂಕರಗೌಡ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಹತ್ತನೇ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರಾಗಿ ಕವಿ ಹಾಗೂ ಉಪನ್ಯಾಸಕ ಡಾ.ಸಿ. ಮರಯ್ಯ ಆಯ್ಕೆಯಾಗಿದ್ದು, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ. ನಿಂಗರಾಜೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಮಾಜ ಸೇವಕ ಡಾ.ಮಹೇಂದ್ರ ಮನೋತ್ ಪ್ರಧಾನ ಭಾಷಣ ಮಾಡಲಿದ್ದು, ಹಿರಿಯ ಸಾಹಿತಿ ಡಾ.ಎಚ್.ಎಸ್.ಮುದ್ದೇಗೌಡ ಅವರನ್ನು ಅಭಿನಂದಿಸಲಾಗುವುದು.

ಹಳೆ ವಿದ್ಯಾರ್ಥಿಗಳ ಸಭೆ

ಭಾರತೀನಗರ,ಜ.11–ಕ್ಯಾತಘಟ್ಟ ಸರ್ಕಾರಿ ಪ್ರೌಢಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವನ್ನು ರಚಿಸುವ ಸಂಬಂಧ ಜ.19 ರಂದು ಬೆಳಿಗ್ಗೆ 10.30 ಗಂಟೆಗೆ ಹಳೆಯ ವಿದ್ಯಾರ್ಥಿಗಳ ಸಭೆ ಕರೆಯಲಾಗಿದೆ.

ಈ ಶಾಲೆಯಲ್ಲಿ 2024 ರವರೆಗೆ ವ್ಯಾಸಂಗ ಮಾಡಿದ ಎಲ್ಲಾ ವಿದ್ಯಾರ್ಥಿಗಳು ಸಭೆಯಲ್ಲಿ ಭಾಗವಹಿಸಿ ಹಳೆಯ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಲು ಸಹಕರಿಸಬೇಕೆಂದು ಕೋರಲಾಗಿದೆ.

ಒಂದನೇ ಪುಟದಿಂದ

ಶೋರೂಂಗಳಾಗಿವೆ ಮೈಸೂರು ರಸ್ತೆಗಳು!

ವಸ್ತುಗಳನ್ನು ಕೊಂಡೊಯ್ಯುತ್ತಾರೆ. ಜನರಿಗೆ ಕೈಗೆಟಕುವ ದರದಲ್ಲಿ ವಸ್ತುಗಳು ಸಿಗುತ್ತವೆ ನಿಜ. ಆದರೆ, ಅವುಗಳ ಗುಣಮಟ್ಟದ ಬಗ್ಗೆ ಖಾತರಿ ಏನು? ರಶೀದಿಯನ್ನೂ ಕೊಡುವುದಿಲ್ಲವಾದ್ದರಿಂದ ಗ್ರಾಹಕರು ಕೊಂಡ ವಸ್ತುಗಳು ಹಾನಿಗೀಡಾದರೆ, ಅವುಗಳ ರಿಪೇರಿ ಇಲ್ಲ ವಾಪಸ್ ನೀಡಲು ಬಹುತೇಕ ಮಾರನೇ ದಿನವೇ ಆ ಸ್ಥಳದಲ್ಲಿ ಇರುವುದಿಲ್ಲ.

ರಸ್ತೆಬದಿ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುವವರು ಒಂದೇ ಕಡೆ ಖಾಯಂ ಆಗಿ ವಹಿವಾಟು ನಡೆಸುವುದಿಲ್ಲ. ಆಗಾಗ ಜಾಗ ಬದಲಿಸುತ್ತಾರೆ. ಕೆಲವರು ಮಾಲು ಮಾರಾಟವಾದ ಮೇಲೆ ಮತ್ತೆ ಬೇರೆ ನಗರಕ್ಕೆ ಹೋದರೂ ಹೋಗಬಹುದು. ಮಾರಾಟ ಮಾಡಿದ ವಸ್ತುವಿಗೆ ಜಿಎಸ್‌ಟಿ ಇರುವ ರಶೀದಿ ಕೊಡದ ಕಾರಣ ಅವುಗಳು ಹಾಳಾಗಿದ್ದರೆ ಹಿಂತಿರುಗಿಸಲು ಅವರು ಆ ಸ್ಥಳದಲ್ಲೇ ಇರುವುದಿಲ್ಲ.


ಕಣ್ಮುಚ್ಚಿದೆ ಪಾಲಿಕೆ: ಅಧಿಕೃತ ಉದ್ದಿಮೆದಾರರು, ಮಾರಾಟಗಾರರು ತಾವು ಮಾಡುವ ಪ್ರತಿ ವ್ಯಾಪಾರಕ್ಕೆ ಸ್ಥಳೀಯ ಪಾಲಿಕೆಯೂ ಸೇರಿದಂತೆ ನಾನಾ ತೆರಿಗೆ ಪಾವತಿಸುವುದು ಕಡ್ಡಾಯ. ಇವರೆಲ್ಲಾ ಅಧಿಕೃತ ಟ್ರೇಡ್ ಲೈಸೆನ್ಸ್ ಪಡೆದೇ ವ್ಯಾಪಾರ ಮಾಡುತ್ತಾರೆ. ಆದರೆ ಬೇರೆ ಬೇರೆ ಕಡೆಯಿಂದ ಬಂದು ಯಾವುದೇ ಶುಲ್ಕ, ತೆರಿಗೆ ಪಾವತಿಸದೇ ಬಯಲಲ್ಲಿ, ರಸ್ತೆಬದಿ ನಾನಾ ಬೆಲೆಬಾಳುವ ವಸ್ತುಗಳ ಮಾರಾಟ ಮಾಡುತ್ತಿದ್ದರೆ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಜಾಣ ಕುರುಡು, ಮೌನಕ್ಕೆ ಶರಣಾಗಿರುವುದು ಅಚ್ಚರಿ ಮತ್ತು ನಾನಾ ಸಂಶಯ ಮೂಡಿಸಿದೆ.

ನಾವೇಕೆ ತೆರಿಗೆ ಕಟ್ಟಬೇಕು: ಯಾವುದೇ ತೆರಿಗೆ, ಜಿಎಸ್‌ಟಿ, ಶುಲ್ಕ ಪಾವತಿಸದೇ ರಸ್ತೆಗಳಲ್ಲಿ ಅನಧಿಕೃತವಾಗಿ ಬೇಕಾದ ಬೆಲೆಗೆ ವಸ್ತುಗಳ ಮಾರಾಟ ಮಾಡಿ, ಪೈಪೋಟಿಗಿಳಿದಿರುವಾಗ ನಾವೇಕೆ ಆಸ್ತಿ ತೆರಿಗೆ, ಟ್ರೇಡ್ ಲೈಸೆನ್ಸ್ ಶುಲ್ಕ, ಜಿಎಸ್‌ಟಿ ಪಾವತಿಸಿ ವ್ಯಾಪಾರ–ವಹಿವಾಟು ಮಾಡಬೇಕು ಎಂದು ಕೆಲ ವ್ಯಾಪಾರಸ್ಥರು ಪ್ರಶ್ನಿಸುತ್ತಿದ್ದಾರೆ. ಫುಟ್‌ಪಾತ್ ವ್ಯಾಪಾರಿಗಳು ಸರ್ಕಾರಕ್ಕೆ ತೆರಿಗೆ ಕಟ್ಟುವುದಿಲ್ಲ. ಬದಲಾಗಿ ಅಧಿಕಾರಿಗಳನ್ನು ನಾನಾ ರೀತಿಯಲ್ಲಿ 'ವಿಶ್ವಾಸ'ಕ್ಕೆ ತೆಗೆದುಕೊಂಡು ವ್ಯಾಪಾರ ಮಾಡುತ್ತಾರೆ. ಇದರಿಂದ ಸರ್ಕಾರಕ್ಕೆ ನಿರಂತರ ನಷ್ಟವಾಗುತ್ತಿದೆ. ಇದರ ಬಗ್ಗೆ ಮಾತೆತ್ತಿದರೆ ಹೊಸದಾಗಿ ನಾನಾ ತೆರಿಗೆ ವಿಧಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಅರಿವಿಲ್ಲವೆ ಎಂದು ಹಲವರು ಪ್ರಶ್ನಿಸಿದ್ದಾರೆ.

'ಸ್ವಚ್ಛ ನಗರ'ಕ್ಕೂ ಕಳಂಕ: ಸ್ವಚ್ಛ ನಗರ ಎಂದು ಹೇಳುವ ಮೈಸೂರು ಮಹಾನಗರ ಪಾಲಿಕೆಯು ಕಂಡ ಕಂಡಲ್ಲಿ ವ್ಯಾಪಾರ ವಹಿವಾಟಿಗೆ ಅವಕಾಶ ಕಲ್ಪಿಸಿರುವುದರಿಂದ ಅಶುಚಿತ್ವಕ್ಕೆ ಅಧಿಕಾರಿಗಳೇ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ತಮ್ಮ ಕಣ್ಣೆದುರೇ ಇಂತಹುದು ನಡೆಯುತ್ತಿದ್ದರೂ ಅಧಿಕಾರಿಗಳು ಮೌನ ವಹಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಉದಾಹರಣೆಗೆ ಚಾಮುಂಡಿಬೆಟ್ಟ ರಸ್ತೆಯುದ್ದಕ್ಕೂ ತಲೆ ಎತ್ತಿರುವ ಕೆಲ ಅನಧಿಕೃತ ಅಂಗಡಿ–ಮುಂಗಟ್ಟುಗಳ ಬಗ್ಗೆ ಅಧಿಕಾರಿಗಳಿಗೆ ಅರಿವಿದೆಯೇ? ಅಲ್ಲಿ ನಡೆಯುವ ವಹಿವಾಟುಗಳ ಬಗ್ಗೆ ಗೊತ್ತಿದೆಯೇ ಎಂದು ಪ್ರಶ್ನಿಸಿದ್ದಾರೆ.

ಹೋಟೆಲು ಮಾಲೀಕರದ್ದೂ ಇದೇ ದೂರು: ರಸ್ತೆಬದಿ ನಾನಾ ರೀತಿಯ ತಿಂಡಿ–ತಿನಿಸು, ಊಟದ ಅಂಗಡಿಗಳನ್ನು ತೆರೆಯಲು ಅವಕಾಶ ಕೊಟ್ಟಿರುವುದು, ಲೈಸೆನ್ಸ್ ಪಡೆದು, ತೆರಿಗೆ ಕಟ್ಟಿ ಬಾಡಿಗೆ ಪಾವತಿಸಿ ಸಿಬ್ಬಂದಿಗಳನ್ನು ನಿರ್ವಹಣೆ ಮಾಡಿ ಹೋಟೆಲ್ ನಡೆಸುವುದು ದುಸ್ತರ ವಾಗಿದೆ ಎಂದು ಹೋಟೆಲು ಮಾಲೀಕರು ತಮ್ಮ ನೋವು ತೋಡಿಕೊಳ್ಳುವುದರ ಜೊತೆಗೆ ಮೈಸೂರು ಪಾಲಿಕೆಯ ಆರೋಗ್ಯ ವಿಭಾಗದ ವೈಫಲ್ಯಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಫುಟ್‌ಪಾತ್‌ನಲ್ಲಿ ನಾನಾ ರೀತಿಯ ಗೃಹೋಪಯೋಗಿ ವಸ್ತುಗಳನ್ನಿಟ್ಟು ವ್ಯಾಪಾರ ಮಾಡುತ್ತಿರುವುದರಿಂದ ಅಧಿಕೃತ ಟ್ರೇಡ್ ಲೈಸೆನ್ಸ್ ಪಡೆದು, ನಾನಾ ತೆರಿಗೆ ಪಾವತಿಸಿ ಶೋರೂಂಗಳಲ್ಲಿ ವ್ಯಾಪಾರ ಮಾಡುವವರಿಗೆ ಭಾರೀ ಸ್ಪರ್ಧೆ, ತಲೆನೋವು ಎದುರಾಗಿದೆ. ಇದರಿಂದ ಉದ್ಯಮಕ್ಕೆ ಭಾರೀ ಹೊಡೆತವೂ ಬಿದ್ದಿದೆ. ಇಂತಹ ಅನಧಿಕೃತ ವ್ಯಾಪಾರವನ್ನು ಪಾಲಿಕೆ ಅಧಿಕಾರಿಗಳು ಸ್ಥಗಿತಗೊಳಿಸಬೇಕು. ಈ ಸಂಬಂಧ ತಾವು ಸೋಮವಾರದ ಬಳಿಕ ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸುತ್ತೇವೆ.



– ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ

ದೇವರಿಗೆ ಬಿಡ್ತೇನೆ

ಮೂಗು ತೂರಿಸುವ ಅಗತ್ಯವಿಲ್ಲ ಎಂದು ನುಡಿದರು.

ಪಕ್ಷ ಪೂಜೆ ಮಾಡುವವನು: ನಾನು, ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿರುವವನು, ನಿತ್ಯ ಪೂಜೆ ಮಾಡುವವನು. ನನ್ನ, ರಾಜ್ಯದ ಒಳಿತು ಜೊತೆಗೆ ನನ್ನ ನಂಬಿದವರ ಹಾಗೂ ಸಮಾಜದ ಒಳಿತಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತೇನೆ. ಹೊಸ ವರ್ಷ ಭಯ–ಭಕ್ತಿಯಿಂದ ದೇವಸ್ಥಾನಗಳಿಗೆ ತೆರಳಿ ಪೂಜಾ ಕೈಂಕರ್ಯ ಮಾಡುತ್ತಿದ್ದೇನೆ. ಇದನ್ನು ಟೆಂಪಲ್ ರನ್ ಎಂದು ನೀವು ಬಣ್ಣಿಸುತ್ತಿದ್ದೀರಿ. ಇಂತಹ ವ್ಯಾಖ್ಯಾನ ಮಾಡುವವರು ದೇವಾಲಯಗಳನ್ನೇ ಮುಚ್ಚಿಬಿಡಿ.

ಸರ್ಕಾರದಲ್ಲಿ ಮುಜರಾಯಿ, ವಕ್ಫ್ ಮಂಡಳಿ ಇರುವುದು ಅವರವರ ವಿಚಾರ, ನಂಬಿಕೆ, ಧರ್ಮ ಕಾಪಾಡುವುದಕ್ಕಾಗಿ ಎಂದರು.

ಕೇಂದ್ರದ ವಿರುದ್ಧ ಕಿಡಿ: ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ ಶಿವಕುಮಾರ್, ರಾಜ್ಯದ ಹಿತ ಕಾಪಾಡಲು ಕೇಂದ್ರದ ವಿರುದ್ಧ 'ನಮ್ಮ ತೆರಿಗೆ ನಮ್ಮ ಹಕ್ಕು' ಹೋರಾಟ ಮಾಡಲೇಬೇಕಿದೆ.

ರಾಜ್ಯದ ತೆರಿಗೆ ಪಾಲಿನ ಅನ್ಯಾಯದ ವಿರುದ್ಧ ಕಾನೂನಾತ್ಮಕವಾಗಿ ಹೇಗೆ ಹೋರಾಟ ನಡೆಸಬೇಕೆಂಬ ಬಗ್ಗೆ ಮುಖ್ಯಮಂತ್ರಿಗಳು ಅಧ್ಯಯನ ಮಾಡುತ್ತಿದ್ದು, ರಾಜ್ಯ ಬಜೆಟ್ ಮಂಡನೆ ವೇಳೆ ಅಸಮಾನ ಹಂಚಿಕೆಗೆ ಉತ್ತರ ಕೊಡುತ್ತೇವೆ. ನೀರಾವರಿ ಮತ್ತು ನಗರಾಭಿವೃದ್ಧಿಗೆ ನೀಡುವ ಅನುದಾನ ವಿಚಾರದಲ್ಲಿ ಕೇಂದ್ರ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ. ಕರ್ನಾಟಕಕ್ಕೆ ಬರಬೇಕಿರುವ ತೆರಿಗೆ ಪಾಲು ಮತ್ತು ಅಭಿವೃದ್ಧಿ ಅನುದಾನ ಕೊಡಿಸುವಲ್ಲಿ ರಾಜ್ಯ ಬಿಜೆಪಿ ಸಂಸದರು ಏಕೆ ಮೌನವಾಗಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ ಎಂದರು.

ಅಧಿಕಾರ ಕಿತ್ತುಕೊಳ್ಳುವಲ್ಲಿ ನಿಸ್ಸೀಮ!

ಅನ್ನಿಸಿದೆ. ಒಮ್ಮೆ 5 ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ಮಾಡಿ, ಎರಡನೇ ಬಾರಿಗೆ 2 ವರ್ಷ ಪೂರೈಸಿದ್ದು, ಅಧಿಕಾರ ಬಿಟ್ಟುಕೊಡ ಬೇಕೆಂಬ ಚರ್ಚೆ ಕಾಂಗ್ರೆಸ್ಸಿನಲ್ಲಿ ಆರಂಭ ವಾಗಿದೆ ಎಂದರು. ಬೆಳಗಾವಿಯ ಚಳಿ ಗಾಲದ ಅಧಿವೇಶನ ದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಬಹಳ ಮುಕ್ತವಾಗಿ ಮಾತನಾಡಿ, 25 ವರ್ಷಗಳ ಹಿಂದೆ ಅಂದಿನ ಮುಖ್ಯಮಂತ್ರಿ ತಮ್ಮನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಿರಲಿಲ್ಲ. ಆಗ ತಮ್ಮ ಗುರುಗಳು 'ಅಧಿಕಾರ ಸಿಗಲಿಲ್ಲ ಅಂದ್ರೆ ಅಧಿಕಾರವನ್ನು ಒದ್ದು ಕಿತ್ಕೋಬೇಕು' ಎಂದಿದ್ದನ್ನು ತಿಳಿಸಿದ್ದರು. ಅಧಿಕಾರವನ್ನು ಒದ್ದು ಕಿತ್ಕೊಳ್ಳುವಲ್ಲಿ ಯಶಸ್ವಿಯೂ ಆಗಿದ್ದರು. 25 ವರ್ಷಗಳ ನಂತರ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡುವರೋ ಇಲ್ಲವೋ ಎಂಬ ಅನುಮಾನ ಅವರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿಯೇ ಅಧಿಕಾರವನ್ನು ಒದ್ದು ಕಿತ್ತುಕೊಳ್ಳುವ ವಿಷಯ ನೆನಪು ಮಾಡಿಕೊಂಡಿದ್ದಾರೆ.

ಶಿವಕುಮಾರ್ ಹಠವಾದಿ, ಒದ್ದು ಕಿತ್ಕೊಳ್ಳುವ ವಿಷಯದಲ್ಲಿ ನಿಸ್ಸೀಮರು. ಆ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಒಂದು ಕಡೆ ಸಿದ್ದರಾಮಯ್ಯ ಅವರಿಗೆ ಅಧಿಕಾರ ಬಿಟ್ಟು ಕೊಡಲು ಮನಸ್ಸು ಬರುತ್ತಿಲ್ಲ. ಸಚಿವರ ನೇತೃತ್ವದಲ್ಲಿ ಶಿವಕುಮಾರ್ ಇಲ್ಲದ ವೇಳೆ ಡಿನ್ನರ್ ಮೀಟಿಂಗ್ ಪ್ರಾರಂಭಿಸಿದ್ದಾರೆ. ಇನ್ನೊಂದೆಡೆ ಶಿವಕುಮಾರ್ ಲೇಟ್‌ನೈಟ್ ಮೀಟಿಂಗ್ ಶುರು ಮಾಡಿದ್ದಾರೆ. ಇದು ರಾಜ್ಯದಲ್ಲಿನ ಸದ್ಯದ ರಾಜಕೀಯ ಪರಿಸ್ಥಿತಿ. ಆಡಳಿತ ಪಕ್ಷ ಕಾಂಗ್ರೆಸ್‌ನ ಸರಣಿ ಸಭೆಗಳು, ಆಡಳಿತ ಶಾಸಕರ ಡಿನ್ನರ್ ಮೀಟಿಂಗ್, ಮಿಡ್‌ನೈಟ್ ಮೀಟಿಂಗ್‌ಗಳ ವಿಚಾರ ಮಾಧ್ಯಮಗಳಲ್ಲಿ ಬಹಳಷ್ಟು ಚರ್ಚೆಯಾಗುತ್ತಿದೆ.

ವಿಜಯೇಂದ್ರಗೆ ಪ್ರಿಯಾಂಕ ಖರ್ಗೆ ಧಮ್ಕಿ!; ನಿಮ್ಮ ತಂದೆಯ ಬಂಡವಾಳ ಬಯಲು ಮಾಡ್ತೀನಿ...

ವಿಜಯಪುರ, ಜ.11– ಸ್ವಾಮೀಜಿಗಳು, ಬಿಜೆಪಿ ಶಾಸಕರು ಮತ್ತು ಕಲಬುರಗಿ ಬಿಜೆಪಿ ನಗರ ಘಟಕದ ಅಧ್ಯಕ್ಷರನ್ನು ಹತ್ಯೆ ಮಾಡಲು ಮಹಾರಾಷ್ಟ್ರದ ಗೂಂಡಾಗಳಿಗೆ ಸುಪಾರಿ ನೀಡಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ಕಳೆದ ವಾರ ಗಂಭೀರ ಆರೋಪ ಮಾಡಿದ್ದರು. ಇದೀಗ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ವಿಜಯೇಂದ್ರ ಅವರಿಗೆ ಸಚಿವ ಪ್ರಿಯಾಂಕಾ ಖರ್ಗೆ ಅವರು ಧಮ್ಕಿ ಹಾಕಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ವಿಜಯಪುರದಲ್ಲಿ ಮಾತನಾಡಿರುವ ಯತ್ನಾಳ್ ಅವರು, ಕಲಬುರಗಿಯಲ್ಲಿ ನನ್ನ ವಿರುದ್ಧ ಪ್ರತಿಭಟನೆಗೆ ಬರಬೇಡಿ, ಬಂದರೆ ನಿಮ್ಮ ತಂದೆಯ ಬಂಡವಾಳ ಬಯಲು ಮಾಡುತ್ತೇನೆ ಎಂದು ವಿಜಯೇಂದ್ರಗೆ ಪ್ರಿಯಾಂಕ ಖರ್ಗೆ ಬೆದರಿಕೆ ಹಾಕಿದ್ದಾರೆ. ಇದೇ ಕಾರಣಕ್ಕಾಗಿ ವಿಜಯೇಂದ್ರ

ಹೊಸ ಬಾಂಬ್ ಸಿಡಿಸಿದ ಯತ್ನಾಳ್

ಕಲಬುರಗಿಯಲ್ಲಿ ನಡೆದ ಪ್ರತಿಭಟನೆಗೆ ಹೋಗಿಲ್ಲ. ವಿಜಯೇಂದ್ರ ನೇತೃತ್ವದಲ್ಲಿ ಪ್ರತಿಭಟನೆ ಎಂದಿದ್ದರು, ಆದರೆ ಪ್ರಿಯಾಂಕ ಖರ್ಗೆ ಬೆದರಿಕೆಯಿಂದಾಗಿ ವಿಜಯೇಂದ್ರ ಬಂದಿಲ್ಲ ಎಂದು ಯತ್ನಾಳ್ ಆರೋಪಿಸಿದ್ದಾರೆ. ಸಿ.ಟಿ.ರವಿ, ಚಕ್ರವರ್ತಿ ಸೂಲಿಬೆಲೆ ಅವರನ್ನು ಕೆಲವರು ಟಾರ್ಗೆಟ್ ಮಾಡಿದ್ದಾರೆ. ಸಿ.ಟಿ.ರವಿ ಅವರನ್ನು ಇಡೀ ರಾತ್ರಿ ಪೊಲೀಸರು ಸುತ್ತಾಡಿಸುತ್ತಾರೆ. ಇಡೀ ರಾತ್ರಿ ಪೊಲೀಸ್ ಅಧಿಕಾರಿಗಳು ಯಾರ ಜೊತೆ ಫೋನ್‌ನಲ್ಲಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಯತ್ನಾಳ್ ಕಿಡಿಕಾರಿದರು. ಇದೇ ವೇಳೆ ವಿಜಯೇಂದ್ರ ನೇತೃತ್ವದಲ್ಲಿ ನಡೆದ ಮಾಜಿ ಶಾಸಕರ ಸಭೆಯ ಬಗ್ಗೆ ಮಾತನಾಡಿದ ಅವರು, ಸೋತ ಎರಡು ವರ್ಷದ ಬಳಿಕ ಸಭೆ ಮಾಡಿದರೆ ಏನು ಪ್ರಯೋಜನ, ಬಿಜೆಪಿ ಸೋಲಲು ಕಾರಣವಾದ ಕೈ ಯಾವುದು ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ. ನಮ್ಮ ಕಡೆಯವರು ಕೆಲವರು ಸಭೆಗೆ ಹೋಗಿದ್ದರು. ಸಭೆಗೆ ಹೋಗಿದ್ದವರು ನನಗೆ ಮಾಹಿತಿ ನೀಡಿದ್ದಾರೆ ಎಂದು ಹೇಳಿದರು.



ಯತ್ನಾಳ್

ಪಂಚಮಸಾಲಿಗಳ ಮೇಲೆ ಲಾಠಿ ಚಾರ್ಜ್ ಮಾಡದೆ ಮುತ್ತುಕೊಡಬೇಕಾ ಎಂದಿದ್ದ ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿರುದ್ಧ ವ್ಯಂಗ್ಯ ಮಾಡಿದ ಯತ್ನಾಳ್, ನೀವು ಸಾಬರಿಗೆ ಮುತ್ತು ಕೊಡಿ, ಕೆಜಿ ಹಳ್ಳಿಗೆ ಮುತ್ತು ಕೊಡಿ, ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದವರಿಗೆ ಮುತ್ತು ಕೊಡಿ. ದಿನಾ ಮುತ್ತು ಕೊಡ್ತಾ ಹೋಗಿ, ಮುತ್ತು ಕೊಡುವ ಗೃಹ ಮಂತ್ರಿಗಳಾಗಿ ಎಂದು ಯತ್ನಾಳ್ ವ್ಯಂಗ್ಯವಾಡಿದ್ದಾರೆ.

ಹೈಕಮಾಂಡ್ ಮಟ್ಟದಲ್ಲಿ ಸಿದ್ದು–ಡಿಕೆಶಿ ನಡುವೆ ಅಧಿಕಾರದ ಒಪ್ಪಂದ ಸೂತ್ರ ಏರ್ಪಟ್ಟಿದೆ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿವರಣೆ
- ಆದರೆ ಅಭಿವೃದ್ಧಿ ವಿಷಯದಲ್ಲಿ ಒಪ್ಪಂದ ಏರ್ಪಟ್ಟಿಲ್ಲ; ವ್ಯಂಗ್ಯ

ಬೆಂಗಳೂರು, ಜ.11(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಶಿವಕುಮಾರ್ ನಡುವೆ ಹೈಕಮಾಂಡ್ ಮಟ್ಟದಲ್ಲಿ ಅಧಿ ಕಾರದ ಒಪ್ಪಂದ ಸೂತ್ರ ಏರ್ಪಟ್ಟಿದೆ. ಆದರೆ, ಅಭಿವೃದ್ಧಿ ಬಗ್ಗೆ ಒಪ್ಪಂದವಾ ಗಿಲ್ಲ. ಅಧಿಕಾರ ಹಂಚಿಕೆ ಕುರಿತು ಮಾತ್ರ ಒಪ್ಪಂದವಾದಂತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯವಾಡಿದರು. ಹಿಂದೆ ಟೆಸ್ಟ್ ಮ್ಯಾಚ್ ನೋಡುತ್ತಿದ್ದೀರಿ, ಬಳಿಕ ಏಕದಿನ ಪಂದ್ಯ ಬಂತು, ನಂತರ ಟಿ–20 ಮ್ಯಾಚ್‌ಗಳು ಜನಪ್ರಿಯವಾದವು. ರಾಜ್ಯದ ಜನ ಆಶೀರ್ವಾದ ಮಾಡಿ, ಸ್ಪಷ್ಟ ಬಹುಮತ ಕೊಟ್ಟರೆ, ಇವರಿಗೆ ಪರಸ್ಪರ ಅಧಿಕಾರ ಹಂಚಿಕೆ ಕಿತ್ತಾಟ ಮುಖ್ಯವಾಗಿದೆಯೇ ಹೊರತು, ರಾಜ್ಯದ ಅಭಿವೃದ್ಧಿ ವಿಚಾರ ಪ್ರಮುಖವಾಗಿಲ್ಲ. ಆಡಳಿತದ ಬೇಜ ವಾಬ್ದಾರಿಯಿಂದ ಸರ್ಕಾರಿ ಆಸ್ಪತ್ರೆ ಗಳಲ್ಲಿ ಬಾಣಂತಿಯರು, ನವಜಾತ ಶಿಶುಗಳ ಸರಣಿ ಸಾವು ಸಂಭವಿಸುತ್ತಿದೆ, ಭ್ರಷ್ಟಾಚಾರ ಮಿತಿ ಮೀರಿದೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದು 2 ವರ್ಷ ಕಳೆದರೂ ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ನೋಡಲು ಸಾಧ್ಯವಾಗದ ಸ್ಥಿತಿ ಇದೆ.

ಚುನಾವಣೆ ಹೊರತುಪಡಿಸಿ ಬೇರೆ ದಿನಗಳಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ರಾಜ್ಯ ಪ್ರವಾಸ ಮಾಡುತ್ತಿಲ್ಲ, ಅವರುಗಳ ಪ್ರವಾಸ ಕೇವಲ ಬೆಂಗಳೂರಿಗೆ ಸೀಮಿತವಾಗಿದೆ. ರಾಜ್ಯ ಹಾಗೂ ಬೆಂಗಳೂರು ಮಹಾನಗರದಲ್ಲಿ ರಸ್ತೆಗುಂಡಿ ಮುಚ್ಚಿಸುವ ಕೆಲಸವೂ ಆಗುತ್ತಿಲ್ಲ. ಬೆಂಗಳೂರಿನಲ್ಲಿ 50 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಮೊತ್ತದ ಅಂಡರ್‌ಗ್ರೌಂಡ್ ಟನಲ್ ಮಾಡಲು ಶಿವಕುಮಾರ್ ಹೊರಟಿದ್ದಾರೆ. ಈ ಕುರಿತು ಯಾರ ಜೊತೆಗೂ ಚರ್ಚೆ ಮಾಡಿಲ್ಲ, ಆನೆ ನಡೆದಿದ್ದೇ ದಾರಿ ಎಂಬಂತೆ ಮನ ಬಂದಂತೆ ಸರ್ಕಾರ ನಡೆಸುತ್ತಿದ್ದಾರೆ.

ಕಾಂಗ್ರೆಸ್‌ನವರಿಗೆ ಅಧಿಕಾರ ಮದ, ದರ್ಪ ಹೆಚ್ಚಾಗಿದೆ. ಯಾರೂ ಸರ್ಕಾರವನ್ನು ಟೀಕಿಸಬಾರದೆಂಬ ಧೋರಣೆ ಇವರದು, ವಿರೋಧಪಕ್ಷದವರನ್ನು ಬೆದರಿಸುತ್ತಿದ್ದು, ಇದನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನಲು ಸಾಧ್ಯವೇ.

ಹಿಂದೂ ವಿರೋಧಿ ನೀತಿ ವಿರುದ್ಧ ಧ್ವನಿ ಎತ್ತಿದ ಕಾರ್ಯಕರ್ತರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸುತ್ತಿದ್ದಾರೆ. ಪೊಲೀಸ್ ಕೇಸ್ ಹಾಕಿ, ಬೆದರಿಕೆ ಒಡ್ಡಿ ದಬ್ಬಾಳಿಕೆ ಮಾಡಲಾಗುತ್ತಿದೆ. ಇದೇ ಆಡಳಿತ ಪಕ್ಷದ ಘನಂದಾರಿ ಕೆಲಸ. ಬಿಜೆಪಿ ಹಾಗೂ ಹಿಂದೂ ಕಾರ್ಯಕರ್ತರ ರಕ್ಷಣೆ ಪಕ್ಷದ ಕಾನೂನು ಪ್ರಕೋಷ್ಠದ ಆದ್ಯ ಕರ್ತವ್ಯವಾಗಿದೆ ಎಂದರು.

ಕಾಂಗ್ರೆಸ್ ಭಿನ್ನಮತ ಶಮನಕ್ಕೆ ರಾಜ್ಯಕ್ಕೆ ನಾಳೆ ಸುರ್ಜೇವಾಲ ಆಗಮನ


ಬೆಂಗಳೂರು, ಜ.11–ರಾಜ್ಯ ಕಾಂಗ್ರೆಸ್ ಭಿನ್ನಮತ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವ ಹಿನ್ನಲೆಯಲ್ಲಿ ಸಮಸ್ಯೆಗೆ ಬ್ರೇಕ್ ಹಾಕಲು ಹೈಕಮಾಂಡ್ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಸೋಮವಾರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಬೆಂಗಳೂರಿಗೆ ಆಗಮಿಸಲಿದ್ದಾರೆ.

ಸೋಮವಾರ ಅವರು ಬೆಂಗಳೂರಿಗೆ ಆಗಮಿಸಲಿದ್ದು, ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರ ಜೊತೆಗೆ ಸಭೆಯನ್ನು ನಡೆಸುವ ಸಾಧ್ಯತೆ ಇದೆ. ಈ ವೇಳೆ ಔತಣಕೂಟ, ಗೌಪ್ಯ ಸಭೆ, ಸಂಪುಟ ಪುನಾರಚನೆ ಎಲ್ಲಾ ವಿಚಾರಗಳು ಚರ್ಚೆಗೆ ಬರುವ ಸಾಧ್ಯತೆ ಇದೆ. ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಚರ್ಚೆ ಶುರುವಾಗಿದೆ ಡಿಸಿಎಂ ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ತಮ್ಮ ಹಕ್ಕು ಮಂಡನೆಗೆ ಕಸರತ್ತು ನಡೆಸುತ್ತಿದ್ದಾರೆ. ಆದರೆ ಇದಕ್ಕೆ ಸಿದ್ದರಾಮಯ್ಯ ಆಪ್ತರು ಈಗಿಂದಲೇ ಅಪಸ್ವರ ಎತ್ತಿದ್ದಾರೆ. ಈ ಅವಧಿಯ 5 ವರ್ಷಗಳ ಕಾಲ ಸಿದ್ದರಾಮಯ್ಯ ಅವರೇ ಸಿಎಂ ಆಗಿ ಮುಂದುವರಿಯಲಿ ಎಂಬ ಬೇಡಿಕೆಯನ್ನು ಇಡುತ್ತಿದ್ದಾರೆ.

ಈ ನಡುವೆ ಸಚಿವರಾದ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಔತಣ ಕೂಟ ನಡೆದಿತ್ತು. ಇದು ಕಾಂಗ್ರೆಸ್ ಪಾಳಯದಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಈ ಔತಣಕೂಟದ ಬೆನ್ನಲ್ಲೇ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ದಲಿತ ಸಚಿವರು, ಶಾಸಕರು, ಮಾಜಿ ಶಾಸಕರ ಔತಣಕೂಟ ಸಭೆಯನ್ನು ಕರೆದಿದ್ದರು.

ಆದರೆ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್ ನಾಯಕರಿಗೆ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ರಣದೀಪ್ ಸಿಂಗ್ ಸುರ್ಜೇವಾಲ ಸೂಚನೆಯಂತೆ ಔತಣ ಕೂಟಕ್ಕೆ ಬ್ರೇಕ್ ಹಾಕಲಾಗಿದೆ ಎಂದು ಹೇಳಲಾಗುತ್ತಿದೆ. ದಲಿತ ಸಚಿವರ ಔತಣಕೂಟಕ್ಕೆ ಬ್ರೇಕ್ ಬಿದ್ದಿರುವುದು ಕಾಂಗ್ರೆಸ್‌ನಲ್ಲಿರುವ ಸಿದರಾಮಯ್ಯ ಆಪ್ತರ ಅಸಮಾಧಾನಕ್ಕೆ ಕಾರಣವಾಗಿದೆ. ದಲಿತರ ಔತಣಕೂಟವನ್ನು ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪ್ರಿಯಾಂಕ್ ಖರ್ಗೆ ಕೂಡ ಸಮರ್ಥಿಸಿಕೊಂಡಿದ್ದಾರೆ. ಇದರಲ್ಲಿ ತಪ್ಪೇನು ಇಲ್ಲ ಎಂದು ಹೇಳಿದ್ದಾರೆ. ದಲಿತರ ಸಮಸ್ಯೆಗಳ ಕುರಿತಾಗಿ ಚರ್ಚೆ ನಡೆಸಲಷ್ಟೇ ಔತಣಕೂಟ ಏರ್ಪಡಿಸಿದ್ದೆವು. ಇದರಲ್ಲಿ ವಿಶೇಷತೆ ಏನೂ ಇಲ್ಲ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ.

ಈ ನಡುವೆ ಡಿಸಿಎಂ ಡಿಕೆ ಶಿವಕುಮಾರ್ ಅವರು ತಮಿಳುನಾಡಿನಲ್ಲಿ ವಿಶೇಷ ಹೋಮ, ಟೆಂಪಲ್ ರನ್ ನಡೆಸುವ ಮೂಲಕ ಪರೋಕ್ಷವಾದ ಸಂದೇಶಗಳನ್ನು ವಿರೋಧಿ ಪಾಳಯಕ್ಕೆ ನೀಡುತ್ತಿದ್ದಾರೆ. ಇವೆಲ್ಲವೂ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಆಂತರಿಕ ಬೆಳವಣಿಗೆಯ ಬಿಸಿಯನ್ನು ಎದ್ದು ತೋರಿಸುತ್ತಿದೆ. ಈ ಗೊಂದಲಕ್ಕೆ ಬ್ರೇಕ್ ಹಾಕಲು ಇದೀಗ ಹೈಕಮಾಂಡ್ ಎಂಟ್ರಿ ಕೊಡಲಿದೆ. ಸೋಮವಾರ ರಣದೀಪ್ ಸಿಂಗ್ ಸುರ್ಜೇವಾಲ ಅವರು ರಾಜ್ಯಕ್ಕೆ ಆಗಮಿಸಲಿದ್ದಾರೆ. ಪಕ್ಷ ಮತ್ತು ಸರ್ಕಾರದ ಪ್ರಮುಖರ ಜೊತೆಗೆ ಚರ್ಚೆಯನ್ನು ನಡೆಸಲಿದ್ದಾರೆ.



ಸುರ್ಜೇವಾಲ


ಕಾಂಗ್ರೆಸ್ ಸರ್ಕಾರದಲ್ಲಿ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲ

ಬೆಂಗಳೂರು: ವಿಧಾನಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿಗೆ ಬೆದರಿಕೆ ಪತ್ರ ಬಂದಿದ್ದು, ಕಾಂಗ್ರೆಸ್ ಸರ್ಕಾರದಲ್ಲಿ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲವಾಗಿದೆ ಎಂದು ಬಿಜೆಪಿ ರಾಜ್ಯಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬೆಳಗಾವಿಯ ಸುವರ್ಣ ಸೌಧದಲ್ಲಿ ರವಿ ಅವರ ಮೇಲೆ ಪ್ರಜಾಪ್ರಭುತ್ವವನ್ನು ನಾಚಿಸುವ ರೀತಿ ದೌರ್ಜನ್ಯ ನಡೆಯಿತು. ನಂತರವೂ ಅವರ ವಿರುದ್ಧ ನಿರಂತರ ಬೆದರಿಕೆ ಒಡ್ಡಲಾಗುತ್ತಿದೆ. ದುಷ್ಕರ್ಮಿಗಳು ಅವರ ವಿರುದ್ಧ ವ್ಯೂಹ ರಚಿಸಿರುವ ಸಾಧ್ಯತೆ ಇದೆ.

ಮೈಸೂರು ಮಿತ್ರ

ಭಾನುವಾರ 12 ಜನವರಿ 2025

ಇಂದು ಹೆಜ್ಜೆ–ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ



ಶ್ರೀಧರ್ ಜೈನ್

ಮೈಸೂರು, ಜ.11(ಜಿಎ)–ಮೈಸೂರಿನ ನಿವಿಷಾಂಭ ಡಾನ್ಸ್ ಪ್ರಮೋಟರ್ಸ್ ಸಂಸ್ಥೆ ವತಿಯಿಂದ 27ನೇ ವರ್ಷದ ಹೆಜ್ಜೆ–ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ ಕಾರ್ಯಕ್ರಮವನ್ನು ಜ.12ರಂದು ಸಂಜೆ 5 ಗಂಟೆಗೆ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥಾಪಕರಾದ ಶ್ರೀಧರ್ ಜೈನ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷದ ನೃತ್ಯೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ.ನರೇಂದ್ರ ಕುವಾರ್, ಉಪಾಧ್ಯಕ್ಷೆ ಡಿ.ಅನಿತಾ ಸುರೇಂದ್ರ ಕುಮಾರ್, ಆಶಿಶ್ ಮೋಹನ್ ಖೋಕರ್, ಜೀನಾ ಭಜನಾ ಕೇಂದ್ರ ಸಮಿತಿ ಮಾರ್ಗದರ್ಶಕಿ ಶ್ರದ್ಧಾ ಅಮಿತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಿ.ಎಂ.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ನಾಟ್ಯ ಗುರುಕುಲದ ಡಾ.ವಸಂತ ಕಿರಣ್ ಮತ್ತು ಕೇಂದ್ರ ಸಂಗೀತ ಅಕಾಡೆಮಿಯ ಡಾ.ಲಕ್ಷ್ಮೀನಾರಾಯಣ ಜೇನ ಅವರಿಗೆ 'ಹೆಜ್ಜೆ–ಗೆಜ್ಜೆ ನಾಟ್ಯ ರತ್ನ' ಪ್ರಶಸ್ತಿ, ವಿದ್ವಾನ್ ನಿಧಾಗ್ ಕರುನಾಡ್ ಮತ್ತು ವಿದುಷಿ ರಚನಾ ಕರಣಿಕ್ ದಂಪತಿಗಳಿಗೆ ಹಾಗೂ ವಿದ್ವಾನ್ ನಿಖಿಲ್ ರವಿ ಪರಮಾರ್, ವೈಶಾಲಿ ಚಂದ್ರಪ್ರಭು ಅವರಿಗೆ 'ಹೆಜ್ಜೆ–ಗೆಜ್ಜೆ' ಪ್ರಶಸ್ತಿ ನೀಡಿ ಅಭಿನಂದಿಸಲಾಗುತ್ತದೆ ಎಂದು ತಿಳಿಸಿದರು.

ವಿಶೇಷವಾಗಿ ಹಿರಿಯ ನಟಿ ಗಿರಿಜಾ ಲೋಕೇಶ್ ಹಾಗೂ ಕಲಾಶ್ರೀ ಗುರು ಮೈಸೂರು ಬಿ.ನಾಗರಾಜ್ ಅವರಿಗೆ 'ಕನ್ನಡ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕಲೆಗೆ ಪ್ರೋತ್ಸಾಹ ನೀಡುವ ಡಾ.ಕಮಲಮ್ಮ, ರೇವತಿ ಕಾಮತ್, ಭಾಗ್ಯ ಅಜಯ್‌ಕುಮಾರ್, ರಾಜು ಜೈನ್ ಅವರನ್ನು ಅಭಿನಂದಿಸಲಾಗುವುದು ಎಂದರು.

ಈ ಬಾರಿಯ ಕಾರ್ಯಕ್ರಮದಲ್ಲಿ ಸುಮಾರು 200 ಮಂದಿ ಕಲಾವಿದರಿಂದ ಶಿವ ತಾಂಡವ ನೃತ್ಯ ಕಾರ್ಯಕ್ರಮ ಪ್ರಮುಖ ಆಕರ್ಷಣೆಯಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೌಮ್ಯ ಶ್ರೀಧರ್ ಜೈನ್, ರೇಖಾ ಮಂಜುನಾಥ್, ಸಂಜನಾ ನಾರಾಯಣ್ ಉಪಸ್ಥಿತರಿದ್ದರು.

2025ರ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಗ್ರಾಮಾಂತರ ಬಿಜೆಪಿಯು ಹೊಸ ವರ್ಷದ ಕ್ಯಾಲೆಂಡರ್ ಅನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಿಡುಗಡೆ ಮಾಡಿದರು. ಬಿಜೆಪಿ ರಾಜ್ಯ ಪ್ರದಾನ ಕಾರ್ಯದರ್ಶಿ ಪಿ.ರಾಜೀವ್, ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರನ್ನು ಚಿತ್ರದಲ್ಲಿ ಕಾಣಬಹುದು.


ನಾಳೆ ಸಿ.ಚಂದನ್‌ಗೌಡರಿಗೆ ಪ್ರಶಸ್ತಿ ಪ್ರದಾನ



ಮೈಸೂರು, ಜ.11–ಮೈಸೂರಿನ ಜೆ.ಪಿ. ನಗರದಲ್ಲಿರುವ ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ ಜ.13ರಂದು ಬೆಳಗ್ಗೆ 11.30 ಗಂಟೆಗೆ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಂಕ್ರಾಂತಿ ನೂತನ ದಿನದರ್ಶಿಕೆ ಬಿಡುಗಡೆ, ಮಣ್ಣು ಉಳಿಸಿ ಜನಜಾಗೃತಿ ವಾರ್ಷಿಕ ಅಭಿಯಾನ ಮತ್ತು ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರಿಗೆ ಮಣ್ಣಿನ ಶ್ರೇಷ್ಠ ಮಗ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆ ಮತ್ತು ಸಾನ್ನಿಧ್ಯವನ್ನು ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ವಹಿಸುವರು. ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಡಾ.ಎನ್.ಶ್ರೀನಿವಾಸನ್ ಉಪಸ್ಥಿತರಿರುವರು ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಎಂ.ವಿ.ನಾಗೇಂದ್ರಬಾಬು, ಕಾರ್ಯಕಾರಿ ಸಮಿತಿ ಸದಸ್ಯ ಎನ್.ಅನಂತ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.11–ಜನವರಿ 13ರಂದು ಬೆಳಗ್ಗೆ 10ರಿಂದ 5 ಗಂಟೆಯವರೆಗೆ ರ‍್ಯಾಬಿಟ್ ಕಂಡಕ್ಟರ್ ಅನ್ನು ಕವರ್ಡ್ ಕಂಡಕ್ಟರ್‌ಗೆ ಬದಲಾಯಿಸುವ ಕಾಮಗಾರಿ ನಿಮಿತ್ತ ಬಿ.ಪಿ ಆಸ್ಪತ್ರೆ, ಕಲ್ಯಾಣಗಿರಿ, ಅಜೀಜ್ ಸೇಠ್‌ನಗರ, ಹೈದರಾಲಿ ಬ್ಲಾಕ್, ಮಹದೇವಪುರ ಮುಖ್ಯ ರಸ್ತೆ, ಗೌಸಿಯಾನಗರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಮಿಯತ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಹದಿಹರೆಯದ ಯುವತಿಗೆ 4 ವರ್ಷದಲ್ಲಿ 64 ಮಂದಿಯಿಂದ ಲೈಂಗಿಕ ಕಿರುಕುಳ



ಕೊಟ್ಟಾಯಂ: ಹದಿಹರೆಯದ ಯುವತಿಯೊಬ್ಬಳು ಕಳೆದ ನಾಲ್ಕು ವರ್ಷಗಳಲ್ಲಿ ತಾನು 64 ಮಂದಿಯಿಂದ ಲೈಂಗಿಕ ಕಿರುಕುಳಕ್ಕೆ ಗುರಿಯಾಗಿರುವುದಾಗಿ ಗಂಭೀರ ಆರೋಪ ಮಾಡಿದ್ದಾರೆ. ಕೇರಳದ ಪಟ್ಟಣಂತಿಟ್ಟ ಜಿಲ್ಲೆಯ ಹದಿಹರೆಯದ ಹುಡುಗಿ ಇಂತಹುದೊಂದು ಗಂಭೀರ ಆರೋಪ ಮಾಡಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ದೂರನ್ನು ಗಂಭೀರವಾಗಿ ಪರಿಗಣಿಸಿ ಈಗಾಗಲೇ ಆರು ಮಂದಿಯನ್ನು ಬಂಧಿಸಿದ್ದಾರೆ.

ಸಂತ್ರಸ್ತ ಹುಡುಗಿಗೆ ಎರಡು ತಿಂಗಳ ಹಿಂದೆಯಷ್ಟೇ 18 ವರ್ಷ ತುಂಬಿತ್ತು. ಹೀಗಾಗಿ ಅಪ್ರಾಪ್ತ ವಯಸ್ಸು ಇದ್ದಾಗಲೇ ಆಕೆ ಲೈಂಗಿಕ ಕಿರುಕುಳಕ್ಕೆ ಗುರಿಯಾಗಿದ್ದಳು. ಈ ಸಂಬಂಧ ಮಾಹಿತಿ ನೀಡಿರುವ ಪಟ್ಟಣಂತಿಟ್ಟ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎನ್.ರಾಜೀವ್, ಹುಡುಗಿ ಮೊದಲ ಬಾರಿಗೆ ಲೈಂಗಿಕ ಕಿರುಕುಳದ ಬಗ್ಗೆ ಶಾಲಾ ಕೌನ್ಸಿಲಿಂಗ್ ಸೆಷನ್ ವೇಳೆ ಬಹಿರಂಗಪಡಿಸಿದ್ದಾಳೆ ಎಂದು ತಿಳಿಸಿದ್ದಾರೆ. ಕ್ರೀಡಾಪಟುವೊಬ್ಬ ಕ್ರೀಡಾ ಶಿಬಿರಗಳು ಸೇರಿದಂತೆ ಪಟ್ಟಣಂತಿಟ್ಟ ಜಿಲ್ಲೆಯ ವಿವಿಧೆಡೆಗಳಲ್ಲಿ ಲೈಂಗಿಕ ಕಿರುಕುಳ ನೀಡಿದ್ದ. ಕೋಚ್‌ಗಳು, ಸಹಪಾಠಿಗಳು ಹಾಗೂ ಸ್ಥಳೀಯರು ಲೈಂಗಿಕ ಕಿರುಕುಳ ನೀಡಿದ್ದರು ಎನ್ನಲಾಗಿದೆ. ಈ ಯುವತಿಗೆ ಮೊಬೈಲ್ ಫೋನ್ ಇಲ್ಲದ ಕಾರಣ ತಂದೆಯ ಮೊಬೈಲ್ ಬಳಸುತ್ತಿದ್ದಳು. ಈ ಫೋನ್‌ನಲ್ಲಿ ಯುವತಿ ತನಗೆ ಲೈಂಗಿಕ ಕಿರುಕುಳ ನೀಡಿದ ಸುಮಾರು 40 ಮಂದಿಯ ಹೆಸರು ಹಾಗೂ ದೂರವಾಣಿ ಸಂಖ್ಯೆ ದಾಖಲಿಸಿದ್ದಾಳೆ.

ಸ್ಥಾವರಕ್ಕಳಿವುಂಟು ಜಂಗಮಕ್ಕೆ ಅಳಿವಿಲ್ಲ ಎಂಬಂತೆ ಎಸ್.ಎಂ.ಕೃಷ್ಣರ ಕೊಡುಗೆ, ಸಾಧನೆ ಶಾಶ್ವತ

● ಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ್ ಬಣ್ಣನೆ ● ಕೃಷ್ಣರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಮಾಜಿ ಸಿಎಂ ಎಸ್.ಎಂ.ಕೃಷ್ಣರ ಭಾವಚಿತ್ರಕ್ಕೆ (ಕಲಾವಿದರು ಅದೇ ತಾನೆ ರಚಿಸಿದ ಕೃಷ್ಣರ ಚಿತ್ರ) ಪರಿಷತ್‌ನ ಮಾಜಿ ಸ್ಪೀಕರ್ ಬಿ.ಎಲ್.ಶಂಕರ್ ಪುಷ್ಪಾರ್ಚನೆ ಮಾಡಿದರು.

ಮೈಸೂರು,ಜ.11(ಪಿಎಂ)– ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ತಾವು ಜವಾಬ್ದಾರಿ ನಿರ್ವಹಿಸಿದ ಪ್ರತಿಯೊಂದರಲ್ಲೂ ತಮ್ಮದೇ ವಿಶಿಷ್ಟ ಛಾಪು ಮೂಡಿ ಸಿದ್ದಾರೆ. ಸ್ಥಾವರಕ್ಕಳಿವುಂಟು ಜಂಗಮಕ್ಕೆ ಅಳಿವಿಲ್ಲ ಎಂಬಂತೆ ಅವರ ಕೊಡುಗೆ ಮತ್ತು ಸಾಧನೆಗಳು ಜಂಗಮ ಸ್ವರೂಪಿಯಾದವು ಎಂದು ಕರ್ನಾಟಕ ವಿಧಾನ ಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ್ ಬಣ್ಣಿಸಿದರು.

ಮೈಸೂರಿನ ಗೋಕುಲಂನಲ್ಲಿರುವ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಾಹುಕಾರ್ ಎಸ್.ಚನ್ನಯ್ಯ ಸಭಾಂಗಣದಲ್ಲಿ ಮೈಸೂರು ಮಹಾನಗರ ಮತ್ತು ಜಿಲ್ಲಾ ನಾಗರಿಕ ಸಮಿತಿ ಹಾಗೂ ಮಂಡ್ಯ ಜಿಲ್ಲಾ ಬಳಗ ಮೈಸೂರು ಸಂಯುಕ್ತಾಶ್ರಯದಲ್ಲಿ 'ಮಹಾ ಮುತ್ಸದ್ಧಿ ಭಾರತದ ಮಾಜಿ ವಿದೇಶಾಂಗ ಮಂತ್ರಿ ಕೀರ್ತಿಶೇಷ ಎಸ್.ಎಂ.ಕೃಷ್ಣ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ ಎಸ್.ಎಂ. ಕೃಷ್ಣ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಷ್ಟೇ ಸ್ಥಾವರಗಳನ್ನು ಕಟ್ಟಿದರೂ ಅವು ಎಲ್ಲಾ ಕಾಲಕ್ಕೂ ಇರಲು ಸಾಧ್ಯವಿಲ್ಲ. ಆದರೆ ಜಂಗಮ ಸ್ವರೂಪಿಯಾದ ಎಸ್.ಎಂ. ಕೃಷ್ಣ ಅವರ ಸಾಧನೆಗಳು, ಕೊಡುಗೆಗಳು ಇದ್ದೇ ಇರುತ್ತವೆ. ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಒಬ್ಬನೇ ರಾಜಕುಮಾರ ಎಂಬಂತೆ ರಾಜಕಾರಣದ ರಾಜಕುಮಾರ ಯಾರಾದರೂ ಇದ್ದರೆ ಅದು ಕೃಷ್ಣ ಎಂದು ಅಭಿಮಾನ ವ್ಯಕ್ತಪಡಿಸಿದರು.

ರಾಮಕೃಷ್ಣ ಆಶ್ರಮದ ಪ್ರಭಾವ: ಎಸ್.ಎಂ.ಕೃಷ್ಣ ಅವರ ವ್ಯಕ್ತಿತ್ವ ರೂಪಿಸುವಲ್ಲಿ ಮೈಸೂರು ಮತ್ತು ಶ್ರೀರಾಮಕೃಷ್ಣ ಆಶ್ರಮ ದೊಡ್ಡ ಪಾತ್ರ ವಹಿಸಿವೆ. ರಾಮಕೃಷ್ಣ ಪರಮಹಂಸರು, ಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರು ಹಾಗೂ ಆಶ್ರಮದ ಎಲ್ಲಾ ಸ್ವಾಮೀಜಿಗಳ ಪ್ರಭಾವ ಅವರ ಮೇಲಾಗಿದೆ. ಅವರಲ್ಲಿ ಸೌಮ್ಯತೆ, ಸಜ್ಜನಿಕೆ, ಸುಸಂಸ್ಕೃತಿ, ಭಾಷೆ ಮೇಲೆ ಹಿಡಿತ ಬರಲು ಇದೇ ಕಾರಣ. ಹಾಗಾಗಿ ರಾಮಕೃಷ್ಣ ಆಶ್ರಮಕ್ಕೆ ನನ್ನ ಗೌರವ ಸಮರ್ಪಣೆ ಮಾಡುತ್ತೇನೆ ಎಂದರು.

ಮಧ್ಯಮ ಪಂಥಿಯಾಗಿದ್ದ ಕಾಂಗ್ರೆಸ್: ಸಮಾಜವಾದಿ ಚಳವಳಿಗೆ ಆಕರ್ಷಿತರಾಗಿ ಸಮಾಜವಾದಿ ಪಕ್ಷದಲ್ಲಿ ಕೃಷ್ಣ ಅವರು ಗುರುತಿಸಿಕೊಂಡ ಸಂದರ್ಭದಲ್ಲಿ ಅವರ ಸಂಪರ್ಕಕ್ಕೆ ಬಂದವರು ದೊಡ್ಡ ವ್ಯಕ್ತಿಗಳೇ. ಅಂತೆಯೇ ಕರ್ನಾಟಕದಲ್ಲಿ ಕೆ.ಹೆಚ್. ರಂಗನಾಥ್ ಸಮಾಜವಾದಿ ಪಕ್ಷದಲ್ಲಿ ಇದ್ದರು. ಆ ಸಂದರ್ಭದಲ್ಲಿ ಸಮಾಜವಾದಿ ಪಕ್ಷ ಕಟ್ಟುತ್ತಿದ್ದ ಈ ಎಲ್ಲರು 1969ರಲ್ಲಿ ತಮ್ಮ ನಿಲುವು ಬದಲಾಯಿಸಿ ಕಾಂಗ್ರೆಸ್ ಸೇರುತ್ತಾರೆ. ಇಂದು ಕಾಂಗ್ರೆಸ್ ಏನಾದರೂ ಬಡವರ ಪಾರ್ಟಿ, ಬಡಜನರ ಪರವಾಗಿ ಬಹಳ ಕೆಲಸ ಮಾಡಿರುವ ಪಾರ್ಟಿಯೆಂಬ ಹೆಸರು ಗಳಿಸಿದ್ದರೆ ಕೃಷ್ಣ ಸೇರಿದಂತೆ ಸಮಾಜವಾದಿ ಪಕ್ಷದಿಂದ ಬಂದವರೇ ಕಾರಣಕರ್ತರು. ಆ ನಾಯಕರ ಪ್ರಭಾವ ಮತ್ತು ಅವರ ಸಿದ್ಧಾಂತದ ಕಾರಣದಿಂದ ಮಧ್ಯಮ ಪಂಥಿಯಾಗಿದ್ದ ಕಾಂಗ್ರೆಸ್, ಸ್ವಲ್ಪ ಎಡಕ್ಕೆ ವಾಲಿತು. ಅದು ರಾಷ್ಟ್ರಮಟ್ಟದಲ್ಲೂ ದೊಡ್ಡ ಪ್ರಮಾಣದಲ್ಲಿ ಆಯಿತು ಎಂದು ಹೇಳಿದರು.

ಎಸ್.ಎಂ.ಕೃಷ್ಣ ಸುದೀರ್ಘ ಕಾಲ ಕಾಂಗ್ರೆಸ್‌ನದ್ದು, ಸಾಕಷ್ಟು ಏಳುಬೀಳು ಸಹ ಕಂಡಿದ್ದಾರೆ. 1984ರಲ್ಲಿ ಅವರು ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದರೆ ಇತಿಹಾಸ ಬೇರೆಯೇ ಆಗುತ್ತಿತ್ತು. ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸಾಧನೆ ಮಾಡುವ ಸಾಧ್ಯತೆ ಇತ್ತು. ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಸೇರಿದಂತೆ ನಾಲ್ಕು ಸದನಗಳಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ನಾನೂ ಕೂಡ ನಾಲ್ಕೂವರೆ ವರ್ಷ ಸಭಾಪತಿಯಾಗಿದ್ದಾಗ ಅವರು ಮುಖ್ಯಮಂತ್ರಿ ಆಗಿದ್ದರು ಎಂದರು. ಶಾಸಕರು ಎಸ್.ಎಂ.ಕೃಷ್ಣ ಅವರ ಕಡೆಯೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ವೀರಪ್ಪ ಮೊಯ್ಲಿ ಅವರು ಮುಖ್ಯಮಂತ್ರಿಯಾದರು. ಆದರೂ ಕೂಡ ಅವರೊಟ್ಟಿಗೆ ಕೃಷ್ಣ ಅವರು ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡಿದರು. ಕೃಷ್ಣ ಅವರು ದ್ವೇಷದ ರಾಜಕಾರಣ ಎಂದೂ ಮಾಡಲಿಲ್ಲ. ಇವರು ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ಮೊಯ್ಲಿ ಅವರನ್ನೇ ಆಡಳಿತ ಸುಧಾರಣಾ ಆಯೋಗ ಮತ್ತು ತೆರಿಗೆ ಸುಧಾರಣೆ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದರು. ಇದನ್ನು ಮೊಯ್ಲಿಯವರು ಇತ್ತೀಚೆಗೆ ನೆನಪು ಸಹ ಮಾಡಿಕೊಡಿದ್ದಾರೆ. ಯಾವ ಕಲ್ಮಷ ಇಲ್ಲದ ಮನುಷ್ಯ ಎಂದು ಸ್ಮರಿಸಿದ್ದಾರೆ.

ಇಂತಹ ಉನ್ನತ ಗುಣಗಳು ಅವರಿಗೆ ರಾಮಕೃಷ್ಣ ಆಶ್ರಮ ಮತ್ತು ಅವರ ಕುಟುಂಬದಲ್ಲಿ ದೊರತ ಮೌಲ್ಯಗಳಾಗಿವೆ ಎಂದು ಹೇಳಿದರು. ಶಿಕ್ಷಣ ಮತ್ತು ಆರೋಗ್ಯ ಈ ಎರಡೂ ಇಂದು ದೇಶದಲ್ಲಿ ದುಬಾರಿಯಾಗಿವೆ. ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಅತ್ಯಂತ ಯಶಸ್ವಿಯಾಗಿ ಶಾಲೆಗಳಲ್ಲಿ ಮಧ್ಯಾಹ್ನ ಬಿಸಿಯೂಟ ಯೋಜನೆ ಜಾರಿಗೊಳಿಸಿದರು. ಮಾರಕವಾದ ಕಾಯಿಲೆಗಳು ಬಂದ ಸಂದರ್ಭದಲ್ಲಿ ಜನರಿಗೆ ಆರ್ಥಿಕ ತೊಂದರೆಯಾಗಬಾರದು ಎಂದು ಯಶಸ್ವಿ ಯೋಜನೆ ಜಾರಿಗೊಳಿಸಿದರು ಎಂದರು.

ಪಿಎಂ ಪತ್ರದಲ್ಲಿ ಅಸಮಾಧಾನ: ಮುಖ್ಯಮಂತ್ರಿಗಳ ಮಾಜಿ ಮಾಧ್ಯಮ ಕಾರ್ಯದರ್ಶಿ ಹೆಚ್.ಬಿ.ದಿನೇಶ್ ಮಾತನಾಡಿ, ನಾನು ನಾಲ್ಕು ಸಿಎಂಗಳ ಜೊತೆ ಕೆಲಸ ಮಾಡಿದ್ದು, ಅತ್ಯಂತ ದಕ್ಷ ಆಡಳಿತ ನೀಡಿದ ಕೀರ್ತಿ ಕೃಷ್ಣರಿಗೆ ಸಲ್ಲುತ್ತದೆ. ಬೆಂಗಳೂರು ಅಜೆಂಡಾ ಟಾಸ್ಕ್‌ಪೋರ್ಸ್ ಮಾಡಿಸಿ ಆ ಮೂಲಕ ಮೂಲಭೂತ ಸೌಲಭ್ಯ ಕಲ್ಪಿಸಿದರು. ಕೃಷ್ಣ ಅವರು ಸಿಎಂ ಆಗಿದ್ದಾಗ ಅಟಲ್‌ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದರು. ಕರ್ನಾಟಕದಲ್ಲಿ ಮಹಿಳಾ ಸಬಲೀಕರಣಕ್ಕೆ ಕೇಂದ್ರ ಸರ್ಕಾರ ನೀಡಿದ ಅನುದಾನ ಸರಿಯಾಗಿ ಬಳಕೆ ಮಾಡಿಲ್ಲವೆಂದು ವಾಜಪೇಯಿ ಅಸಮಾಧಾನ ವ್ಯಕ್ತಪಡಿಸಿ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ವಾರದೊಳಗೆ ಸೂಕ್ತ ಪ್ರಸ್ತಾವನೆ ಬರಬೇಕೆಂದು ಕೃಷ್ಣ ನಿರ್ದೇಶನ ಕೊಟ್ಟರು. ಅದರಂತೆ ಮೋಟಮ್ಮ ಸ್ತ್ರೀಶಕ್ತಿ ಯೋಜನೆಯ ಪ್ರಸ್ತಾವನೆ ಕೊಟ್ಟರು. ಈ ಯೋಜನೆ ಇಡೀ ಕರ್ನಾಟಕದಲ್ಲಿ ಚಳವಳಿ ರೂಪ ಪಡೆದುಕೊಂಡಿತು ಎಂದು ತಿಳಿಸಿದರು.

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಎಂ.ರಾಜಶೇಖರ, ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿದರು. ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ವೇದಿಕೆಯಲ್ಲಿದ್ದರು. ಶಾಸಕ ಕೆ.ಹರೀಶ್‌ಗೌಡ, ಮಾಜಿ ಎಂಎಲ್‌ಸಿಗಳಾದ ಡಿ.ಮಾದೇಗೌಡ, ಸಂದೇಶ್‌ನಾಗರಾಜು, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

> ಕರ್ನಾಟಕದ ಸಂಸ್ಕೃತಿಯ ಪ್ರತಿರೂಪವಾಗಿ ಬದುಕಿದವರು ಎಸ್.ಎಂ.ಕೃಷ್ಣ. 92 ವರ್ಷಗಳ ಸುದೀರ್ಘ ಕಾಲ ಅರ್ಥಪೂರ್ಣ ಬದುಕು ನಡೆಸಿದರು. ಅವರ ನಿಧನದ ಹಿನ್ನೆಲೆಯಲ್ಲಿ ಮೈಸೂರಿನಲ್ಲೂ ಸಹ ವಿಷಾದದ ವಾತಾವರಣ ನಿರ್ಮಾಣವಾಗಿತ್ತು ಒಳ್ಳೆಯ ಅಭಿರುಚಿ ಹೊಂದಿದ್ದ ಮೇರು ವ್ಯಕ್ತಿತ್ವ ಅವರು.
>
> –ಪ್ರೊ.ಎಂ.ಕೃಷ್ಣೇಗೌಡ, ವಾಗ್ಮಿಗಳು.

ರಿಂಗ್ ರಸ್ತೆಗೆ ಕೃಷ್ಣರ ಹೆಸರಿಡಿ

> ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ಕೃಷ್ಣ ಅವರು ಒಬ್ಬ ಶ್ರೇಷ್ಠ ನಾಯಕರು. ಅವರ ಸಂಪುಟದಲ್ಲಿ ವಾರ್ತಾ ಇಲಾಖೆ ಸಚಿವನಾಗಿದ್ದಾಗ, ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೃಷ್ಣ ಅವರು ವೇದಿಕೆಗೆ ಬಾರದೇ ಸಭಿಕರಾಗಿ ಕುಳಿತು ನನ್ನಿಂದಲೇ ಪ್ರಶಸ್ತಿಗಳನ್ನು ಪ್ರದಾನ ಮಾಡಿಸಿದರು. ಅವರು ಎಂದೂ ಜಾತಿ ರಾಜಕಾರಣ ಮಾಡಲಿಲ್ಲ. ಭ್ರಷ್ಟಾಚಾರದ ಸೋಂಕು ಅಂಟಿಸಿಕೊಳ್ಳಲಿಲ್ಲ. ಅವರ ಸಂಪುಟದಲ್ಲಿ ಸಚಿವನಾಗುತ್ತೇನೆ ಎಂದುಕೊಂಡಿರಲಿಲ್ಲ. ಅಂದು ರಾತ್ರಿ 10 ಗಂಟೆ ವೇಳೆಗೆ ತಾವು ಸಚಿವರಾಗುತ್ತಿದ್ದೀರಿ ಎಂಬ ಕರೆ ಬಂದಿತು. ಬಸವಣ್ಣನವರ ಅನುಭವ ಮಂಟಪದಂತಹ ಮಂತ್ರಿ ಮಂಡಲ ಅವರದಾಗಿತ್ತು. ಅವರೊಂದಿಗೆ ನಾನು ಹೊಂದಿದ್ದ ಒಡನಾಟದ ಬಗ್ಗೆ ಪುಸ್ತಕ ಹೊರ ತರುವ ಆಕಾಂಕ್ಷೆ ಹೊಂದಿದ್ದೇನೆ. ಮೈಸೂರಿನ ರಿಂಗ್ ರಸ್ತೆಗೆ ಎಸ್.ಎಂ.ಕೃಷ್ಣ ಅವರ ಹೆಸರು ನಾಮಕರಣ ಮಾಡಬೇಕು.
>
> –ಕೋಟೆ ಎಂ.ಶಿವಣ್ಣ, ಮಾಜಿ ಸಚಿವರು.

ಕರ್ನಾಟಕ ರತ್ನ ಪುರಸ್ಕಾರ ನೀಡಬೇಕು

> ಕೃಷ್ಣ ಅವರು ಚಿಕ್ಕ ವಯಸ್ಸಿನಿಂದಲೇ ಮೌಲ್ಯಾಧಾರಿತ ವ್ಯಕ್ತಿತ್ವ ರೂಪಿಸಿಕೊಂಡವರು. 1959ರಲ್ಲಿ ಅಮೆರಿಕದಲ್ಲಿ ಫುಲ್‌ಬ್ರೈಟರ್ ಫೆಲೋಶಿಪ್ ಪಡೆದಿದ್ದರು. ಮುಖ್ಯಮಂತ್ರಿಯಾಗಿ ಹೊಸ ಯೋಜನೆಗಳನ್ನು ಜಾರಿಗೆ ತಂದರು. ಇ–ಆಡಳಿತ, ಮೂಲಭೂತ ಸೌಕರ್ಯಕ್ಕೆ ಹೆಚ್ಚಿನ ಗಮನ ನೀಡಿದರು. ತ್ವರಿತ ನ್ಯಾಯಾಲಯ ಸ್ಥಾಪನೆ ಮಾಡಿದರು. ದೇಶದಲ್ಲಿ ಯಾರು ಉತ್ತಮ ಮುಖ್ಯಮಂತ್ರಿ ಎಂದು ಇಂಡಿಯಾ ಟುಡೆ ಸರ್ವೇ ಮಾಡಿ, ಎಸ್.ಎಂ.ಕೃಷ್ಣ ಅವರನ್ನು 'ಬೆಸ್ಟ್ ಚೀಫ್ ಮಿನಿಸ್ಟರ್ ಆಫ್ ಕರ್ನಾಟಕ' ಎಂದು 2002ರಲ್ಲಿ ಪ್ರಕಟಿಸಿದೆ. ಅಮೋಘ ಸೇವೆಗಾಗಿ ಕೇಂದ್ರ ಸರ್ಕಾರ ಪದ್ಮವಿಭೂಷಣ ಪುರಸ್ಕಾರ ನೀಡಿ ಗೌರವಿಸಿದೆ. ಅಂತೆಯೇ ಕರ್ನಾಟಕ ಸರ್ಕಾರ ಕೂಡ ಇವರಿಗೆ ಕರ್ನಾಟಕ ರತ್ನ ಪುರಸ್ಕಾರ ನೀಡಬೇಕು. ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ಇವರ ಹೆಸರು ನಾಮಕರಣ ಮಾಡಬೇಕು ಎಂದು ಕೋರಿದರು.
>
> –ಡಾ.ಹೆಚ್.ಎಂ.ರಾಜಶೇಖರ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿವಿ.

ಶರಣಾಗಿದ್ದ ನಕ್ಸಲರ ಶಸ್ತ್ರಾಸ್ತ್ರಗಳು ವಶಕ್ಕೆ; ಮೇಗೂರು ಅರಣ್ಯದಲ್ಲಿ ಪತ್ತೆ



ಚಿಕ್ಕಮಗಳೂರು. ಜ.11– ನಕ್ಸಲಿಸಂ ಅನ್ನು ತೊರೆದು ಮುಖ್ಯವಾಹಿನಿಗೆ ಬಂದಿದ್ದ ಆರು ನಕ್ಸಲರ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

ಎರಡು ದಿನಗಳ ನಿರಂತರ ಹುಡುಕಾಟದ ನಂತರ ಪೊಲೀಸರಿಗೆ ಮೇಗೂರು ಅರಣ್ಯ ಪ್ರದೇಶದಲ್ಲಿ ಆರು ಬಂದೂಕು ಹಾಗೂ ಮದ್ದು ಗುಂಡು ದೊರೆತಿವೆ. 1 ಎ.ಕೆ–56, 3–303 ರೈಫಲ್, 12 ಬೋರ್ ಎಸ್‌ಬಿಬಿಎಲ್, 1 ಸ್ವದೇಶ ನಿರ್ಮಿತ ಬಂದೂಕು ಸಿಕ್ಕಿದೆ. 7.62 ಎಂಎಂ ಎ.ಕೆ. ಮದ್ದು ಗುಂಡು–11, 303–ರೈಫಲ್ ಮದ್ದುಗುಂಡು 133, 12 ಬೋರ್ ಕಾರ್ಟ್ರಿಡ್ಜಸ್ 24, ಸ್ವದೇಶ ನಿರ್ಮಿತ ಪಿಸ್ತೂಲ್ ಮದ್ದುಗುಂಡುಗಳು 8 ಸೇರಿ ಒಟ್ಟು 176 ಮದ್ದುಗುಂಡು, ಎ.ಕೆ–56 ಖಾಲಿ ಮ್ಯಾಗ್ಜಿನ್ 1 ದೊರೆತಿದೆ.

ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್ 251 (1) (ಬಿ), 7 ಮತ್ತು 25 (1ಎ) ಅಡಿಯಲ್ಲಿ ಪ್ರಕರಣ ಜಯಪುರ ಠಾಣೆಯಲ್ಲಿ ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದ್ದಾರೆ.

ಬುಧವಾರ ಮುಖ್ಯವಾಹಿನಿಗೆ ಬಂದ ನಕ್ಸಲರು, ಅದೇ ಮೇಗೂರು ಅರಣ್ಯದಿಂದ ಹೊರಬಂದಿದ್ದರು. ನಕ್ಸಲರು ಶರಣಾಗುವ ಮೊದಲು ಕೊನೆಯ ಸಭೆ ನಡೆಸಿದ್ದ ಮೇಗೂರು ಅರಣ್ಯ ಪ್ರದೇಶದಲ್ಲಿ ಪೊಲೀಸ್ ತಂಡ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿತ್ತು. ಕೊಪ್ಪ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಂಜುನಾಥ್ ನೇತೃತ್ವದ ತಂಡ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚಿತ್ತು.

ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿಯಲ್ಲಿ ಅವರ ಮುಂದೆ ಶರಣಾಗಿದ್ದ ಆರು ನಕ್ಸಲರು ತಮ್ಮ ಶಸ್ತ್ರಾಸ್ತ್ರಗಳನ್ನು ಶರಣಾಗತಿ ಮಾಡಿರಲಿಲ್ಲ. ಅವರು ತಮ್ಮ ಹಸಿರು ಸಮವಸ್ತ್ರವನ್ನು ಸಾಂಕೇತಿಕವಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿ ತಮ್ಮ ಶರಣಾಗತಿಯನ್ನು ಘೋಷಿಸಿದ್ದರು. ಸಿದ್ದರಾಮಯ್ಯ ಅವರು ಶರಣಾದ ಮಾವೋವಾದಿಗಳಿಗೆ ಗುಲಾಬಿಗಳು ಮತ್ತು ಭಾರತೀಯ ಸಂವಿಧಾನದ ಪ್ರತಿಗಳನ್ನು ನೀಡುವ ಮೂಲಕ ಅವರನ್ನು ಮುಖ್ಯವಾಹಿನಿಗೆ ಸ್ವಾಗತಿಸಿದರು.

ಮಾವೋವಾದಿ ಚಳುವಳಿಯನ್ನು ನಿರ್ಮೂಲನೆ ಮಾಡುವುದು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಉದ್ದೇಶ. ಎಲ್ಲಾ ಪ್ರತಿಭಟನೆಗಳು ಶಾಂತಿಯುತವಾಗಿರಬೇಕು ಮತ್ತು ಹಿಂಸಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಬಾರದು ಎಂದು ಹೇಳಿದರು. ಅದು ಅವರ ಸರ್ಕಾರದ ನಿಲುವು ಕೂಡ ಆಗಿದೆ. ಶರಣಾದ ಮಾವೋವಾದಿಗಳ ಬಂದೂಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದ್ದರು.

ಇದೇ ವೇಳೆ ರಾಜ್ಯ ಸರ್ಕಾರ ಮಾವೋವಾದಿಗಳಿಗೆ ಶರಣಾದ ಶಸ್ತ್ರಾಸ್ತ್ರಗಳಿಗೆ ಪ್ಯಾಕೇಜ್ ಘೋಷಣೆ ಮಾಡಿದ್ದು, ಎಕೆ–47 ರೈಫಲ್‌ಗೆ 30,000 ರೂ, ಯುಪಿಎಂ, ಜಿಪಿಎಂ, ಆರ್‌ಪಿಜೆ, ಸ್ನೈಪರ್ ರೈಫಲ್‌ಗಳಿಗೆ 50,000 ರೂ., ಸ್ನೈಪರ್ ಕ್ಷಿಪಣಿಗೆ 40,000 ರೂ., ಒಂದು ಗ್ರೆನೇಡ್‌ಗೆ 2,000 ರೂ, ರಿವಾಲ್ವರ್/ಪಿಸ್ತೂಲ್‌ಗೆ 10,000 ರೂ, ರಾಕೆಟ್ ಲಾಂಚರ್‌ಗೆ 3,000 ರೂ, 1 ಕಿಲೋ ಸ್ಫೋಟಕಗಳಿಗೆ 4,000 ರೂ, ಸ್ಯಾಟಲೈಟ್ ಫೋನ್‌ಗೆ 20,000 ರೂ, ಪ್ರತಿ ಜೀವಂತ ಗುಂಡಿಗೆ 100 ರೂ ಎಂದು ನಿಗದಿಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಶರಣಾಗತಿ ಬಗ್ಗೆ ಅಣ್ಣಾಮಲೈ ಅನುಮಾನ...!



ಮಂಗಳೂರು: ನಕ್ಸಲ್ ಶರಣಾಗತಿ ಹಾಗೂ ವಿಕ್ರಂಗೌಡ ಎನ್‌ಕೌಂಟರ್ ಬಗ್ಗೆ ಅನುಮಾನ ಮೂಡುತ್ತಿದೆ. ಇಲ್ಲಿ ರಾಜಕೀಯ ಮೈಲೇಜ್‌ಗೋಸ್ಕರ ಶರಣಾಗತಿ ಪ್ರಕ್ರಿಯೆ ನಡೆಸಲಾಗಿದೆ ಎಂದು ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಹೇಳಿದರು. ಮಂಗಳೂರಿನಲ್ಲಿ ಮಾತನಾಡಿದ ಅವರು, ನಕ್ಸಲ್ ಶರಣಾಗತಿ ನಿಯಮ ಬಹಳ ದೊಡ್ಡಮಟ್ಟದ ಪ್ರಕ್ರಿಯೆ. ಶರಣಾಗತಿ ಸಂಬಂಧ ಕೆಲವೊಂದು ಕಂಡೀಷನ್‌ಗಳಿರುತ್ತದೆ. ಆದರೆ ಕರ್ನಾಟಕದಲ್ಲಿ ಮೊನ್ನೆ ನಡೆದ ನಕ್ಸಲ್ ಶರಣಾಗತಿ ಸ್ವಲ್ಪ ಅನುಮಾನ ಮೂಡುತ್ತಿದೆ. ನಕ್ಸಲ್ ಮುಖಂಡ ವಿಕ್ರಂಗೌಡನ ಎನ್‌ಕೌಂಟರ್‌ನಲ್ಲೂ ಅನುಮಾನವಿದೆ. ಎನ್‌ಕೌಂಟರ್ ಆದ ತಕ್ಷಣ ನಕ್ಸಲ್‌ಗಳು ಶರಣಾದರು ಎಂದು ಸರಕಾರ ಹೇಳುತ್ತಿದೆ. ನಕ್ಸಲರು ಶರಣಾಗುವಂತೆ ಯಾರು ಮಾತುಕತೆ ನಡೆಸಿದರು ಎಂಬುದು ಗೊತ್ತಿಲ್ಲ. ನಕ್ಸಲ್ ತಂಡದೊಳಗಡೆ ಇರುವ ಆಂತರಿಕ ರಾಜಕೀಯವನ್ನು ಕಾಂಗ್ರೆಸ್ ದುರ್ಬಳಕೆ ಮಾಡುತ್ತಿದೆಯೇ ಎಂಬ ಅನುಮಾನ ಮೂಡುತ್ತಿದೆ ಎಂದು ಹೇಳಿದರು.

ಈ ಹಿಂದೆ ನಾನು ಚಿಕ್ಕಮಗಳೂರು ಎಸ್ಪಿಯಾಗಿದ್ದ ಸಂದರ್ಭ ನಕ್ಸಲರು ಶರಣಾಗಿದ್ದರು. ನಕ್ಸಲರ ಶರಣಾಗತಿ ಪ್ರಕ್ರಿಯೆಯಲ್ಲಿ ನಾನು ಭಾಗವಹಿಸಿದ್ದೆ. ನಿಯಮಗಳ ಪ್ರಕಾರ ಜಿಲ್ಲಾಧಿಕಾರಿ ಮತ್ತು ಎಸ್ಪಿಯ ಮುಂಭಾಗ ನಕ್ಸಲರು ಶರಣಾಗಬೇಕು. ಆನಂತರ ಬೇರೆ ಪ್ರಕ್ರಿಯೆಗಳು ನಡೆಯುತ್ತವೆ. ಇಲ್ಲಿ ರಾಜಕೀಯ ಮೈಲೇಜ್‌ಗೋಸ್ಕರ ಶರಣಾಗತಿ ಪ್ರಕ್ರಿಯೆ ನಡೆಸಲಾಗಿದೆ. ನಕ್ಸಲ್ ಬೆಂಬಲಿಗರು ಸರ್ಕಾರದ ಮೇಲೆ ಪ್ರಭಾವ ಬೀರಿದ್ದಾರೆ. ಇವರು ನಾಗರಿಕ ಸಮಾಜದ ಮೇಲೆ ಪ್ರಭಾವ ಬೀರಲಿದ್ದಾರೆ ಎಂದರು. ನಕ್ಸಲರು ಶರಣಾದಾಗ ಜನರಿಗೆ ವಿಶ್ವಾಸ ಬರಬೇಕು. ನಕ್ಸಲರ ಶರಣಾಗತಿ ಬಗ್ಗೆ ಜನರಿಗೆ ವಿಶ್ವಾಸವಿಲ್ಲ. ಶರಣಾಗತಿಯ ಬಗ್ಗೆ ಗೃಹಸಚಿವರೇ ಮಾಹಿತಿಯ ಕೊರತೆಯಿದ್ದ ಹಾಗೆ ಉಲ್ಟಾ–ಪಲ್ಟಾ ಮಾತನಾಡುತ್ತಾರೆ. ಶರಣಾದ ನಕ್ಸಲರು ನಾಗರಿಕ ಸಮಾಜದ ಮೇಲೆ ಪ್ರಭಾವ ಬೀರುವ ಅಪಾಯವಿದೆ ಎಂದರು.

ದೇಶ - ವಿದೇಶ

ನೀಲಿ ಚಿತ್ರತಾರೆಗೆ ಲಂಚ ಪ್ರಕರಣದಲ್ಲಿ ಟ್ರಂಪ್‌ಗೆ ಜೈಲು ಶಿಕ್ಷೆ ವಿಧಿಸಲು ಕೋರ್ಟ್ ನಕಾರ



ವಾಷಿಂಗ್ಟನ್: ನೀಲಿ ಚಿತ್ರತಾರೆ ಸ್ಟಾರ್ಮಿ ಡೆನಿಯಲ್ಸ್ ಅವರಿಗೆ ಲಂಚ ನೀಡಿದ ಪ್ರಕರಣದಲ್ಲಿ ದೋಷಿಯಾಗಿರುವ ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಜೈಲು ಶಿಕ್ಷೆ ವಿಧಿಸಲು ನ್ಯಾಯಾಧೀಶರು ನಿರಾಕರಿಸಿದ್ದಾರೆ. ಪ್ರಕರಣದಲ್ಲಿ ಟ್ರಂಪ್ ದೋಷಿ ಎಂದು ಘೋಷಿಸಿದ್ದ ಮ್ಯಾನ್‌ಹ್ಯಾಟನ್ ಕೋರ್ಟ್, ಶಿಕ್ಷೆಯ ಪ್ರಮಾಣವನ್ನು ಶುಕ್ರವಾರಕ್ಕೆ ಕಾಯ್ದಿರಿಸಿತ್ತು. ತೀರ್ಪು ಪ್ರಕಟಿಸಿದ ನ್ಯಾಯಾಧೀಶರು ಔಪಚಾರಿಕವಾಗಿ ಶಿಕ್ಷೆ ವಿಧಿಸಿದರು. ಆದರೆ ಯಾವುದೇ ಜೈಲು ಶಿಕ್ಷೆ ವಿಧಿಸದೆ ಬೇಷರತ್ತಾದ ಬಿಡುಗಡೆ ಶಿಕ್ಷೆ ವಿಧಿಸಿದರು ಎಂದು ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ. ಈ ನಿರ್ಧಾರವು ಟ್ರಂಪ್ ಅವರನ್ನು ಅಪರಾಧದಿಂದ ಮುಕ್ತಗೊಳಿಸುತ್ತದೆ ಮತ್ತು ಜೈಲು ಶಿಕ್ಷೆ ಅಥವಾ ದಂಡ ಇಲ್ಲದೆ ಶ್ವೇತಭವನ ಪ್ರವೇಶಿಸಲು ಅವಕಾಶ ನೀಡುತ್ತದೆ.

ಮ್ಯಾನ್‌ಹ್ಯಾಟನ್ ನ್ಯಾಯಾಧೀಶ ಜಾನ್ ಎಂ.ಮರ್ಚಂಟ್, ಅಮೆರಿಕದ ನಿಯೋಜಿತ ಅಧ್ಯಕ್ಷರು ಶ್ವೇತಭವನದಲ್ಲಿ ಮೊದಲ ಅಪರಾಧಿಯಾಗುವುದನ್ನು ತಪ್ಪಿಸಲು ಬೇಷರತ್ತಾದ ಬಿಡುಗಡೆ ಶಿಕ್ಷೆ ನೀಡಿದ್ದಾರೆ. ನ್ಯಾಯಾಧೀಶರು, 2ನೇ ಬಾರಿಗೆ ಅಧಿಕಾರಕ್ಕೆ ಬಂದಿರುವ 78 ವರ್ಷದ ಡೊನಾಲ್ಡ್ ಟ್ರಂಪ್‌ಗೆ 4 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅಧಿಕಾರವನ್ನು ಹೊಂದಿದ್ದರು.

ತಲೆಗೆ ಗುಂಡು ತಗುಲಿ ಆಪ್ ಶಾಸಕ ಗುರುಪ್ರೀತ್ ಗೋಗಿ ಸಾವು



ಲೂಧಿಯಾನ: ಪಂಜಾಬ್‌ನ ಲೂಧಿಯಾನ ಪಶ್ಚಿಮದ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕ ಗುರುಪ್ರೀತ್ ಬಸ್ಸಿ ಗೋಗಿ ಶುಕ್ರವಾರ ರಾತ್ರಿ ದುರಂತ ಘಟನೆಯಲ್ಲಿ ಮೃತಪಟ್ಟಿದ್ದಾರೆ.

ಗುರುಪ್ರೀತ್ ಗೋಗಿ ತನ್ನ ಕೋಣೆಯಲ್ಲಿ ಒಬ್ಬರೇ ಕುಳಿತು ಪಿಸ್ತೂಲ್ ಅನ್ನು ಸ್ವಚ್ಛಗೊಳಿಸುತ್ತಿದ್ದ ಸಮಯದಲ್ಲಿ ಇದ್ದಕ್ಕಿದ್ದಂತೆ ಒಂದು ಗುಂಡು ಹಾರಿ ಅವರ ತಲೆಗೆ ಬಡಿದಿದೆ. ಕುಟುಂಬ ಸದಸ್ಯರು ಅವರನ್ನು ಲೂಧಿಯಾನದ ಡಿಎಂಸಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಗುರುಪ್ರೀತ್ ಗೋಗಿ ಮಧ್ಯರಾತ್ರಿ 12 ಗಂಟೆ ಸುಮಾರಿಗೆ ಗನ್ ಸ್ವಚ್ಛಗೊಳಿಸುವ ವೇಳೆ ಅವರಿಗೆ ಆಕಸ್ಮಿಕವಾಗಿ ಒಂದು ಗುಂಡು ತಲೆಗೆ ತಗುಲಿ ಸಾವನ್ನಪ್ಪಿದ್ದಾರೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ.

ಗೋಗಿ 2022ರಲ್ಲಿ ಕಾಂಗ್ರೆಸ್ ತೊರೆದು ಎಎಪಿ ಸೇರಿದರು. ಲೂಧಿಯಾನ ಪಶ್ಚಿಮ ಕ್ಷೇತ್ರದಿಂದ ಹಿರಿಯ ಕಾಂಗ್ರೆಸ್ ನಾಯಕ ಮತ್ತು 2 ಬಾರಿ ಶಾಸಕರಾಗಿದ್ದ ಭರತ್ ಭೂಷಣ್ ಅಶು ಅವರನ್ನು ಸೋಲಿಸಿದ್ದರು. ನಿಜವಾಗಿಯೂ ಆಕಸ್ಮಿಕ ಗುಂಡು ಹಾರಿದೆಯೇ ಅಥವಾ ಏನಾದರೂ ತಪ್ಪಾಗಿದೆಯೇ? ಗೋಗಿಯ ಪರವಾನಗಿ ಪಡೆದ ಪಿಸ್ತೂಲ್ ಉತ್ತಮ ಸ್ಥಿತಿಯಲ್ಲಿತ್ತೇ. ಈ ಘಟನೆ ಪಿಸ್ತೂಲ್ ಸ್ವಚ್ಛಗೊಳಿಸುವಾಗ ನಡೆದಿದೆಯೇ ಅಥವಾ ಬೇರೆ ಏನಾದರೂ ಕಾರಣವಿದೆಯೇ ಎಂಬುದರ ಕುರಿತು ತನಿಖೆ ನಡೆಯಲಿದೆ.

ಮೊಬೈಲ್‌ಗಾಗಿ ಮಗ ಆತ್ಮಹತ್ಯೆ; ಮನನೊಂದು ಅಪ್ಪನೂ ನೇಣಿಗೆ ಶರಣು

ನಾಂದೇಡ್: 16 ವರ್ಷದ ಹತ್ತನೇ ತರಗತಿಯ ವಿದ್ಯಾರ್ಥಿಯೊಬ್ಬ ತನ್ನ ತಂದೆ ಮೊಬೈಲ್ ಕೊಡಿಸಲಿಲ್ಲ ಎಂದು ಆತ್ಮಹತ್ಯೆ ಮಾಡಿಕೊಂಡಿದ್ದು, ರೈತನಾಗಿರುವ ತಂದೆ ಮಗನ ಆಸೆ ಈಡೇರಿಸಲು ಸಾಧ್ಯವಾಗಲಿಲ್ಲ ಎಂಬ ನೋವಿನಿಂದ ಅದೇ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ.

ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಬಿಲೋಲಿ ತಹಸಿಲ್‌ನ ಮಿನಕಿಯಲ್ಲಿ ರೈತನೊಬ್ಬ ತನ್ನ ಮಗನಿಗೆ ಸ್ಮಾರ್ಟ್‌ಫೋನ್ ಖರೀದಿಸಲು ಸಾಧ್ಯವಾಗದ ಕಾರಣ ಮಗನೊಂದಿಗೆ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಗನ ಸ್ಮಾರ್ಟ್‌ಫೋನ್ ಆಸೆಯನ್ನು ಈಡೇರಿಸಲು ಸಾಧ್ಯವಾಗದೆ, ರೈತ ತನ್ನ ಮಗ ಆತ್ಮಹತ್ಯೆ ಮಾಡಿಕೊಂಡ ಅದೇ ಹಗ್ಗದಿಂದಲೇ ನೇಣು ಬಿಗಿದುಕೊಂಡು ಸಾವಿಗೆ ಶರಣಾಗಿದ್ದಾನೆ.

ತಂದೆ ಮೊಬೈಲ್ ಕೊಡಿಸಲಿಲ್ಲ ಎಂಬ ಕಾರಣಕ್ಕೆ ಗುರುವಾರ ಬೆಳಗ್ಗೆ ಹತ್ತನೇ ತರಗತಿಯ ವಿದ್ಯಾರ್ಥಿ ತೋಟದಲ್ಲಿ ಮರಕ್ಕೆ ನೇಣು ಬಿಗಿದುಕೊಂಡಿರುವುದನ್ನು ನೋಡಿದ ತಂದೆ, ಅದೇ ಮರಕ್ಕೆ ತಾನು ನೇಣು ಬಿಗಿದುಕೊಂಡಿದ್ದಾನೆ ಎಂದು ಸುದ್ದಿ ಮಾಧ್ಯಮ ವರದಿ ಮಾಡಿದೆ.

ಈ ಸಂಬಂಧ ನಾಂದೇಡ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲಿವ್‌ಇನ್ ರಿಲೇಶನ್‌ನಲ್ಲಿದ್ದ ಸಂಗಾತಿಯ ಕೊಂದು ದೇಹವನ್ನು ಫ್ರಿಜ್‌ನಲ್ಲಿಟ್ಟ ಕ್ರೂರಿ



ಭೋಪಾಲ್: ಲಿವ್‌ಇನ್ ರಿಲೇಶನ್‌ಶಿಪ್‌ನಲ್ಲಿದ್ದ ವಿವಾಹಿತ ವ್ಯಕ್ತಿಯೊಬ್ಬ ತನ್ನ ಸಂಗಾತಿಯನ್ನು ಕೊಂದು ಫ್ರಿಜ್‌ನಲ್ಲಿಟ್ಟ ಆಘಾತಕಾರಿ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ. ಭೋಪಾಲ್‌ನ ದೇವಾಸ್ ನಗರದಲ್ಲಿ ಇಂತಹುದೊಂದು ಕೃತ್ಯ ನಡೆದಿದ್ದು, ವಿವಾಹಿತ ವ್ಯಕ್ತಿಯೋರ್ವ ಲಿವ್‌ಇನ್ ಸಂಬಂಧದಲ್ಲಿದ್ದ ತನ್ನ ಗೆಳತಿಯನ್ನು ಕೊಲೆ ಮಾಡಿ ಆಕೆಯ ಮೃತದೇಹವನ್ನು 8 ತಿಂಗಳ ಕಾಲ ಫ್ರಿಡ್ಜ್‌ನಲ್ಲಿಟ್ಟಿದ್ದಾನೆ. ಸಂಜಯ್ ಪಾಟಿದಾರ್ ಕೊಲೆ ಆರೋಪಿ. ಆತನಿಂದ ಕೊಲೆಗೈಯ್ಯಲ್ಪಟ್ಟ ಮಹಿಳೆ ಪಿಂಕಿ ಪ್ರಜಾಪತಿ ಎಂದು ತಿಳಿದುಬಂದಿದೆ. ಸಂಜಯ್ ಪಾಟಿದಾರ್ ಬಾಡಿಗೆಗೆ ಪಡೆದಿದ್ದ ಮನೆಯ ಫ್ರಿಡ್ಜ್‌ನಲ್ಲಿ ಸೀರೆಯುಟ್ಟು, ಆಭರಣ ಧರಿಸಿದ್ದ ಮಹಿಳೆಯ ಕೊಳೆತ ಮೃತದೇಹ ಪತ್ತೆಯಾಗಿದೆ. ಪೊಲೀಸರು ಪರಿಶೀಲನೆ ನಡೆಸಿದ ವೇಳೆ ಮಹಿಳೆಯ ಕೈಗಳನ್ನು ಕುತ್ತಿಗೆಗೆ ಕಟ್ಟಿಹಾಕಿರುವ ಸ್ಥಿತಿಯಲ್ಲಿದೆ.ಉಜ್ಜಯಿನಿ ನಿವಾಸಿಯಾದ ಸಂಜಯ್ ಪಾಟಿದಾರ್ ತನಗೆ ಈಗಾಗಲೇ ಮದುವೆಯಾಗಿದ್ದರೂ ಕಳೆದ 5 ವರ್ಷಗಳಿಂದ ಪಿಂಕಿ ಜೊತೆ ಲಿವ್‌ಇನ್ ಸಂಬಂಧದಲ್ಲಿದ್ದ. ಆದರೆ ಇತ್ತೀಚೆಗೆ ಪಿಂಕಿ ತನ್ನನ್ನು ವಿವಾಹವಾಗುವಂತೆ ಸಂಜಯ್ ಪಾಟಿದಾರ್‌ಗೆ ಒತ್ತಾಯಿಸಿದ್ದಾಳೆ. ಇದರಿಂದಾಗಿ ಕೆರಳಿದ ಪಾಟಿದಾರ್ ಪಿಂಕಿಯನ್ನು ಮದುವೆಯಾಗಲು ಒಪ್ಪದೇ ತನ್ನ ಸ್ನೇಹಿತನ ಸಹಾಯದಿಂದ ಕೊಲೆ ಮಾಡಿದ್ದಾನೆ ಎಂದು ಹೇಳಲಾಗಿದೆ.

ಕಾಳ್ಗಿಚ್ಚಿನ ಬೂದಿಯಲ್ಲಿ ಮನೆಗಳ ಅವಶೇಷ ಹುಡುಕುತ್ತಿರುವ ಲಾಸ್ ಏಂಜಲೀಸ್ ಜನ

ಲಾಸ್ ಏಂಜಲೀಸ್: ಅಮೆರಿಕಾದ ಎರಡನೇ ಅತಿ ದೊಡ್ಡ ನಗರ ಲಾಸ್ ಏಂಜಲೀಸ್‌ನಲ್ಲಿ ಹರಡುತ್ತಿರುವ ಕಾಳ್ಗಿಚ್ಚಿಗೆ ತಮ್ಮ ಮನೆಗಳು ಆಹುತಿಯಾಗುತ್ತಿರುವುದನ್ನು ಕಂಡ ಅನೇಕರು ಆಘಾತಕ್ಕೆ ಒಳಗಾಗಿದ್ದಾರೆ. ಈ ದುರಂತದಲ್ಲಿ 13 ಮಿಲಿಯನ್ ಜನರು ಸ್ಥಳಾಂತರಗೊಂಡಿದ್ದು, ಇದೀಗ ಬೆಂಕಿಯಲ್ಲಿ ಸುಟ್ಟು ಕರಕಲಾದ ಮನೆಗಳನ್ನು ಕಂಡು ಮರುಗುತ್ತಿದ್ದು, ಹೊಸ ಬದುಕು ಕಟ್ಟಿಕೊಳ್ಳುವ ಸವಾಲನ್ನು ಎದುರಿಸುತ್ತಿದ್ದಾರೆ. ಕಳೆದ 8 ತಿಂಗಳಿಂದ ಮಳೆ ಕಾಣದ ಲಾಸ್ ಏಂಜಲೀಸ್‌ನಲ್ಲಿ ಶುಕ್ರವಾರ ಬೆಂಕಿ ಆರಿಸುವ ಪ್ರಕ್ರಿಯೆಗೆ ಗಾಳಿ ಶಾಂತವಾಗುವ ಮೂಲಕ ಕೊಂಚ ಸಹಾಯ ಮಾಡಿತ್ತು. ಪಾಲಿಸೇಡ್‌ನ ಪೂರ್ವ ಭಾಗದಲ್ಲಿ ಬೆಂಕಿ ಕೆನ್ನಾಲಿಗೆ ಹರಡಿದ್ದು ಶುಕ್ರವಾರ ಸಂಜೆ ಕೂಡ ಸ್ಥಳಾಂತರ ಕೆಲಸ ಮುಂದುವರೆದಿದೆ. ಅಲ್ಟಡೆನಾನಲ್ಲಿ ಬೆಂಕಿ ಕೆನ್ನಾಲಿಗೆ ಕಾಣಿಸಿಕೊಂಡು ತಮ್ಮ ಮನೆ ಕೂಡ ಆಹುತಿಯಾಗುವುದನ್ನು ಕಂಡ ಬ್ರಿಡ್ಜೆಟ್ ಬರ್ಗ್, ಎರಡು ದಿನದ ಬಳಿಕ ಕುಟುಂಬದೊಂದಿಗೆ ಮನೆಯಿದ್ದ ಸ್ಥಳಕ್ಕೆ ಮರಳಿದ್ದಾರೆ. ಇಲ್ಲಿ ಆಕೆ ತನ್ನ ಮನೆಯ ನೆನಪುಗಳನ್ನು ಮೆಲುಕು ಹಾಕಿದ್ದು, ಕಂಬನಿ ಮಿಡಿದಿದ್ದಾರೆ. ಎಲ್‌ಎಯಿಂದ 25 ಮೈಲಿವರೆಗೆ ಹರಡಿರುವ ಕಾಳ್ಗಿಚ್ಚಿನಿಂದ ಮನೆ, ಅಪಾರ್ಟ್‌ಮೆಂಟ್ ಕಟ್ಟಡ, ಉದ್ಯಮ ಸೇರಿದಂತೆ 12,000ಕ್ಕೂ ಹೆಚ್ಚು ಕಟ್ಟಡಗಳು, ಹಲವು ಕಾರುಗಳು ಸುಟ್ಟು ಕರಕಲಾಗಿವೆ.

ಮೈಸೂರು ಕೊಡವ ಸಮಾಜದಲ್ಲಿ ಕೊಡವ ಚಲನಚಿತ್ರ 'ಕಾಲತ್‌ರ ಕಳಿ' ಪ್ರದರ್ಶನ



ಮಡಿಕೇರಿ,ಜ.11– ಸಮಾಜದಲ್ಲಿ ನಡೆಯುತ್ತಿರುವ ಮಾದಕ ವಸ್ತು ಚಟುವಟಿಕೆ ಹಾಗೂ ಇನ್ನಿತರ ಮಾರಕ ಅಂಶಗಳ ಬಗ್ಗೆ ಬೆಳಕು ಚೆಲ್ಲುವ 'ಕಾಲತ್‌ರ ಕಳಿ' ಕೊಡವ ಚಲನ ಚಿತ್ರ ಮೈಸೂರು ಕೊಡವ ಸಮಾಜದಲ್ಲಿ ಶನಿವಾರದಿಂದ ಪ್ರದರ್ಶನಗೊಳ್ಳುತ್ತಿದೆ.

ಜ.11, 12 ಮತ್ತು 13ರಂದು 3 ದಿನಗಳ ಕಾಲ ಪ್ರದರ್ಶನ ಆಯೋಜಿಸಲಾಗಿದೆ. ಈ ಚಿತ್ರದಲ್ಲಿ ಯುವಕ, ಯುವತಿಯರಿಗೆ ಉತ್ತಮ ಸಂದೇಶವನ್ನು ನೀಡಿ ಸಾಮಾಜಿಕ ಜಾಗೃತಿ ಮೂಡಿಸಲಾಗಿದ್ದು, ಕೊಡವ ಸಿನಿಮಾ ಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಸಿನಿಮಾ ವೀಕ್ಷಿಸಿ ಕೊಡವ ಚಲನಚಿತ್ರಗಳಿಗೆ ಬೆಂಬಲ ಸೂಚಿಸಬೇಕೆಂದು ಸಿನಿಮಾ ನಿರ್ದೇಶಕರು ಮನವಿ ಮಾಡಿದ್ದಾರೆ.

ಪ್ರದರ್ಶನ ಸಮಯ: ಮೈಸೂರು ಕೊಡವ ಸಮಾಜದಲ್ಲಿ ಬೆಳಗ್ಗೆ 10.30 ಗಂಟೆಗೆ ಮೊದಲ ಪ್ರರ್ದಶನ, ಮಧ್ಯಾಹ್ನ 2 ಗಂಟೆಗೆ ಎರಡನೇ ಪ್ರದರ್ಶನ ಹಾಗೂ ಸಂಜೆ 6.30 ಗಂಟೆಗೆ 3ನೇ ಪ್ರದರ್ಶನ ಇರಲಿದೆ. ಟಿಕೆಟ್ ಖರೀದಿಗೆ ಸ್ಥಳದಲ್ಲೇ ಅವಕಾಶ ಕಲ್ಪಿಸಲಾಗಿದೆ. ಟಿಕೆಟ್ ಬುಕಿಂಗ್ ಹಾಗೂ ಮಾಹಿತಿಗಾಗಿ ಮೊ.ಸಂ. 6360189482, 9880600240 ಅಥವಾ ಮೈಸೂರು ಕೊಡವ ಸಮಾಜ ಕಚೇರಿ ದೂರವಾಣಿ ಸಂಖ್ಯೆ 9353380260 ಅನ್ನು ಸಂಪರ್ಕಿಸಬಹುದು.

ಸಿನಿಮಾ ಪಾತ್ರಧಾರಿಗಳು: ಬಾಳೆಯಡ ಪ್ರತೀಶ್ ಪೂವಯ್ಯ ಹಾಗೂ ಆಚೆಯಡ ಗಗನ್ ಗಣಪತಿ ಚಿತ್ರವನ್ನು ನಿರ್ದೇಶಿಸಿದ್ದು, ಸೋಮೆಯಂಡ ಬೋಸ್ ಬೆಳ್ಯಪ್ಪ ಹಾಗೂ ಸಾರ್ವಜನಿಕರ ನೆರವಿನಿಂದ ಈ ಚಿತ್ರವನ್ನು ನಿರ್ಮಿಸಲಾಗಿದೆ. ಚಿತ್ರದ ಮುಖ್ಯ ಪಾತ್ರದಲ್ಲಿ ಮಾಚೆಟ್ಟಿರ ವಿಕಾಸ್ ಬೋಪಣ್ಣ, ಕೋಪುಡ ದೇಸ್ನ ದೇಚಮ್ಮ ನಟಿಸಿದ್ದು, ವಿಶೇಷ ಪಾತ್ರದಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ 100ಕ್ಕೂ ಹೆಚ್ಚು ಮಂದಿ ಅಭಿನಯಿಸಿದ್ದು, ಕೊಡಗಿನ ವಿವಿಧೆಡೆ ಚಿತ್ರೀಕರಿಸಲಾಗಿದೆ. ಮುಕ್ಕಾಟಿರ ಮೌನಿ ನಾಣಯ್ಯ ಹಾಗೂ ಕೋಟೆರ ವಿನು ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಚೆಟ್ಟೀರ ಗ್ರಂಥ, ಕಬ್ಬಚೀರ ರಶ್ಮಿ, ಕೋಟೆರ ವಿನು ಹಾಗೂ ಟಿ.ಡಿ.ಮೋಹನ್ ಹಾಡಿದ್ದಾರೆ.

ಸಚಿವ ಸತೀಶ್ ಜಾರಕಿಹೊಳಿಗೆ ಮನವಿ



ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ವಿರಾಜಪೇಟೆಯಲ್ಲಿ ಪುರಸಭೆ ಸದಸ್ಯ ರಾಜೇಶ್ ಪದ್ಮನಾಭ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಉಪಾಧ್ಯಕ್ಷೆ ಫಸೀಹ ತಬಸುಂ, ಮಹಮ್ಮದ್ ರಫಿ, ಎಸ್.ಹೆಚ್.ಮತೀನ್ ಹಾಗೂ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಮುದ್ದಂಡ ಕಪ್ ಹಾಕಿ ನಮ್ಮೆ 2025 ಲೋಗೋ ಬಿಡುಗಡೆ

ಹಾಕಿ ಕೊಡವರ ಅನನ್ಯ ಸಂಸ್ಕೃತಿ, ಪರಂಪರೆಯ ಭಾಗ : ಸಂಸದ ಯದುವೀರ್

ಮಡಿಕೇರಿ,ಜ.11– ಕೌಟುಂಬಿಕ ಕೊಡವ ಹಾಕಿ ಉತ್ಸವ 25 ವರ್ಷಗಳನ್ನು ಪೂರೈಸುತ್ತಿದ್ದು, ಬೆಳ್ಳಿ ಹಬ್ಬ ಸಂಭ್ರಮದ 'ಮುದ್ದಂಡ ಕಪ್ ಹಾಕಿ ನಮ್ಮೆ 2025' ಅನ್ನು ಅತ್ಯಂತ ವಿಶೇಷವಾಗಿ ಆಚರಿಸುವುದಕ್ಕೆ ಪೂರ್ವಭಾವಿಯಾಗಿ ಶನಿವಾರ ಉತ್ಸವದ ಅಧಿಕೃತ ಲೋಗೋವನ್ನು ವಿಧ್ಯುಕ್ತವಾಗಿ ಅನಾವರಣಗೊಳಿಸಲಾಯಿತು.

ಮುದ್ದಂಡ ಕಪ್ ಹಾಕಿ ಉತ್ಸವದ ಆಯೋಜಕ ಮುದ್ದಂಡ ಕುಟುಂಬಸ್ಥರಿಂದ ನಗರದ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒಳಗೊಂಡಂತೆ ಅತಿಥಿ ಗಣ್ಯರು ಕೊಡವ ಕೌಟುಂಬಿಕ ಹಾಕಿ ನಮ್ಮೆ ಲೋಗೋವನ್ನು ಅನಾವರಣಗೊಳಿಸಿದರು.

ಶ್ರೇಷ್ಠ ಭಾರತ ನಿರ್ಮಾಣವಾಗಲಿ: ಸಮಾರಂಭವನ್ನು ಜ್ಯೋತಿ ಬೆಳಗಿ ಉದ್ಘಾಟಿಸಿ ಮಾತನಾಡಿದ ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್, ಕೊಡಗಿನ ಜನರ ಧಮನಿಗಳಲ್ಲಿ ಹಾಸು ಹೊಕ್ಕಾಗಿರುವ 'ಹಾಕಿ' ಕ್ರೀಡೆ, ಇಲ್ಲಿನ ಅನನ್ಯ ಸಂಸ್ಕೃತಿ, ಪರಂಪರೆಯ ಭಾಗವಾಗಿದೆ. ಇಂತಹ ಹಾಕಿ ಉತ್ಸವಕ್ಕೆ ಅಗತ್ಯ ಪ್ರೋತ್ಸಾಹ ಮತ್ತು ಬೆಂಬಲವನ್ನು ನೀಡುವ ಮೂಲಕ ಇಲ್ಲಿನ ಸಂಸ್ಕೃತಿ, ಪರಂಪರೆಗಳನ್ನು ಸಂರಕ್ಷಿಸಬೇಕು. ಅದರ ಜೊತೆಯಲ್ಲೆ ಶ್ರೇಷ್ಠ ಭಾರತದ ನಿರ್ಮಾಣ ಆಗಬೇಕಾಗಿದೆ ಎಂದು ಹೇಳಿದರು. ಕೊಡಗು ತನ್ನ ಪ್ರಕೃತಿ ಸೌಂದರ್ಯ, ಸಂಸ್ಕೃತಿ ಪರಂಪರೆಗಳಿಂದ ಪ್ರಸಿದ್ಧವಾಗಿದೆ. ತಾನು ಕೊಡಗನ್ನು ಒಳಗೊಂಡಂತೆ ಇಂತಹ ಶ್ರೇಷ್ಠ ಪರಂಪರೆಗಳನ್ನು ಒಳಗೊಂಡ ಮೈಸೂರು ಕ್ಷೇತ್ರದ ಸಂಸದನಾಗಿರುವ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು. ಕೊಡಗಿನ ಪರಂಪರೆಯ ಭಾಗವಾದ ಹಾಕಿಗೆ ಅಗತ್ಯ ಬೆಂಬಲ ಸಹಕಾರವನ್ನು ನೀಡುವುದಾಗಿ ಇದೇ ಸಂದರ್ಭ ಘೋಷಿಸಿದರು.

ಕೊಡಗಿನಲ್ಲಿ ಹಾಕಿ ತರಬೇತಿ ಕೇಂದ್ರ: ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾತನಾಡಿ, ಕಳೆದ ಸಾಲಿನ ಕುಂಡ್ಯೋಳಂಡ ಕಪ್ ಹಾಕಿ ಉತ್ಸವದಲ್ಲಿ ಅತೀ ಹೆಚ್ಚಿನ ಕುಟುಂಬಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡ ಹಿನ್ನೆಲೆ ಗಿನ್ನಿಸ್ ಬುಕ್ ದಾಖಲೆಗೆ ಸೇರ್ಪಡೆಗೊಂಡಿದೆ. ಅತ್ಯಂತ ಸಣ್ಣ ಸಮುದಾಯವಾದ ಕೊಡವ ಸಮೂಹ ತನ್ನ ಸಂಸ್ಕೃತಿಯೊಂದಿಗೆ ಹಾಕಿ ಕ್ರೀಡೆಯ ಮೂಲಕ ತನ್ನನ್ನು, ರಾಷ್ಟ್ರಕ್ಕೆ ಮತ್ತು ವಿಶ್ವಕ್ಕೆ ಪರಿಚಯಿಸಿಕೊಂಡಿದೆ. ಈ ಹಿನ್ನೆಲೆ ರಾಜ್ಯಸಭಾ ಸದಸ್ಯ ಅಜಯ್ ಮಾಕನ್ ಅವರು, ಅಧಿವೇಶನದಲ್ಲಿ ಕೊಡವ ಕೌಟುಂಬಿಕ ಹಾಕಿಯನ್ನು ಪ್ರಸ್ತಾಪಿಸಿ, ಭೌಗೋಳಿಕವಾಗಿ ಸಮುದ್ರ ಮಟ್ಟದಿಂದ ಎತ್ತರಲ್ಲಿರುವ ಕೊಡಗಿನಲ್ಲಿ 'ಹಾಕಿ ತರಬೇತಿ ಕೇಂದ್ರ' ವಿಚಾರ ಪ್ರಸ್ತಾಪಿಸಿದ್ದಾರೆ. ಈ ಹಿನ್ನೆಲೆ ಕೇಂದ್ರ ಸ್ಥಾಪನೆಗೆ ಅಮ್ಮತ್ತಿ ವಿಭಾಗದಲ್ಲಿ ಪರಿಶೀಲನೆ ನಡೆಸಲಾಗಿರುವ ಕುರಿತು ಮಾಹಿತಿ ನೀಡಿದರು.

ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಮುದ್ದಂಡ ಕಪ್ ಹಾಕಿ ಉತ್ಸವನ್ನು ಎಲ್ಲರೂ ಸೇರಿ ಯಶಸ್ವಿಗೊಳಿಸೋಣ. ಉತ್ಸವಕ್ಕೆ ಅಗತ್ಯವಾದ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ಹೆಚ್ಚಿನ ಅನುದಾನ ಒದಗಿಸಲಿ: ವಿಧಾನ ಸಭೆಯ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಮಾತನಾಡಿ, 1997ರಲ್ಲಿ ಪಾಂಡಂಡ ಕುಟ್ಟಪ್ಪ ಅವರಿಂದ ಕರಡದಲ್ಲಿ ಆರಂಭಗೊಂಡ ಹಾಕಿ ಉತ್ಸವಕ್ಕೆ 2008ರಲ್ಲಿ ಮೊಟ್ಟ ಮೊದಲ ಬಾರಿಗೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭ 5 ಲಕ್ಷ ಅನುದಾನವನ್ನು ನೀಡಲಾಯಿತು. ಬಳಿಕ ಅಪ್ಪಚೆಟ್ಟೋಳಂಡ ಕುಟುಂಬಕ್ಕೆ 1 ಕೋಟಿ ಅನುದಾನವನ್ನು ಸರ್ಕಾರ ಒದಗಿಸಿದೆ. ಈ ಬಾರಿ ಹಾಕಿ ಉತ್ಸವದ ಬೆಳ್ಳಿ ಮಹೋತ್ಸವ ಆಗಿರುವುದರಿಂದ 1.50 ಕೋಟಿಯಿಂದ 2 ಕೋಟಿ ರೂ. ಅನುದಾನ ಒದಗಿಸಲು ರಾಜ್ಯ ಸರ್ಕಾರ ಮುಂದಾಗಬೇಕು. ಶಾಸಕರು ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದು ಹೇಳಿದರು.

ಮುದ್ದಂಡ ಕುಟುಂಬದ ಪಟ್ಟೆದಾರರಾದ ಮುದ್ದಂಡ ಡಾಲಿ ತಿಮ್ಮಯ್ಯ, ಮುದ್ದಂಡ ಕಪ್ ಹಾಕಿ ಉತ್ಸವ ಆಯೋಜನಾ ಸಮಿತಿ ಗೌರವಾಧ್ಯಕ್ಷ ಮುದ್ದಂಡ ಬಿ.ದೇವಯ್ಯ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ಸದಸ್ಯರಾದ ಚೇನಂಡ ಸುರೇಶ್, ಮುದ್ದಂಡ ಕುಟುಂಬದ ಹಿರಿಯರಾದ ಮುದ್ದಂಡ ಪೊನ್ನಪ್ಪ, ಮುದ್ದಂಡ ನಾಣಯ್ಯ ಹಲವು ಗಣ್ಯರು ಪಾಲ್ಗೊಂಡಿದ್ದರು.

ಸಾಂಪ್ರದಾಯಿಕ ಫ್ಯಾಷನ್ ಶೋ: ಮುದ್ದಂಡ ಉತ್ಸವದ ಕಾರ್ಯದರ್ಶಿ ಮುದ್ದಂಡ ಆದ್ಯ ತಮ್ಮಯ್ಯ ಮಾತನಾಡಿ, ಉತ್ಸವದ ಸೆಮಿ ಫೈನಲ್ ಮತ್ತು ಅಂತಿಮ ಪಂದ್ಯದ ಸಂದರ್ಭ ರಾಷ್ಟ್ರ ಮಟ್ಟದ ರೂಪದರ್ಶಿಗಳ ಸಹಕಾರದೊಂದಿಗೆ ರಾಷ್ಟ್ರದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಾಂಪ್ರದಾಯಿಕ ಫ್ಯಾಷನ್ ಶೋ ಆಯೋಜಿಸಲಾಗುತ್ತದೆ. ಇದರೊಂದಿಗೆ ಪ್ರೇಕ್ಷಕರಿಗೆ ಮನರಂಜನೆ ಒದಗಿಸಲು ನಾಡಿನ ಹೆಸರಾಂತ ಗಾಯಕರಿಂದ ಗಾನ ಸುಧೆ ಕಾರ್ಯಕ್ರಮವನ್ನೂ ಆಯೋಜಿಸಲಾಗುತ್ತದೆ ಎಂದು ತಿಳಿಸಿದರು.



ಮುದ್ದಂಡ ಕಪ್ ಹಾಕಿ ನಮ್ಮೆ ಲೋಗೋ



ಮುದ್ದಂಡ ಕಪ್ ಹಾಕಿ ಉತ್ಸವದ ಆಯೋಜಕ ಮುದ್ದಂಡ ಕುಟುಂಬಸ್ಥರಿಂದ ಮಡಿಕೇರಿ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಲೋಗೋ ಬಿಡುಗಡೆ ಸಮಾರಂಭವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಹಾಕಿ ಪಂದ್ಯ ಸ್ಮರಣೀಯವಾಗಿಸಲು ಸಿದ್ಧತೆ

ಬೆಳ್ಳಿ ಮಹೋತ್ಸವದ ಮುದ್ದಂಡ ಕಪ್ ಹಾಕಿ ನಮ್ಮೆಯನ್ನು ಸ್ಮರಣೀಯವಾಗಿಸಲು ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಮುದ್ದಂಡ ಹಾಕಿ ಉತ್ಸವದ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ ತಿಳಿಸಿದರು.

ಹಾಕಿ ಉತ್ಸವದ ಲೋಗೋ ಬಿಡುಗಡೆ ಸಮಾರಂಭದಲ್ಲಿ ಮಾಹಿತಿ ನೀಡಿ, ಒಲಂಪಿಕ್ಸ್ ಟಾರ್ಚ್ ಮಾದರಿಯಲ್ಲಿ ಪಾಂಡಂಡ ಕುಟ್ಟಪ್ಪ ಅವರು ಹಾಕಿ ಉತ್ಸವ ಆರಂಭಿಸಿದ ಕರಡದಿಂದ, ಇಲ್ಲಿಯವರೆಗೆ ಹಾಕಿ ಉತ್ಸವ ಆಯೋಜಿಸಿದ ಕೊಡವ ಕುಟುಂಬಗಳ ಐನ್‌ಮನೆಗಳಿಗೆ ಕ್ರೀಡಾ ಜ್ಯೋತಿಯನ್ನು ಮೆರಥಾನ್ ಮೂಲಕ ಕೊಂಡೊಯ್ದು, ಉತ್ಸವದ ಆರಂಭದಂದು ಮಡಿಕೇರಿಯ ಕ್ರೀಡಾಂಗಣಕ್ಕೆ ತರುವ ಯೋಜನೆ ರೂಪಿಸಲಾಗಿದೆ ಎಂದರು.

ಮಾರ್ಚ್ 28ರಂದು ಏಪ್ರಿಲ್ 27ರವರೆಗೆ ನಡೆಯುವ ಹಾಕಿ ಉತ್ಸವದ ಸಂದರ್ಭ ಶೂಟಿಂಗ್ ಸ್ಪರ್ಧೆ, ಮಹಿಳಾ ಹಾಕಿ ಪಂದ್ಯಾವಳಿ, ಟೂರ್ ಆಫ್ ನೀಲಗಿರೀಸ್ ಸಂಸ್ಥೆ ಸಹಕಾರದೊಂದಿಗೆ ಗೋಣಿಕೊಪ್ಪಲಿನಿಂದ ಮಡಿಕೇರಿಯವರೆಗೆ ಸೈಕ್ಲಥಾನ್ ಆಯೋಜಿಸಲಾಗುತ್ತಿದೆ ಎಂದರು. ಸರ್ಕಾರೇತರ ಸಂಸ್ಥೆಯೊಂದರ ಸಹಕಾರದೊಂದಿಗೆ ಉತ್ಸವದ ಹಂತದಲ್ಲಿ ಮೈದಾನದ ಆವರಣದಲ್ಲಿ ಸಂಗ್ರಹವಾಗುವ ಯಾವುದೇ ತ್ಯಾಜ್ಯವನ್ನು ಸಂಗ್ರಹಿಸುವ ಮೂಲಕ ಶೂನ್ಯ ತ್ಯಾಜ್ಯ ಪರಿಕಲ್ಪನೆಯನ್ನು ಸಾಕಾರಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಏಪ್ರಿಲ್‌ನಲ್ಲಿ ಮಡಿಕೇರಿ ಜಿಲ್ಲಾಡಳಿತ ಭವನದ ತಡೆಗೋಡೆ ದುರಸ್ತಿ ಪೂರ್ಣ

ಮಡಿಕೇರಿ,ಜ.11– ಜಿಲ್ಲಾ ಕೇಂದ್ರ ಮಡಿಕೇರಿಯ ಜಿಲ್ಲಾಡಳಿತ ಭವನದ ಕುಸಿದ ತಡೆಗೋಡೆಯ ದುರಸ್ತಿ ಕಾರ್ಯವನ್ನು ಪ್ರಸಕ್ತ ಸಾಲಿನ ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುತ್ತದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಿಂದ ಮಂಗಳೂರು ಕಡೆಗೆ ತೆರಳುವ ರಸ್ತೆಯ ಬಲ ಭಾಗದಲ್ಲಿ ಕೆಲ ವರ್ಷಗಳ ಹಿಂದೆ, ಜಿಲ್ಲಾಡಳಿತ ಭವನದ ಸುರಕ್ಷತೆಗಾಗಿ ಭಾರಿ ತಡೆಗೋಡೆಯನ್ನು ನಿರ್ಮಿಸಲಾಗಿತ್ತು. ಇದು ನಂತರದ ವರ್ಷದ ಭಾರಿ ಮಳೆಯ ಸಂದರ್ಭ ಕುಸಿತಕ್ಕೆ ಒಳಗಾಗುವ ಅಪಾಯವನ್ನು ಎದುರಿಸಿದ ಹಿನ್ನೆಲೆ, ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತಾದರು ಕಾಮಗಾರಿ ಪೂರ್ಣಗೊಂಡಿಲ್ಲ.

ಈ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ, ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ, ಲೋಕೋಪಯೋಗಿ ಇಲಾಖಾ ಇಂಜಿನಿಯರ್‌ಗಳೊಂದಿಗೆ ತಡೆಗೋಡೆಯ ವಿನ್ಯಾಸ, ಕಾಂಕ್ರಿಟ್ ಸ್ಲ್ಯಾಬ್‌ಗಳ ಮರು ಜೋಡಣೆಯ ದುರಸ್ತಿ ಕಾರ್ಯಗಳನ್ನು ಮತ್ತು ಪ್ರಸ್ತುತ ಪರಿಸ್ಥಿತಿಗಳನ್ನು ಪರಿಶೀಲಿಸಿದರು.

ಈ ಸಂದರ್ಭ ಸಂಬಂಧಪಟ್ಟ ಇಂಜಿನಿಯರ್‌ಗಳು ಸಚಿವರಿಗೆ ಮಾಹಿತಿ ನೀಡಿ, ತಡೆಗೋಡೆಯನ್ನು ಎರಡು ಹಂತಗಳಲ್ಲಿ ಮೆಟ್ಟಿಲಿನ ಮಾದರಿಯಲ್ಲಿ ದುರಸ್ತಿಪಡಿಸಲಾಗುತ್ತದೆ. ಈ ಹಿಂದಿನ ತಡೆಗೋಡೆಯ ಅರ್ಧಭಾಗವನ್ನು ಅದು ಇರುವ ಯಥಾಸ್ಥಿತಿಯಲ್ಲಿ ಗಟ್ಟಿಗೊಳಿಸಿ, ಅದರ ಮೇಲೆ ಕಾಂಕ್ರೀಟ್ ಹಾಕಲಾಗುತ್ತದೆ. ಬಳಿಕ ಮತ್ತೊಂದು ಹಂತವನ್ನು 45 ಡಿಗ್ರಿ ಕೋನದಲ್ಲಿ ತಡೆಗೋಡೆಯನ್ನು ನಿರ್ಮಿಸಿ ಬಲಪಡಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭ ಮಾತನಾಡಿದ ಶಾಸಕ ಡಾ.ಮಂತರ್ ಗೌಡ, ಈ ತಂತ್ರಜ್ಞಾನದ ಬದಲಿಗೆ ಕಾಂಕ್ರಿಟ್ ತಡೆಗೋಡೆಯನ್ನೇ ನಿರ್ಮಿಸಬಹುದಿತ್ತು ಎಂದರು.



ತಡೆಗೋಡೆ ದುರಸ್ತಿ ಕಾರ್ಯವನ್ನು ಪರಿಶೀಲಿಸುತ್ತಿರುವ ಸಚಿವ ಸತೀಶ್ ಜಾರಕಿಹೊಳಿ.

ಮೈಕ್ರೋ ಫೈನಾನ್ಸ್ ಕಿರುಕುಳ ಹಿನ್ನೆಲೆ: ಗ್ರಾಮಗಳಿಗೆ ತಹಸೀಲ್ದಾರ್ ನೇತೃತ್ವದ ಅಧಿಕಾರಿಗಳ ತಂಡ ಭೇಟಿ

ಕಿರುಕುಳ ನೀಡಿದರೆ ಜಿಲ್ಲಾಡಳಿತ, ಪೊಲೀಸ್‌ಗೆ ದೂರು ನೀಡುವಂತೆ ಸೂಚನೆ

ಮೈಕ್ರೋ ಫೈನಾನ್ಸ್ ಸಂಬಂಧ ಜಾಗೃತಿಗಾಗಿ ಸಂಕ್ರಾಂತಿ ನಂತರ ಗ್ರಾಮಸಭೆ

ಚಾಮರಾಜನಗರ, ಜ.11–ತಾಲೂಕಿನ ಹೆಗ್ಗವಾಡಿಪುರ ಮತ್ತು ದೇಶವಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಹಲವು ಕುಟುಂಬಗಳು ಊರು ತೊರೆದಿವೆ ಎನ್ನಲಾದ ಹಾಗೂ ಹೆಗ್ಗವಾಡಿಪುರ ಗ್ರಾಮದ ಮೋಹನ್ ಎಂಬ ವಿದ್ಯಾರ್ಥಿಯು ಮೈಕ್ರೋ ಫೈನಾನ್ಸ್ ಕಿರುಕುಳ ಕುರಿತು ನೋವು ತೋಡಿಕೊಂಡಿರುವ ಬಗ್ಗೆ ದೃಶ್ಯ ಮಾಧ್ಯಮದಲ್ಲಿ ಪ್ರಸಾರವಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ನಿರ್ದೇಶನದ ಮೇರೆಗೆ ತಹಸೀಲ್ದಾರ್ ಗಿರಿಜಾ ಅವರ ನೇತೃತ್ವದ ಅಧಿಕಾರಿಗಳ ತಂಡ ಗ್ರಾಮಗಳಿಗೆ ಇಂದು ಭೇಟಿ ನೀಡಿ ವಿವರ ಪಡೆಯಿತು. ಅಲ್ಲದೆ ಗ್ರಾಮಸ್ಥರಿಗೆ ಧೈರ್ಯ ತುಂಬಿತು.

ತಹಸೀಲ್ದಾರ್ ಗಿರಿಜ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್, ಶಿರಸ್ತೇದಾರ್ ವಿನು, ರಾಜಸ್ವ ನಿರೀಕ್ಷಕ ಸತೀಶ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಮತ ಮತ್ತು ಗ್ರಾಮ ಆಡಳಿತ ಅಧಿಕಾರಿ ದಿಲೀಪ್, ಲೀಡ್ ಬ್ಯಾಂಕ್ ಪ್ರತಿನಿಧಿ ಮಧುಸೂಧನ್ ಅವರನ್ನೊಳಗೊಂಡ ಅಧಿಕಾರಿಗಳ ತಂಡ ದೇಶವಳ್ಳಿ, ಹೆಗ್ಗವಾಡಿಪುರ ಗ್ರಾಮಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿತು.



ತಹಸೀಲ್ದಾರ್ ಗಿರಿಜಾ ಅವರ ನೇತೃತ್ವದ ಅಧಿಕಾರಿಗಳ ತಂಡ ಗ್ರಾಮಗಳಿಗೆ ಶನಿವಾರ ಭೇಟಿ ನೀಡಿ ವಿವರ ಪಡೆದು ಗ್ರಾಮಸ್ಥರಿಗೆ ಧೈರ್ಯ ತುಂಬಿತು.

ಹೆಗ್ಗವಾಡಿಪುರ ಗ್ರಾಮದ ವಿದ್ಯಾರ್ಥಿ ಮೋಹನ್ ಮನೆಗೆ ತೆರಳಿ ಆತನ ತಾಯಿ ದಿವ್ಯಮಣಿ ಬಳಿ ಮೈಕ್ರೋ ಫೈನಾನ್ಸ್‌ಗಳಲ್ಲಿ ಅವರು ಪಡೆದಿರುವ ಸಾಲದ ಬಗ್ಗೆ ವಿವರ ಪಡೆದುಕೊಂಡರು. ಸಾಲ ನೀಡಿರುವ ಬ್ಯಾಂಕುಗಳು, ಫೈನಾನ್ಸ್ ಸಂಸ್ಥೆಗಳ ಪ್ರತಿನಿಧಿಗಳು ಪ್ರತಿದಿನ ಮನೆ ಬಳಿ ಬಂದು ಸಾಲ ಕಟ್ಟುವಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿ ನಮಗೆ ಕಿರುಕುಳ ನೀಡಿದ್ದಾರೆ. ಇದರಿಂದ ನಮ್ಮ ಮಗನ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆ ಎಂದು ದಿವ್ಯಮಣಿ ಅವರು ಅಧಿಕಾರಿಗಳ ತಂಡದ ಬಳಿ ಅಳಲು ತೋಡಿಕೊಂಡರು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ಧ ಅಗತ್ಯ ಕೈಗೊಳ್ಳುವುದಾಗಿ ತಹಸೀಲ್ದಾರ್ ಗಿರಿಜಾ ಅವರು ಹೇಳಿದರು. ಯಾವುದೇ ಮೈಕ್ರೋ ಫೈನಾನ್ಸ್ ಪ್ರತಿನಿಧಿ ಇನ್ನು ಮುಂದೆ ಕಿರುಕುಳ ನೀಡಿದಲ್ಲಿ ಜಿಲ್ಲಾಡಳಿತ, ಪೊಲೀಸ್ ಅಥವಾ ಸ್ಥಳೀಯ ಅಧಿಕಾರಿಗಳಿಗೆ ದೂರು ಸಲ್ಲಿಸುವಂತೆ ಅವರು ತಿಳಿಸಿದರು. ಪರಿಶೀಲನೆ ವೇಳೆ ದೇಶವಳ್ಳಿ ಗ್ರಾಮದ ಶೋಭಾ, ಸುಮಾ ಹಾಗೂ ಶಾರದಾ ಮತ್ತು ಹೆಗ್ಗವಾಡಿಪುರ ಗ್ರಾಮದ ನಾಗಮ್ಮ, ಪುಟ್ಟತಾಯಮ್ಮ ಎಂಬುವರು ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಹೆದರಿ ಊರು ಬಿಟ್ಟಿದ್ದಾರೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ ಎಂದು ತಹಸೀಲ್ದಾರ್ ಗಿರಿಜಾ ಅವರು ತಿಳಿಸಿದ್ದಾರೆ.

ಸದರಿ ಗ್ರಾಮಗಳ ಗ್ರಾಮಸ್ಥರಿಗೆ ಮೈಕ್ರೋ ಫೈನಾನ್ಸ್ ಸಂಬಂಧ ಜಾಗೃತಿ ನೀಡಲು ಸಂಕ್ರಾಂತಿ ಹಬ್ಬದ ಬಳಿಕ ಒಂದು ದಿನ ಗ್ರಾಮಸಭೆ ನಡೆಸಲು ಗ್ರಾಮಸ್ಥರು ಒಪ್ಪಿಗೆ ನೀಡಿದ್ದಾರೆ. ಮೈಕ್ರೋ ಫೈನಾನ್ಸ್‌ಗಳ ಕಿರುಕುಳಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿ ಭಯಪಡಬಾರದು. ಯಾರಾದರೂ ಕಿರುಕುಳ ನೀಡಿದಲ್ಲಿ ಜಿಲ್ಲಾಡಳಿತ, ಪೊಲೀಸ್ ಅಥವಾ ಸ್ಥಳೀಯ ಅಧಿಕಾರಿಗಳಿಗೆ ಕೂಡಲೇ ದೂರು ನೀಡಿ ಎಂದು ಗ್ರಾಮಸ್ಥರಿಗೆ ತಹಸೀಲ್ದಾರ್ ಗಿರಿಜಾ ತಿಳಿಸಿ, ಧೈರ್ಯ ತುಂಬಿದರು.

ಅಧಿಕಾರಿಗಳ ಭೇಟಿಯ ವೇಳೆ ರೈತ ಮುಖಂಡರಾದ ಮಹೇಶ್ ಕುಮಾರ್, ಹೆಬ್ಬಸೂರು ಬಸವಣ್ಣ, ಭಾಸ್ಕರ್, ಗ್ರಾಮ ಪಂಚಾಯತ್ ಸದಸ್ಯರಾದ ಪಿ.ರಾಜು, ಶಿವಕುಮಾರ್, ಮನು, ರಾಜು ಅವರು ಹಾಜರಿದ್ದು ವಿವರ ನೀಡಿದರು.

ಬಿಳಿಗಿರಿರಂಗನಬೆಟ್ಟದಲ್ಲಿ ನನ್ನ ಗುರುತು ಅಭಿಯಾನ

ಎಸ್‌ಸಿ, ಎಸ್‌ಟಿ ಜನರಿಗೆ 13 ಸೇವೆಗಳನ್ನು ಒದಗಿಸುವ ವಿಶಿಷ್ಟ ಯೋಜನೆ ಜಾರಿ

ಯಳಂದೂರು, ಜ.11– ತಾಲೂಕಿನ ಬಿಳಿಗಿರಿರಂಗನಬೆಟ್ಟದ ಯರಕನಗದ್ದೆ ಕಾಲೋನಿಯ ಸಮುದಾಯ ಭವನದಲ್ಲಿ ರಾಜ್ಯ ಸರ್ಕಾರದ ವಿಶಿಷ್ಟ ಅಭಿಯಾನವಾಗಿರುವ ನನ್ನ ಗುರುತು ಅಭಿಯಾನದ ಮೊದಲ ಹಂತದ ದಾಖಲೆಗಳನ್ನು ನೀಡುವ ಪ್ರತಿಕ್ರಿಯೆಗೆ ಜಿಪಂ ಉಪಕಾರ್ಯದರ್ಶಿ ಲಕ್ಷ್ಮೀ ಅವರು ಶುಕ್ರವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಎರಡು ಕಡೆ ಮಾತ್ರ ಪ್ರಾಯೋಗಿಕವಾಗಿ ಈ ಯೋಜನೆಗೆ ಚಾಲನೆ ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ವರ್ಗದ ಜನರಿಗೆ ಸರ್ಕಾರದ 13 ಸೇವೆಗಳನ್ನು ಅವರಿದ್ದಲ್ಲಿಗೇ ಕೊಂಡೊಯ್ಯುವ ವಿಶಿಷ್ಟ ಯೋಜನೆ ಇದಾಗಿದೆ. ಒಟ್ಟು 8 ಇಲಾಖೆಗಳ ವ್ಯಾಪ್ತಿಗೆ ಒಳಪಡುವ ಆಧಾರ್ ಗುರುತಿನ ಚೀಟಿ ನೀಡಿಕೆ, ಜನನ, ಮರಣ ಪ್ರಮಾಣ ಪತ್ರ, ಜಾತಿ, ಆದಾಯ ಪ್ರಮಾಣಪತ್ರ, ಪಡಿತರ ಗುರುತಿನ ಚೀಟಿ, ಆಧಾರ್ ಜೋಡಣೆಯೊಂದಿಗೆ ವೈಯಕ್ತಿಕ ಬ್ಯಾಂಕ್ ಉಳಿತಾಯ ಖಾತೆ, ವಿವಿಧ ಪಿಂಚಣಿ ಯೋಜನೆಗಳು, ಆಯುಷ್ಮಾನ್ ಭಾರತ್ ಆರೋಗ್ಯ ಗುರುತಿನ ಚೀಟಿ, ಆರೋಗ್ಯ ವಿಮೆಗಳು, ಇ–ಶ್ರಮ ಗುರುತಿನ ಚೀಟಿ, ಭಾಗ್ಯಲಕ್ಷ್ಮಿ ಯೋಜನೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಚೀಟಿಗಳನ್ನು ಒದಗಿಸುವ ಕಂದಾಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು, ಯುವಜನ ಮತ್ತು ಸಬಲೀಕರಣ ಸೇವೆಗಳು, ಕಾರ್ಮಿಕ ಮತ್ತು ವಿವಿಧ ಇಲಾಖೆಗಳ ಸಮನ್ವಯದಲ್ಲಿ ಸದರಿ ಅಭಿಯಾನವನ್ನು ಅನುಷ್ಠಾನಗೊಳಿಸುವುದು ಇದರ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

ಪಿಡಿಒ ಶಶಿಕಲಾ ಮಾತನಾಡಿ, ಬಿಳಿಗಿರಿರಂಗನಬೆಟ್ಟದಲ್ಲಿ ಒಟ್ಟು 750 ಕುಟುಂಬಗಳಿವೆ. ಈ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಮಾತ್ರ ಈ ಸೌಲಭ್ಯ ನೀಡಲು ಅವಕಾಶವಿದೆ. ಬೆಟ್ಟದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಸೋಲಿಗ ಜನಾಂಗವೇ ಹೆಚ್ಚಾಗಿದೆ. ಇದರಲ್ಲಿ ಅನೇಕರು ಸರ್ಕಾರದ ಅನೇಕ ಸೌಲಭ್ಯಗಳನ್ನು ಪಡೆದುಕೊಂಡಿಲ್ಲ. ಹೆಚ್ಚಾಗಿ ಇ–ಶ್ರಮ್ ಕಾರ್ಡ್‌ಗಳು ಹಾಗೂ ವಿವಿಧ ವಿಮಾ ಯೋಜನೆಗಳ ಬಗ್ಗೆ ಮಾಹಿತಿ ಇಲ್ಲ. ಹಾಗಾಗಿ ಎಲ್ಲರನ್ನೂ ಒಂದು ಕಡೆ ಸೇರಿಸಿ ಇದನ್ನು ಮಾಡಿಸಿಕೊಡುವ, ಇರುವ ದಾಖಲೆಗಳನ್ನು ಡಿಜಿ ಲಾಕರ್‌ಗೆ ಸೇರಿಸುವ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಲಾಗಿದೆ. ಇದೊಂದು ಸರ್ಕಾರದ ಪೈಲಟ್ ಪ್ರಾಜೆಕ್ಟ್ ಆಗಿದ್ದು ರಾಜ್ಯದಲ್ಲಿ ಪ್ರಥಮವಾಗಿ ಬೆಂಗಳೂರು ನಗರ ಹಾಗೂ ಬಿಳಿಗಿರಿರಂಗನಬೆಟ್ಟದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಈ ಪ್ರಕ್ರಿಯೆಯನ್ನು ನಾಲ್ಕು ಹಂತದಲ್ಲಿ ಬೆಟ್ಟದಲ್ಲಿ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಗ್ರಾಪಂ ಅಧ್ಯಕ್ಷ ಸಿ.ಡಿ. ಮಹಾದೇವ ಉಪಾಧ್ಯಕ್ಷೆ ಕಮಲಮ್ಮ ಸದಸ್ಯರಾದ ಎಚ್.ಪ್ರತೀಪ್‌ಕುಮಾರ್, ಮಾದಮ್ಮ, ರಂಗಮ್ಮ, ಬಸವಣ್ಣ, ಸಾಕಮ್ಮ ಕಾರ್ಯದರ್ಶಿ ನಟರಾಜು ಗ್ರಾಮ ಲೆಕ್ಕಿಗರಾದ ಶರತ್, ಪ್ರವೀಣ್, ನಂದಕುಮಾರ್, ಸಚಿನ್, ಗುರು ಸೇರಿದಂತೆ ಅನೇಕರು ಇದ್ದರು.



ಬಿಳಿಗಿರಿರಂಗನಬೆಟ್ಟದ ಯರಕನ ಗದ್ದೆ ಸಮುದಾಯ ಭವನದಲ್ಲಿ 'ನನ್ನ ಗುರುತು' ಅಭಿಯಾನಕ್ಕೆ ಗ್ರಾಪಂ ಅಧ್ಯಕ್ಷ ಸಿ.ಡಿ. ಮಹಾದೇವ ಚಾಲನೆ ನೀಡಿದರು.

ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡಿದ್ದ ವಿದ್ಯಾರ್ಥಿನಿ ಸಾವು

ಕೊಳ್ಳೇಗಾಲ: ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ತೀವ್ರ ಗಾಯಗೊಂಡಿದ್ದ ವಿದ್ಯಾರ್ಥಿನಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ತಾಲೂಕಿನ ಕಾಮಗೆರೆ ಗ್ರಾಮದಲ್ಲಿ ಜರುಗಿದೆ.



ಮಮತಾ

ಗ್ರಾಮದ ಹುಣಸೆಮರ ಕಾಲೋನಿಯ ನಿವಾಸಿಗಳಾದ ನಾಗಮಣಿ ಮತ್ತು ಕೆಂಪರಾಜು ದಂಪತಿ ಪುತ್ರಿ ಮಮತಾ (15) ವರ್ಷ) ಎಂಬ ವಿದ್ಯಾರ್ಥಿನಿ ಜ.6ರಂದು ಅಡುಗೆ ಮಾಡಲು ಮನೆಯಲ್ಲಿ ಗ್ಯಾಸ್ ಸ್ಟವ್ ಹಚ್ಚಲು ಹೋದ ಸಂದರ್ಭದಲ್ಲಿ ಗ್ಯಾಸ್ ಆನ್ ಮಾಡಿ ಲೈಟರ್ ಸಿಗದೇ ಐದು ನಿಮಿಷ ಬಿಟ್ಟು ಬೆಂಕಿ ಪೊಟ್ಟಣದಲ್ಲಿ ಗ್ಯಾಸ್ ಹಚ್ಚಿದ ವೇಳೆ ಸಿಲಿಂಡರ್ ಸ್ಫೋಟಗೊಂಡು ಬಾಲಕಿ ಗಾಯಗೊಂಡಿಳು. ಈಕೆಗೆ ಚಾಮರಾಜನಗರದಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಿಗ್ಗೆ ಆಕೆ ಸಾವನ್ನಪ್ಪಿದ್ದಾಳೆ. ಈ ಕುರಿತು ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ವಿಜೃಂಭಣೆಯ ಕೆಸ್ತೂರು ಬಂಡಿ ಜಾತ್ರೆ

ಚಾಮರಾಜನಗರ: ಹದಿನಾರು ಬಂಡಿಗಳು ಸೇರುವ ಕೆಸ್ತೂರು ಬಂಡಿ ಜಾತ್ರೆ ಜ.12ರಂದು ನಡೆಯಲಿದ್ದು, ಸುತ್ತಮುತ್ತಲ ಗ್ರಾಮಗಳಲ್ಲಿ ಸಂಭ್ರಮ, ಸಡಗರ ಮನೆ ಮಾಡಿದೆ.

ತಾಲೂಕಿನ ಸಂತೇಮರಹಳ್ಳಿ ಹೋಬಳಿಗೆ ಸೇರಿದ ಕೆಸ್ತೂರಿನ ದೊಡ್ಡಮ್ಮತಾಯಿ ದೇವಸ್ಥಾನದಲ್ಲಿ ಜಾತ್ರೆ ತಯಾರಿ ಪೂರ್ಣಗೊಂಡಿದ್ದು, ಕೆಸ್ತೂರು ಸೇರಿದಂತೆ ಚಾಮರಾಜನಗರ ಹಾಗೂ ನಂಜನಗೂಡು ತಾಲೂಕಿನ 23 ಗ್ರಾಮಗಳಲ್ಲೂ ಈ ಜಾತ್ರೆಯ ಸಂಭ್ರಮ ಕಳೆಗಟ್ಟಿದೆ.



ಹದಿನಾರು ಬಂಡಿಗಳ ವಿಶೇಷ ಜಾತ್ರೆ: ಕೆಸ್ತೂರು, ಭೋಗಾಪುರ, ಮರಿಯಾಲ, ಕಿರಗಸೂರು, ಸಪ್ಪಯ್ಯನಪುರ, ಕೆಲ್ಲಂಬಳ್ಳಿ, ಮೂಕಹಳ್ಳಿ, ಆನಹಳ್ಳಿ, ತೊರವಳ್ಳಿ, ಪುಟ್ಟೇಗೌಡನಹುಂಡಿ, ಹೊನ್ನೇಗೌಡನಹುಂಡಿ, ಪುಟ್ಟಯ್ಯನಹುಂಡಿ, ದಾಸನೂರು, ಚಿಕ್ಕಹೊಮ್ಮ, ದೊಡ್ಡಹೊಮ್ಮ ಹಾಗೂ ಹೆಗ್ಗವಾಡಿ ಗ್ರಾಮಸ್ಥರು ಬಂಡಿಗಳನ್ನು ಕಟ್ಟಿ, ಊರಲ್ಲಿ ಪೂಜೆ ಸಲ್ಲಿಸಿ ನಂತರ ಮೆರವಣಿಗೆ ಮೂಲಕ ಕಸ್ತೂರು ದೊಡ್ಡಮ್ಮತಾಯಿ ದೇವಾಲಯಕ್ಕೆ ಬಂದು, ಪ್ರದಕ್ಷಿಣೆ ಹಾಕುವುದು ಈ ಜಾತ್ರೆಯ ವಿಶೇಷ.

23 ಗ್ರಾಮಗಳಲ್ಲಿ ಜಾತ್ರೆಯ ದಿನ ಹಬ್ಬದ ವಾತಾವರಣ ಮನೆ ಮಾಡುತ್ತದೆ. ದೂರದ ಊರುಗಳಲ್ಲಿ ನೆಲೆಸಿರುವ ಕುಟುಂಬಸ್ಥರು ಮನೆಗೆ ಬರುತ್ತಾರೆ. ಸ್ನೇಹಿತರು, ನೆಂಟರಿಷ್ಟರನ್ನು ಮನೆಗೆ ಆಹ್ವಾನ ಮಾಡಿ, ಹಬ್ಬದ ಊಟ ಬಡಿಸುತ್ತಾರೆ.

ಬಂಡಿ ಜಾತ್ರೆಯನ್ನು ವ್ಯವಸ್ಥಿತವಾಗಿ ನಡೆಸಲು ಸಹಕಾರ ನೀಡಬೇಕು ಎಂದು ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಗೆ ಗ್ರಾಮಸ್ಥರಲ್ಲಿ ಮನವಿ ಮಾಡಿಕೊಂಡಿದೆ.

ಜಾತ್ರೆಯ ಅಂಗಳವನ್ನು ಸ್ವಚ್ಛತೆಗೊಳಿಸಲಾಗಿದ್ದು, ದೊಡ್ಡಮ್ಮತಾಯಿ ದೇವಾಲಯದ ಆವರಣದಲ್ಲಿ ಹೋಟೆಲ್, ಅಂಗಡಿ–ಮುಂಗಟ್ಟುಗಳು ಹಾಗೂ ಆಟಿಕೆ ಸಾಮಾನು ಮಾರಾಟಗಾರರಿಗಾಗಿ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ.

ಜ.18ರಂದು ಮರು ಜಾತ್ರೆ: ದೊಡ್ಡ ಜಾತ್ರೆಯಾದ ಒಂದು ವಾರದ ನಂತರ ಜ. 18ರಂದು ಗ್ರಾಮದಲ್ಲಿ ಮರು ಜಾತ್ರೆ ನಡೆಯಲಿದ್ದು, ಅದರಲ್ಲೂ ಸಾವಿರಾರು ಮಂದಿ ಪಾಲ್ಗೊಳ್ಳುತ್ತಾರೆ.

ಹಾವು ಕಚ್ಚಿ ಮಗು ಸಾವು

ಕೊಳ್ಳೇಗಾಲ: ಹಾವು ಕಚ್ಚಿದ ಪರಿಣಾಮ ಎರಡು ವರ್ಷದ ಮಗು ಸಾವಿಗೀಡಾಗಿರುವ ಘಟನೆ ತಾಲೂಕಿನ ತೇರಂಬಳ್ಳಿ ಗ್ರಾಮದಲ್ಲಿ ಜರುಗಿದೆ. ಬಳ್ಳಾರಿ ಜಿಲ್ಲೆ ಹೊಸಪೇಟೆಯ ವಾಸಿ, ಕೂಲಿ ಕಾರ್ಮಿಕ ಶ್ರೀಧರ್ ಎಂಬುವರ 2 ವರ್ಷದ ಮಗು ಅಜಯ್ ಸಾವನ್ನಪ್ಪಿದ್ದು, ಹೊಸಪೇಟೆಯಿಂದ ಕಬ್ಬು ಕಟಾವು ಕೂಲಿಗಾಗಿ ರಾಜಮ್ಮ ಎಂಬುವವರ ಜಮೀನಿಗೆ ಬಂದಿದ್ದ ಶ್ರೀಧರ್ ದಂಪತಿ ಮಗುವನ್ನು ಜಮೀನಿನ ಬಳಿ ಮಲಗಿಸಿ ಕಬ್ಬು ಕಟಾವು ಮಾಡುತ್ತಿದ್ದ ವೇಳೆ ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ಹಾವು ಕಚ್ಚಿದೆ ಎನ್ನಲಾಗಿದ್ದು, ತಕ್ಷಣ ಕಾಮಗೆರೆ ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮಗು ಸಾವನ್ನಪ್ಪಿದೆ.

ಈ ಸಂಬಂಧ ಮಾಂಬಳ್ಳಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಂಗಾಂಗ ದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದ ಕುಟುಂಬ

ಯಳಂದೂರು, ಜ.11– ತಾಲೂಕಿನ ಮದ್ದೂರು ಗ್ರಾಮದಲ್ಲಿ ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಮೃತಪಟ್ಟ ವ್ಯಕ್ತಿಯ ಕುಟುಂಬದವರು ಅವರ ಅಂಗಾಂಗವನ್ನು ದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.



ಮಹಾದೇವಯ್ಯ

ಮದ್ದೂರು ಗ್ರಾಮದ ಮಹಾದೇವಯ್ಯ (68) ಎಂಬ ವ್ಯಕ್ತಿ ಜ.4 ರಂದು ಎಳೆಪಿಳ್ಳಾರಿ ದೇಗುಲದ ಬಳಿ ರಾಷ್ಟ್ರೀಯ ಹೆದ್ದಾರಿ 948ರಲ್ಲಿ ತಮ್ಮ ಜಮೀನಿನಿಂದ ಕಾಲ್ನಡಿಗೆಯಲ್ಲೇ ವಾಪಸ್ಸಾಗುತ್ತಿದ್ದ ವೇಳೆ ಮೊಪೆಡ್ ಡಿಕ್ಕಿ ಹೊಡೆದ ಪರಿಣಾಮ ಇವರ ತಲೆಗೆ ತೀವ್ರ ಪೆಟ್ಟಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದಾದ ಬಳಿಕ ಇವರ ಮೆದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ತಿಳಿಸಿದ್ದಾರೆ. ಈ ವೇಳೆ ಕುಟುಂಬಸ್ಥರು ಮಹಾದೇವಯ್ಯನವರ ಅಂಗಾಂಗಗಳನ್ನು ದಾನ ಮಾಡಲು ತೀರ್ಮಾನಿಸಿದರು. ವೈದ್ಯರಿಗೆ ಮಾಹಿತಿ ನೀಡಿದ ಮೇಲೆ ಇವರ ಅಂಗಾಂಗಗಳನ್ನು ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದ್ದಾರೆ.

ಮೃತರು ತಾಯಿ ಪುಟ್ಟನಂಜಮ್ಮ, ಪತ್ನಿ ಮಹಾದೇವಮ್ಮ, ಪುತ್ರಿಯರಾದ ಪ್ರಭಾವತಿ, ಶಶಿಕಲಾ ಹಾಗೂ ಪುತ್ರ ಮಲ್ಲು ಹಾಗು ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ
ಭಾನುವಾರ 12-1-2025


■ಡಾ.ಯಶಸ್ವಿನಿ ಎಸ್.,
ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮೈಸೂರು ವಿಶ್ವವಿದ್ಯಾನಿಲಯ.



ಕಾಂಬೋಡಿಯಾ

ವಿಷ್ಣು ದೇಗುಲ

ಪ್ರವಾಸ 'ದರ್ಶನ'



ಅಂಕೋರ್ ವಾಟ್, ಕಾಂಬೋಡಿಯಾದ ಅತ್ಯಂತ ಪ್ರಾಚೀನ ಹಿಂದೂ ದೇಗುಲ. ವಿಶ್ವದ ಅತ್ಯಂತ ಅದ್ಭುತವಾದ ಪರಂಪರೆಯ ತಾಣಗಳಲ್ಲಿ ಒಂದಾಗಿದೆ. ಇದು ಯುನೆಸ್ಕೋ ವಿಶ್ವಪರಂಪರೆಯ ಪಟ್ಟಿಗೂ ಸೇರಿದೆ. ಈ ದೇವಾಲಯ ಭವ್ಯತೆ ನೋಡುಗರ ಮೂಕ ವಿಸ್ಮಿತರನ್ನಾಗಿಸುತ್ತದೆ. ಎತ್ತರದ ಗೋಪುರಗಳು, ಸಂಕೀರ್ಣವಾದ ಕೆತ್ತನೆಗಳು, ವಿಶಾಲವಾದ ಕಲ್ಲಿನ ರಚನೆಗಳು ನಾಗರಿಕತೆಯ ಶ್ರೇಷ್ಠತೆ ಮತ್ತು ವಾಸ್ತು ಶಿಲ್ಪದ ಭವ್ಯತೆಯನ್ನು ನೋಡುಗರಿಗೆ ಸಾರಿ ಸಾರಿ ಹೇಳುತ್ತವೆ.

ಕಾಂಬೋಡಿಯಾದ ಸೀಮ್ ರೀಪ್ ನಲ್ಲಿರುವ ಈ ಅಂಕೋರ್ ವಾಟ್ ಅತ್ಯಂತ ಅದ್ಭುತವಾದ ಪಾರಂಪರಿಕ ಸ್ಮಾರಕಗಳಲ್ಲಿ ಒಂದು. ಇದು ಖಮೇರ್ ವಾಸ್ತುಶಿಲ್ಪದ ಸಂಕೀರ್ಣ ಕೆತ್ತನೆಗಳು, ಬೃಹತ್ ಕಲ್ಲಿನ ರಚನೆಗಳು, ಕಮಲದ ಮೊಗ್ಗಿನ ಆಕಾರದ ಗೋಪುರಗಳು, ವಿಶಾಲವಾದ ಆವರಣಗಳು ಹಾಗೂ ಶಿಲುಬೆಯಾಕಾರದ ಮೇಲ್ಛಾವಣಿಗಳ ಒಳಗೊಂಡಿದೆ. ದೇವಾಲಯದ ಸಂಕೀರ್ಣವು ಹಿಂದೂ ಪುರಾಣದ, ವಿಶೇಷವಾಗಿ ರಾಮಾಯಣ ಮತ್ತು ಮಹಾಭಾರತದ ದೃಶ್ಯಗಳ ಒಳಗೊಂಡಿದೆ. ವಿಸ್ತಾರವಾದ ಉಬ್ಬುಶಿಲ್ಪಗಳ ಬೆರಗುಗೊಳಿಸುವ ಮಿಶ್ರಣವಾಗಿದೆ. ಅಲ್ಲಿಗೆ ಭೇಟಿ ನೀಡುವ ಪ್ರತಿಯೊಬ್ಬ ಭಾರತೀಯನ ಮನಸ್ಸನ್ನು ಈ ಸೌಂದರ್ಯದ ಖನಿ ಮಂತ್ರಮುಗ್ಧಗೊಳಿಸಲಿದೆ.

ಈ ಭವ್ಯವಾದ ಅದ್ಭುತವನ್ನು ಮೂಲತಃ 12ನೇ ಶತಮಾನದ ಆರಂಭದಲ್ಲಿ ವಿಷ್ಣು(ಬ್ರಹ್ಮಾಂಡದ ಸಂರಕ್ಷಕ) ದೇವರಿಗೆ ಸಮರ್ಪಿತವಾದ ಹಿಂದೂ ದೇವಾಲಯವಾಗಿ ನಿರ್ಮಿಸಲಾಗಿದೆ. ಕ್ರಮೇಣ ಇದು ಬೌದ್ಧ ಮಂದಿರವಾಗಿ ಪರಿವರ್ತನೆಯಾದರೂ ಈ ದ್ವಂದ್ವತೆಯು ಅದರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವಕ್ಕೆ ಅನೇಕ ಹೊಸ ಪುಟಗಳನ್ನು ಸೇರಿಸುತ್ತದೆ. ಇದನ್ನು ಚಕ್ರವರ್ತಿ ದೇವರಾಜ (ದೇವರ ರಾಜ) ನಿರ್ಮಿಸಿದ ಎಂದು ಹೇಳಲಾಗುತ್ತದೆ. ಇದು ಕಾಂಬೋಡಿಯಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬಿಂಬಿಸುತ್ತದೆ. ಅಲ್ಲದೆ ರಾಷ್ಟ್ರೀಯ ಹೆಮ್ಮೆಯ ಸಂಕೇತವಾಗಿದೆ. ಆದ್ದರಿಂದ ಕಾಂಬೋಡಿಯ ರಾಷ್ಟ್ರೀಯ ಧ್ವಜವು ಅಂಕೋರ್ ವಾಟ್‌ನ ಮುಖ್ಯ ಕಟ್ಟಡವನ್ನು ಬಿಂಬಿಸುತ್ತದೆ.

ದೇವಾಲಯವು 162 ಹೆಕ್ಟೇರ್‌ಗಿಂತಲೂ ಹೆಚ್ಚು ವ್ಯಾಪಿಸಿದೆ. ಇದು ವಿಶ್ವದ ಅತೀ ದೊಡ್ಡ ಧಾರ್ಮಿಕ ಸ್ಮಾರಕವೂ ಆಗಿದೆ. ಇದರ ವಿನ್ಯಾಸವು ಬ್ರಹ್ಮಾಂಡದ ಐಹಿಕ ಮಾದರಿಯನ್ನು ಸಂಕೇತಿಸುತ್ತದೆ. ಕೇಂದ್ರ ಗೋಪುರವು ಹಿಂದೂ ಮತ್ತು ಬೌದ್ಧ ವಿಶ್ವ ವಿಜ್ಞಾನದಲ್ಲಿ ಬ್ರಹ್ಮಾಂಡದ ಕೇಂದ್ರವಾದ ಮೇರು ಪರ್ವತವನ್ನು ಪ್ರತಿನಿಧಿಸುತ್ತದೆ. ಜೊತೆಗೆ ಈ ಪ್ರದೇಶ ಹಚ್ಚ ಹಸಿರಿನಿಂದ ಸುತ್ತುವರೆದಿದ್ದು, ಸುತ್ತಲೂ ಭಾರಿ ಕಂದಕ, ಅದಕ್ಕೆ ಹಿಂದೆ ರಕ್ಷಣೆಯನ್ನು ಒದಗಿಸಿತ್ತು. ಇಲ್ಲಿ ಸೂರ್ಯಾಸ್ತ ಹಾಗೂ ಸೂರ್ಯೋದಯದ ಸಂದರ್ಭದಲ್ಲಿ ಆಕಾಶವು ಕಿತ್ತಳೆ ಮತ್ತು ಗುಲಾಬಿ ಬಣ್ಣಗಳಿಂದ ಕಂಗೊಳಿಸುತ್ತದೆ. ಕಂದಕದ ನಿಶ್ಚಲವಾದ ನೀರಿನ ಮೇಲೆ ಅಪೂರ್ವವಾದ ಹೊಳಪನ್ನು ಮೂಡಿಸುತ್ತದೆ. ಅಲ್ಲಿ ಮೂಡುವ ವಿವಿಧ ಬಣ್ಣಗಳು ಮತ್ತು ಅಪಾರ ಸೌಂದರ್ಯವು ಪ್ರತಿ ಕ್ಷಣ ದೇವಾಲಯದ ಭವ್ಯತೆ ಮತ್ತು ಆಧ್ಯಾತ್ಮಿಕತೆಯನ್ನು ಸೆರೆಹಿಡಿಯುವಂತೆ ಭಾಸವಾಗುತ್ತದೆ. ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಧನ್ಯತಾ ಭಾವ ತಾಳುತ್ತಾರೆ.

ಇತಿಹಾಸದೊಂದಿಗೆ ಒಂದು ಕಾಲ್ನಡಿಗೆ: ಅಂಕೋರ್ ವಾಟ್‌ಗೆ ಕಾಲಿಡುತ್ತಿದ್ದಂತೆ, ಗೋಡೆಗಳನ್ನು ಅಲಂಕರಿಸಿದ ಅದ್ಭುತವಾದ ಕೆತ್ತನೆಗಳು, ಹಿಂದೂ ಪುರಾಣದ 'ರಾಮಾಯಣ' ಶಾಸನಗಳಿಂದ ಕೂಡಿದ ಗೋಡೆಗಳು ಆಕರ್ಷಿಸುತ್ತವೆ. ಸಂಕೀರ್ಣವಾದ ಕೆತ್ತನೆಗಳು ಕಾಲಾತೀತ ಕಥೆಯನ್ನು ಹೇಳುತ್ತಿರುವಂತೆ ಭಾಸವಾಗುತ್ತದೆ. ನಿಜಕ್ಕೂ ಮಹಾಕಾವ್ಯದ ವಿವಿಧ ಪಾತ್ರಗಳು ಮತ್ತು ಘಟನೆಗಳಿಗೆ ಸಾಕ್ಷಿ ಎಂಬಂತೆ ಬಿಂಬಿತವಾಗುತ್ತಿದ್ದು, ಆ ಪ್ರದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಮಾರು ಹೋಗುವಂತೆ ಮಾಡುತ್ತವೆ. ಸುತ್ತ ಮುತ್ತಲಿನ ಅವ್ಯವಸ್ಥೆಗಳ ಹೊರತಾಗಿಯೂ, ಈ ಶಾಸನಗಳ ಕಲಾತ್ಮಕತೆ ಮತ್ತು ಐತಿಹಾಸಿಕ ಮಹತ್ವವು ದೇವಾಲಯದ ಪರಂಪರೆ, ಅದರ ಪ್ರಾಚೀನತೆ ಮತ್ತು ಅದರ ಸೌಂದರ್ಯ ನಮ್ಮ ಸ್ಮೃತಿ ಪಟಲದಲ್ಲಿ ಅಚ್ಚೊತ್ತುವಂತಿದೆ.


ಅಂಕೋರ್ ವಾಟ್ ಪ್ರವೇಶಿಸಿದ ತಕ್ಷಣವೇ ಅನಿರೀಕ್ಷಿತ, ಆಶ್ಚರ್ಯಕರ ಭಾವವೂ ಮೂಡುತ್ತದೆ. ವಾಸ್ತುಶಿಲ್ಪ ಮತ್ತು ಇತಿಹಾಸದ ಅದ್ಭುತವಾದ ದೇವಾಲಯದ ಗಾಂಭೀರ್ಯವು ಶತಮಾನಗಳ ಧೂಳಿನಿಂದ ಮುಚ್ಚಿಹೋಗಿದೆ. ಶಿಥಿಲಗೊಂಡ ಕಲ್ಲುಗಳು ಮತ್ತು ಮಿತಿ ಮೀರಿ ಬೆಳೆದ ಗಿಡ-ಬಳ್ಳಿಗಳಿಂದ ಆವೃತವಾಗಿದ್ದು, ಪಠಣ ಪ್ರಾರ್ಥನೆಗಳಾಗಲೀ, ಧೂಪದ್ರವ್ಯದ ವಾಸನೆಯಾಗಲೀ, ಕಿಟಕಿಗಳ ಮೂಲಕ ಮೃದುವಾದ ಬೆಳಕು ಕೂಡ ಕಾಣಿಸದು. ಆದರೆ ಒಂದು ಅಹಿತಕರ ವಾಸನೆಯು ಗಾಳಿಯಲ್ಲಿ ಉಳಿದಂತಹ ಅನುಭವವಾಗುತ್ತದೆ. ಅತ್ಯಂತ ಪ್ರಸಿದ್ಧ ನೆಲೆಗೆ ತಕ್ಕುದಾದ ಕಾಳಜಿಯನ್ನು ವಹಿಸದೇ ಇರುವುದರಿಂದ ನಿರೀಕ್ಷಿಸಬಹುದಾದ ಪ್ರಶಾಂತ ಮತ್ತು ಸೌಂದರ್ಯ ಕ್ಷೀಣಿಸುತ್ತಾ ಬರುತ್ತಿದ್ದು, ನೋಡಲು ನಿರಾಶಾದಾಯಕವಾಗಿದೆ. ಇಷ್ಟಾದರೂ ಅದು ಸಂಸ್ಕೃತಿ ಮತ್ತು ಪರಂಪರೆಯ ವೈಭವವನ್ನು ಜಗತ್ತಿಗೆ ಸಾರುತ್ತಿದೆ.



ವಾರಭವಿಷ್ಯ

12.01.2025 ರಿಂದ 18.01.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಮಕರ, ಚಂದ್ರ-ಮಿಥುನ, ಕಟಕ, ಸಿಂಹ, ಕುಜ-ಕಟಕ, ಬುಧ-ಧನುಸ್ಸು, ಗುರು-ವೃಷಭ, ಶುಕ್ರ-ಕುಂಭ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ವ್ಯಾಪಾರ ವ್ಯವಹಾರಗಳು ಚುರುಕಾಗಿ ನಡೆದು ಹಣ ಸಂಪಾದನೆ ಆಗುವುದು. ನಿಮ್ಮ ಕ್ರಿಯಾಶಕ್ತಿ ಅದ್ಭುತವಾಗಿರುತ್ತದೆ. ವಿದ್ಯಾರ್ಥಿಗಳು ನಿರೀಕ್ಷಿತ ಮಟ್ಟವನ್ನು ಸಾಧಿಸುವರು. ಮನೆಯಲ್ಲಿ ಶುಭ ಕಾರ್ಯಕ್ಕೆ ತಯಾರಿ ನಡೆಯುವುದು. ಅಮೂಲ್ಯ ಸಂಪತ್ತು ಗಳಿಕೆಗೆ ಗುರು ಹಿರಿಯರ ಆಶೀರ್ವಾದವಿದೆ, ಪ್ರಯತ್ನಿಸಿ. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ.

ಶ್ರೀ ಸ್ಕಂದಸ್ವಾಮಿ ದರ್ಶನ. ಶುಭ ಸಂಖ್ಯೆ-6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕರ್ತವ್ಯದಲ್ಲಿ ಶ್ರದ್ಧೆ ಇದ್ದರೆ ಗುರಿಯನ್ನು ಸಾಧಿಸುವಿರಿ, 'ಶ್ರದ್ಧಾವಾನ್ ಲಭತೇ ಫಲಂ' ಎಂಬಂತೆ. ಹೊಸ ವೃತ್ತಿಯ ನಿಮಿತ್ತ ಅನ್ಯಕ್ಷೇತ್ರ ವಾಸ ಸಂಭವಿಸಬಹುದು. ರಾಜಕೀಯದವರು ವಿರೋಧಿಗಳ ಟೀಕೆಗೆ ಗುರಿಯಾಗುವರು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರುವುದರಿಂದ ಅಹಿತಕರ ಘಟನೆಯನ್ನು ತಡೆಯಬಹುದು. ಶ್ವಾಸ ಸಂಬಂಧಿ ತೊಂದರೆ ಉಂಟಾಗಬಹುದು.

ಶ್ರೀ ಶಕ್ತಿದೇವತೆ ದರ್ಶನ. ಶುಭ ಸಂಖ್ಯೆ-8

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಚತುರತೆಯ ಮುಂದೆ ಹಣಬರಹವೇ ಗೆಲ್ಲುವುದು. ಚಂದ್ರ ಸಂಚಾರ ಶುಭವಿದ್ದು ನಿಮ್ಮ ಮನೋಕಾಮನೆಗಳು ಸಾಕಾರವಾಗುವ ಸಮಯ ಬಂದಿದೆ. ಸಜ್ಜನರ ಭೇಟಿಯಿಂದ ಮಾರ್ಗದರ್ಶನ ದೊರಕುವುದು. ಸಮಾಜ ಸೇವಾ ಅನ್ನದಾನ ಕಾರ್ಯದಲ್ಲಿ ತೊಡಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ಮನೋರಂಜನೆಗಾಗಿ ಹೆಚ್ಚಿನ ಹಣ ವಿನಿಯೋಗವಾಗುವುದು. ಶೀತಬಾಧೆಯಿಂದ ಶರೀರದಲ್ಲಿ ವಿಕಾರತೆ ಉಂಟಾಗಲಿದೆ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-3

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಸಪ್ತಾಹದ ಆದಿಗೆ ಬಯಸಿದ್ದನ್ನು ಪಡೆದುಕೊಳ್ಳುವಿರಿ. ಆಗುವುದೆಲ್ಲಾ ಒಳ್ಳೆಯದಕ್ಕೆ ಎಂಬ ನಂಬಿಕೆಯಿಂದ ಮುಂದುವರೆಯಿರಿ. ಅಧ್ಯಾಪಕ ವೃತ್ತಿಯವರಿಗೆ ಪಿಎಚ್.ಡಿ ಶಿಕ್ಷಣಕ್ಕೆ ಅನುಮತಿ ದೊರೆಯುವ ಸಾಧ್ಯತೆ ಇದೆ. ಸರಾಫ್ ವ್ಯಾಪಾರಿಗಳಿಗೆ ಬಂಪರ್ ವ್ಯಾಪಾರದಿಂದ ಲಾಭ ದ್ವಿಗುಣ. ವಾರಾಂತ್ಯಕ್ಕೆ ಪಿಕ್‌ನಿಕ್ ಮೂಡ್ ಇರುತ್ತದೆ. ಸೆಲ್ಫಿ ಗೀಳು ತೊಂದರೆ ತರುವುದು, ಜಾಗರೂಕರಾಗಿರಿ.

ಶ್ರೀ ಚಾಮುಂಡೇಶ್ವರಿ ಪೂಜೆ. ಶುಭ ಸಂಖ್ಯೆ-4

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಆದಿಗೆ ವೃತ್ತಿಪರ ವ್ಯವಹಾರಗಳು ಅನುಕೂಲಕರವಾಗಿರುತ್ತದೆ. ಬುದ್ಧಿವಂತರು ಅಮೂಲ್ಯ ವಿಷಯಗಳನ್ನು ಸಂಗ್ರಹಿಸುವಿರಿ. ಕೌಟುಂಬಿಕ ವಿಚಾರಗಳಲ್ಲಿ ಉಂಟಾಗಿದ್ದ ವಿವಾದಗಳು ದೂರವಾಗಲಿದೆ. ದಿನಸಿ, ಧಾನ್ಯ ವ್ಯಾಪಾರಿಗಳಿಗೆ ಹಬ್ಬದ ವ್ಯಾಪಾರ ಜೋರು ಹಾಗೂ ಹೇರಳ ಧನಲಾಭ. ವಾರಾಂತ್ಯಕ್ಕೆ ದೇವತಾ ಕಾರ್ಯಗಳಲ್ಲಿ ಭಾಗಿಯಾಗಿ ಧನ್ಯತಾಭಾವವನ್ನು ಹೊಂದುವಿರಿ.

ಶ್ರೀ ಶಿವಾಷ್ಟಕ ಭಜಿಸಿ. ಶುಭ ಸಂಖ್ಯೆ-1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನಿಮ್ಮ ಪ್ರಭಾವ ಹಾಗೂ ದಕ್ಷತೆಯಿಂದ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಸಮಾಜದ ಪ್ರಮುಖ ಕೆಲಸಗಳಿಗೆ ಅಪರೂಪದ ಆಹ್ವಾನ ದೊರಕುವುದು. ಸಹೋದರ ಸಂಬಂಧಿಗಳಲ್ಲಿ ಉಂಟಾದ ವಾದ-ವಿವಾದಗಳು ಬಗೆಹರಿಯುವುದು. ಬ್ಯಾಂಕ್ ಸಾಲದ ಪ್ರಯತ್ನಗಳು ಸಫಲವಾಗುವುದು. ಜನ್ಮ ಕೇತು ಇರುವ ಕಾರಣ ವಿಷಜಂತುಗಳಿಂದ ಜಾಗ್ರತರಾಗಿರಿ.

ಶ್ರೀ ವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರದಲ್ಲಿ ಗುರು-ಶನಿಗಳು ನಿಮ್ಮ ಪ್ರಗತಿಗೆ ಹಿನ್ನಡೆಯನ್ನು ಉಂಟು ಮಾಡಿದ್ದಾರೆ. ತಾಳ್ಮೆಯಿಂದ ಕರ್ತವ್ಯ ನಿರ್ವಹಿಸುತ್ತಾ ಭಗವದ್ಧ್ಯಾನ ಮಾಡಿ. ವಾರದ ಉತ್ತರಾರ್ಧದಲ್ಲಿ ಸರ್ಕಾರಿ ಅಧಿಕಾರಿಗಳ ಸಹಾಯ ದೊರಕುವುದು. ಉತ್ತಮರ ಸಂಪರ್ಕ ನಿಮ್ಮ ಜೀವನದಶೆಯನ್ನು ಬದಲಾಯಿಸಲಿದೆ. ಉದ್ಯಮಪತಿಯವರಿಗೆ ನೌಕರರ ಅಸಹಕಾರದಿಂದ ನಷ್ಟ ಸಂಭವ. ಉದರ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)

ತುಳಿಯುವವರು ಎಷ್ಟೇ ಜನ ಇದ್ದರೂ ಕಾಪಾಡಲು ಒಬ್ಬ ದೇವನಿದ್ದಾನೆ. ಗುರು ದರ್ಶನದಿಂದ ಗುರಿ ಕಾಣುತ್ತವೆ. ಮಾತಿನಂತೆ ನಡೆದು ಮನ್ನಣೆಗೆ ಪಾತ್ರರಾಗುವಿರಿ. ನೂತನ ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ಹೊಸ ವೃತ್ತಿ, ಅಂಗಡಿ ಪ್ರಾರಂಭಿಸಲು ಧನುರ್ಮಾಸ ಕಳೆಯಲಿ. ಅಜಾಗರೂಕತೆಯಿಂದ ಯಂತ್ರ ಚಾಲನೆಯಿಂದ ತೊಂದರೆ ಉಂಟಾದೀತು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು.

ಶ್ರೀ ಗಣೇಶ ನಾಮಸ್ತುತಿ. ಶುಭ ಸಂಖ್ಯೆ-9

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ದೈವ ಸಹಾಯವಿಲ್ಲದೆ ಜಯ ದೊರಕದು. ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ಆತುರದ ನಿರ್ಧಾರಗಳು ನಷ್ಟಕ್ಕೆ ಕಾರಣವಾಗುವುದು. ವಾರಮಧ್ಯೆ ಸ್ನೇಹಿತರಿಂದ ಸಹಾಯ ದೊರೆಯಲಿದೆ. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಸರ್ಕಾರಿ ನೌಕರರಿಗೆ ಬೇಡದ ಸ್ಥಾನಕ್ಕೆ ವರ್ಗಾವಣೆ ಆದೀತು. ವಾಹನ ರಿಪೇರಿ ಖರ್ಚುಗಳು ಎದುರಾಗುವುದು.

ಶ್ರೀ ರಾಘವೇಂದ್ರಸ್ವಾಮಿ ಪೂಜೆ. ಶುಭ ಸಂಖ್ಯೆ-4

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)

ಈ ವಾರದಲ್ಲಿ ಬೆಲೆ ಬಾಳುವ ವಸ್ತು, ವಾಹನ ಖರೀದಿಸುವ ಸುಯೋಗವಿದೆ. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ಸ್ಥಿರಾಸ್ತಿ ಒಪ್ಪಂದಗಳು ಅನುಕೂಲಕರವಾಗಿರುತ್ತದೆ. ಮನೆಯಲ್ಲಿ ಮಂಗಳ ವಾದ್ಯ ಮೊಳಗಬಹುದು. ಕೆಲವೊಮ್ಮೆ ದ್ವಂದ್ವ ಆಲೋಚನೆಗಳನ್ನು ಮಾಡುವುದರಿಂದ ಪ್ರಮುಖ ಕೆಲಸಗಳು ಮುಂದೆ ಸಾಗದು. ಮನೆ ಆಳುಗಳು ಕಿರಿಕಿರಿ ಉಂಟು ಮಾಡುವರು.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-2

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸರ್ಕಾರಿ ಅಧಿಕಾರಿಗಳ ಸಹಕಾರದಿಂದ ಆಸ್ತಿ ವಿಚಾರಗಳು ಇತ್ಯರ್ಥಗೊಳ್ಳುವುದು. ಆದರೆ ಕೈಗೆತ್ತಿಕೊಂಡ ಕೆಲಸಗಳಲ್ಲಿ ಹೆಚ್ಚಿನ ಶ್ರಮ ಮತ್ತು ಖರ್ಚುಗಳು ಉಂಟಾಗುವುದು. ನಿಮಗಾಗದವರು ಮಿತ್ರತ್ವ ಬಯಸಿ ಬರಬಹುದು, ತಿರಸ್ಕರಿಸಬೇಡಿ. ಉತ್ತಮ ವ್ಯಕ್ತಿಗಳ ಒಡನಾಟದಿಂದ ನಿಮ್ಮ ಮಾನ, ಪ್ರತಿಷ್ಠೆಗಳು ಹೆಚ್ಚುವುದು. ದೂರ ಪ್ರಯಾಣಗಳು ಸಂಭವಿಸಬಹುದು. ಅತೀ ವೇಗ ನಿಷಿದ್ಧ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ವಾರದಾರಂಭಕ್ಕೆ ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವುದರಿಂದ ಮನೋಲ್ಲಾಸ. ವೈಯಕ್ತಿಕ ಕೆಲಸಗಳಿಗೆ ಆದ್ಯತೆ ನೀಡಿ. ಸಿದ್ಧ ಉಡುಪು ತಯಾರಕರಿಗೆ, ಮಾರಾಟಗಾರರಿಗೆ ಹೆಚ್ಚಿನ ಧನಲಾಭವಾಗುವುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಅನುಚಿತ ವ್ಯಕ್ತಿಗಳ ಸಂಪರ್ಕದಿಂದ ತೊಂದರೆಗೆ ಸಿಲುಕುವಿರಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1

ಮಕ್ಕಳ ಚಿತ್ರಕಥೆ

'ಮಗಳೇ, ನಿನಗೆ ಒಂದು ಪ್ರಶ್ನೆ....!'


■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಮ್ಮೆ ತಂದೆಯೊಬ್ಬ ಮಗಳೊಂದಿಗೆ ಗಾಳಿಪಟ ಹಾರಿಸುತ್ತಿರುವಾಗ ಕೇಳುತ್ತಾನೆ "ಮಗಳೇ, ನಿನಗೆ ಒಂದು ಪ್ರಶ್ನೆ... ಇದಕ್ಕೆ ನೀನು ಸರಿಯಾಗಿ ಉತ್ತರ ನೀಡಬೇಕು...!". "ಗಾಳಿಪಟ ಹಾರಿಸುವಾಗ ನೂಲಿನ ಕೆಲಸವೇನು...?"ಎಂದು ಕೇಳಿದ.




ಅದಕ್ಕೆ ಮಗಳು " ಅಪ್ಪಾ, ನೂಲು ಆ ಗಾಳಿಪಟವನ್ನು ಹಾರಲು ಬಿಡದೆ ಎಳೆದುಹಿಡಿದಿರುವುದು. ಅಂದರೆ, ಅದನ್ನು ಸ್ವತಂತ್ರವಾಗಿ ಹಾರಲು ಬಿಡುತ್ತಿಲ್ಲ...!" ಎಂದು ತಟ್ಟನೆ ಉತ್ತರ ಕೊಟ್ಟಳು.




ಆಗ ತಂದೆಯು, "ತಪ್ಪು ಮಗಳೇ.. ಆ ನೂಲು, ಗಾಳಿಪಟಕ್ಕೆ ಗುರಿ ತಪ್ಪದೆ ಸರಿಯಾದ ದಿಶೆಯಲ್ಲಿ ಹಾರಲು ಅನುವು ಮಾಡಿಕೊಡುವುದು...!" ಎಂದ. ಮಗಳು ಅದನ್ನು ಕೇಳಿ ವ್ಯಂಗ್ಯವಾಗಿ ನಕ್ಕಳು.



ಇದನ್ನು ಕಂಡ ತಂದೆ, ಒಂದು ಕತ್ತರಿ ತೆಗೆದುಕೊಂಡು ನೂಲನ್ನು ಕತ್ತರಿಸಿಬಿಟ್ಟನು. ನಿಯಂತ್ರಣ ತಪ್ಪಿದ ಆ ಗಾಳಿಪಟ, ಸ್ವಲ್ಪ ಮುಂದೆ ಹಾರಿ ತಲೆಕೆಳಗಾಗಿ ಚಿಂದಿ-ಚಿಂದಿಯಾಗಿ ಕೆಳಗೆ ಬಿದ್ದುಬಿಟ್ಟಿತು.



ಇದನ್ನು ನೋಡಿ ನಿಂತ ಮಗಳೊಡನೆ ತಂದೆ, "ಮಗಳೆ, ಇದಾಗಿದೆ ವಾಸ್ತವ.... ನೂಲು ಗಾಳಿಪಟವನ್ನು ಹಾರಲು ಬಿಡದೆ ಎಳೆದು ಹಿಡಿದಿರುವುದಾಗಿ ನೀನು ಭಾವಿಸಿದ್ದೆ..... ನೂಲಿನ ನಿಯಂತ್ರಣ ಬಿಟ್ಟರೆ ಸ್ವತಂತ್ರವಾಗಬಹುದು ಎಂದೂ ಸಹ ನಂಬಿದ್ದೆ... ಆದರೆ ಆ ಸ್ವಾತಂತ್ರ ಎಷ್ಟು ಅಲ್ಪ ಕಾಲದ್ದೆಂದು ನಿನಗೆ ಅರ್ಥವಾಯಿತಲ್ಲವೇ...? ಎಂದ.



ನೀನು ಎಂಬ ಗಾಳಿಪಟವನ್ನು ನಿಯಂತ್ರಿಸುವ ನೂಲಾಗಿರುವುದೇ.... ನಿನ್ನ ಅಪ್ಪ-ಅಮ್ಮ....! ನಮ್ಮ ನಿಯಂತ್ರಣದಲ್ಲಿ ನೀನು ಎಷ್ಟು ಎತ್ತರಕ್ಕೂ ಹಾರಬಹುದು. ಆದರೆ, ಸ್ವತಂತ್ರವಾಗಿ ಹಾರಬಹುದು.... ಎಂಬ ಭ್ರಮೆಯಲ್ಲಿ ನಮ್ಮ ಆಣತಿ ಮೀರಿ ಹೋದರೆ, ಬದುಕಿನ ದಿಕ್ಕು ತಪ್ಪುವುದು....! ಎಂದು ಹೇಳಿದ ತಂದೆ.

ತಿ.ನರಸೀಪುರ ಕಸಬಾ ಪಿಎಸಿಎಸ್‌ನಿಂದ ಗ್ರಾಮಗಳನ್ನು ಬಿಡುಗಡೆಗೊಳಿಸಿ

ಪ್ರತ್ಯೇಕ ಸಂಘ ರಚನೆಗೆ ಸದಸ್ಯರ ತೀವ್ರ ವಿರೋಧ

● ಸರ್ವ ಸದಸ್ಯರ ವಿಶೇಷ ಮಹಾಸಭೆಯಲ್ಲಿ ಮಾತಿನ ಚಕಮಕಿ, ತಳ್ಳಾಟ-ನೂಕಾಟ ● ಪ್ರತ್ಯೇಕ ಸಂಘದ ಪರ ಇಬ್ಬರು, ವಿರುದ್ಧ 460 ಸದಸ್ಯರ ಸಹಿ



ಸರ್ವ ಸದಸ್ಯರ ವಿಶೇಷ ಮಹಾಸಭೆಯನ್ನು ಸಂಘದ ಅಧ್ಯಕ್ಷ ಮಲ್ಲಣ್ಣ ಉದ್ಘಾಟಿಸಿದರು.

ತಿ.ನರಸೀಪುರ, ಜ.11– ತಾಲೂಕಿನ ಕಿರಗಸೂರು ಗ್ರಾಪಂ ವ್ಯಾಪ್ತಿಯ ಕೆಲ ಗ್ರಾಮಗಳನ್ನು ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಿಂದ ಬಿಡುಗಡೆಗೊಳಿಸಿ ಪ್ರತ್ಯೇಕ ಸಂಘ ರಚಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಶನಿವಾರ ನಡೆದ ಕಸಬಾ ಪಿಎಸಿಎಸ್ ಸರ್ವ ಸದಸ್ಯರ ವಿಶೇಷ ಮಹಾಸಭೆಯಲ್ಲಿ ತೀವ್ರ ಪರ-ವಿರೋಧದ ಚರ್ಚೆ ನಡೆದು ಬಹುತೇಕ ರೈತರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಪ್ರತ್ಯೇಕ ಸಂಘ ರಚನೆಗೆ ಆಸಕ್ತಿ ವಹಿಸಿದ್ದ ಕೆಲ ಮುಖಂಡರು ಹೊರ ನಡೆದರು.

ತಾಲೂಕಿನ ಕಿರಗಸೂರು ಗ್ರಾಪಂ ವ್ಯಾಪ್ತಿಯ ಬಿಲಿಗೆರೆಹುಂಡಿ, ಕಿರಗಸೂರು, ಹುಣಸೂರು, ಕೂಡ್ಲೂರು, ಮನ್ನೇಹುಂಡಿ ಹಾಗೂ ಡಣಾಯಕನಪುರ ಗ್ರಾಮಗಳನ್ನು ಕಸಬಾ ಪಿಎಸಿಎಸ್ ಕಾರ್ಯ ಕ್ಷೇತ್ರದಿಂದ ಬಿಡುಗಡೆಗೊಳಿಸಿ ಪ್ರತ್ಯೇಕ ಸಂಘ ರಚನೆಗೆ ಸಹಕಾರ ಸಂಘಗಳ ನಿಬಂಧಕರು ಆದೇಶ ನೀಡಿದ ಬೆನ್ನಲ್ಲೇ ಕಸಬಾ ಕೃಷಿ ಪತ್ತಿನ ಸಹಕಾರ ಸಂಘ ಸರ್ವ ಸದಸ್ಯರ ವಿಶೇಷ ಮಹಾಸಭೆ ಆಯೋಜಿಸಿ ಪ್ರತ್ಯೇಕ ಸಂಘ ಬೇಕೆ, ಬೇಡವೇ ಎಂಬ ಅಭಿಪ್ರಾಯ ಸಂಗ್ರಹಕ್ಕೆ ಮುಂದಾಯಿತು.

ಸಭೆಯಲ್ಲಿದ್ದ ಓರ್ವ ಸದಸ್ಯ ಹಾಗೂ ಸದಸ್ಯರಲ್ಲದ ಒಬ್ಬರು ಮಾತ್ರ ಪ್ರತ್ಯೇಕ ಸಂಘ ರಚನೆ ಆಗಬೇಕೆಂಬ ಅಭಿಪ್ರಾಯ ಮಂಡಿಸಿ ಸಹಿ ಹಾಕಿದರೆ, 462 ಸದಸ್ಯರ ಪೈಕಿ 460 ಮಂದಿ ಸದಸ್ಯರು ಸಂಘವನ್ನು ಪ್ರತ್ಯೇಕ ಮಾಡುವುದು ಬೇಡ ಎಂಬ ನಿರ್ಣಯಕ್ಕೆ ಬದ್ಧರಾಗಿ ಸಹಿ ಮಾಡಿದರು. ಇದರಿಂದ ಪ್ರತ್ಯೇಕ ಸಂಘಕ್ಕೆ ಮುಂದಾಗಿದ್ದವರಿಗೆ ನಿರಾಸೆಯಾಯಿತು.

ತಡೆಯಾಜ್ಞೆಗೆ ವಿರೋಧ, ವಾಗ್ವಾದ, ಮಾತಿನ ಚಕಮಕಿ: ಸಭೆ ಆರಂಭಗೊಳ್ಳುತ್ತಿದ್ದಂತೆ ಕಸಬಾದಿಂದ ಗ್ರಾಮಗಳ ಬಿಡುಗಡೆಗೆ ವಿರೋಧ ವ್ಯಕ್ತಪಡಿಸಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದ ಆಡಳಿತ ಮಂಡಳಿ ನಡೆಗೆ ಕೆಲ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಆಡಳಿತ ಮಂಡಳಿ ಹಾಗೂ ಕೆಲ ರೈತರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಒಬ್ಬರನ್ನೊಬ್ಬರು ತಳ್ಳಾಡಿ ನೂಕಾಡಿದ ಪ್ರಸಂಗ ನಡೆದು ಪೊಲೀಸರು ಮಧ್ಯ ಪ್ರವೇಶ ಮಾಡುವ ಪರಿಸ್ಥಿತಿ ನಿರ್ಮಾಣವಾಯಿತು.

ಸಂಘದಿಂದ ಗ್ರಾಮಗಳನ್ನು ಬಿಡುಗಡೆ ಗೊಳಿಸಿ ಪ್ರತ್ಯೇಕ ಸಂಘ ರಚನೆಗೆ ಅವಕಾಶ ಮಾಡಿಕೊಡದೇ ತಡೆಯಾಜ್ಞೆ ತಂದಿರುವ ಆಡಳಿತ ಮಂಡಳಿ ಕ್ರಮ ಸರಿಯಲ್ಲ. ರೈತರಿಗೆ ಅನುಕೂಲ ಕಲ್ಪಿಸಿ ಕೊಡಬೇಕಾದ ಆಡಳಿತ ಮಂಡಳಿಯೇ ರೈತರ ಅಭಿವೃದ್ಧಿಗೆ ಅಡ್ಡಿ ಪಡಿಸುತ್ತಿರುವುದು ಯಾವ ನ್ಯಾಯ ಎಂದು ಕೆಲವರು ಪ್ರಶ್ನಿಸಿದರು. ಸಂಘದಲ್ಲಿ ರಾಜಕೀಯ ಬೆರೆಸುವಲ್ಲಿ ಆಡಳಿತ ಮಂಡಳಿ ಮುಂದಾಗಿದೆ. ಶಾಸಕ ಹೆಚ್.ಸಿ.ಮಹದೇವಪ್ಪ ಅವರ ಸಹಕಾರ ಪಡೆದು ಸರ್ವಾಧಿಕಾರಿ ವರ್ತನೆ ತೋರುತ್ತಿದ್ದೀರಾ ಎಂಬ ಆರೋಪ ಸಭೆಯಲ್ಲಿ ಕೇಳಿ ಬಂತು.

ರೈತರ ಆರೋಪಗಳಿಗೆ ಉತ್ತರಿಸಿದ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಸಂಘದಿಂದ ಗ್ರಾಮಗಳನ್ನು ಬಿಡುಗಡೆಗೊಳಿಸಿ ಪ್ರತ್ಯೇಕ ಸಂಘ ರಚನೆ ಮಾಡಿಕೊಂಡರೆ ನಮ್ಮ ವಿರೋಧ ಇಲ್ಲ. ಆದರೆ ಸಂಘ ರಚನೆ ನಂತರ ಕೆಲ ವರ್ಷಗಳ ತನಕ ಸಂಘ ಅಸ್ತಿತ್ವ ತೋರುವ ತನಕ ರೈತರಿಗೆ ಯಾವುದೇ ಸೌಲಭ್ಯಗಳು ದೊರೆಯುವುದಿಲ್ಲ. ಹಾಗಾಗಿ ರೈತರ ಹಿತದೃಷ್ಟಿಯಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಆದೇಶ ಪ್ರಶ್ನಿಸಿ ತಡೆಯಾಜ್ಞೆ ತರಲಾಗಿದೆಯೇ ಹೊರತು ಪ್ರತ್ಯೇಕ ಸಂಘ ಮಾಡುವ ಪ್ರಕ್ರಿಯೆಗೆ ನಮ್ಮ ವಿರೋಧ ಇಲ್ಲ. ಪ್ರತ್ಯೇಕ ಸಂಘ ಮಾಡಲೇಬೇಕೆಂಬ ಬಯಕೆ ನಿಮ್ಮದಾಗಿದ್ದರೆ, ಸದಸ್ಯರ ಕೋರಂ ಮೂಲಕ ನಿರ್ಧಾರಕ್ಕೆ ಬರೋಣ ಎಂದರು.

ನಿಯಮ ಪಾಲಿಸಿಲ್ಲ: ಬಿಲಿಗೆರೆಹುಂಡಿಯಲ್ಲಿ ಸಂಘ ನೋಂದಾಯಿಸುವ ಬಗ್ಗೆ ಗ್ರಾಮದ ಆಸಕ್ತರ ಸಹಿ ಒಳಗೊಂಡ ಅರ್ಜಿಯನ್ನು ಕಸಬಾ ಸಂಘಕ್ಕೆ ಕಳುಹಿಸಿಕೊಡಬೇಕಾದ ನಿಯಮ ಪಾಲಿಸಿಲ್ಲ. ನಿಯೋಜಿತ ಸಂಘ ಸ್ಥಾಪನೆ ಕುರಿತಂತೆ ವಾರ್ಷಿಕ ಮಹಾಸಭೆ ಕಾರ್ಯಕ್ರಮ ಪಟ್ಟಿಯಲ್ಲಿ ಹಾಕಿ ಎಲ್ಲಾ ಸದಸ್ಯರಿಗೆ ನೋಟಿಸ್ ನೀಡಿಲ್ಲ. ವಾರ್ಷಿಕ ಮಹಾ ಸಭೆಯಲ್ಲಿ ಸದಸ್ಯರು ಉದ್ದೇಶಿತ ಗ್ರಾಮಗಳನ್ನು ಬಿಟ್ಟುಕೊಡುವ ಬಗ್ಗೆ ಅಭಿಪ್ರಾಯ ರೆಕಾರ್ಡ್ ಮಾಡಿ ಸಹಕಾರ ಸಂಘದ ಬೈಲಾ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸಬೇಕು. ಬಿಲಿಗೆರೆಹುಂಡಿಯಲ್ಲಿ ಸಂಘ ಸ್ಥಾಪನೆ ಬಗ್ಗೆ ಆಸಕ್ತರು ಸಭೆ ಸೇರಿ ಗ್ರಾಮ ಸಭೆ ನಡೆಸಿ ಅದರ ನಿಲುವಳಿ ಪ್ರತಿಯನ್ನು ಸಿಡಿಓಗೆ ಕಳುಹಿಸಿ ಅವರಿಂದ ಮುಖ್ಯ ಪ್ರವರ್ತಕರು ಷೇರು ಹಣ ಸಂಗ್ರಹಣೆಗೆ ಅನುಮತಿಗಾಗಿ ಶಿಫಾರಸ್ಸು ಮಾಡಬೇಕು. ಮುಖ್ಯ ಪ್ರವರ್ತಕರು ಷೇರು ಹಣ ಸಂಗ್ರಹಿಸಿ ಎಂಸಿಡಿಸಿಸಿ ಬ್ಯಾಂಕಿನಲ್ಲಿ ಠೇವಣಿ ಮಾಡಿದ ನಂತರ ಉದ್ದೇಶಿತ ಸಂಘದ ನೋಂದಣಿಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಯಾವುದೇ ಮಾರ್ಗಸೂಚಿ ಪಾಲಿಸದೇ ಸಂಘದ ನೋಂದಣಿ ಮಾಡಿರುತ್ತಾರೆ. ಸಂಘದ ನೋಂದಣಿ ಮಾಡುವ ಸಂಬಂಧ ನ.12ರಂದು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರೂ ಸಹಾಯಕ ನಿಬಂಧಕರು ನ.7ರ ಹಿಂದಿನ ದಿನಾಂಕ ನಮೂದಿಸಿ ನ.20ರಂದು ಅಂಚೆ ಮೂಲಕ ರವಾನಿಸಲಾಗಿ ನ.22ರಂದು ಸಂಘಕ್ಕೆ ತಲುಪಿದೆ. ಇಲ್ಲಿ ಹೈಕೋರ್ಟ್ ಮಧ್ಯಂತರ ಆದೇಶ ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ ಎಂದರು.

ಸಂಘದ ಉಪಾಧ್ಯಕ್ಷೆ ನಾಗಮ್ಮ, ನಿರ್ದೇಶಕರಾದ ಎಂ.ನಾಗರತ್ನ, ಟಿ.ಸಿ.ಫಣೀಶ್ ಕುಮಾರ್, ಅಂಗಡಿ ಶೇಖರ್, ಕೆ.ನಂಜುಂಡ ಸ್ವಾಮಿ, ಮಹಾಲಿಂಗಪ್ಪ, ಬಿ.ಚಂದ್ರಮ್ಮ, ದೊಡ್ಡಬಸವಯ್ಯ, ಸಾವಿತ್ರಮ್ಮ, ಪರಶಿವ, ಟಿ.ಎನ್.ಗುರುಪ್ರಸಾದ್, ಪ್ರಭಾರ ಸಿಇಒ ಡಿ.ಎಂ.ಶಿವಕುಮಾರ್, ಟಿಎಪಿಸಿಎಂಎಸ್ ಕಾರ್ಯದರ್ಶಿ ರಘುನಂದನ್, ದಿವ್ಯಶ್ರೀ, ಪುರಸಭಾ ಸದಸ್ಯ ಬಾದಾಮಿ ಮಂಜು, ಪುಟ್ಟರಿ ಗೌಡ, ಫ್ಯಾನ್ಸಿ ಮೋಹನ್, ಪಿ.ಸ್ವಾಮಿನಾಥ್ ಗೌಡ, ಈಶ್ವರ್, ಟಿ.ಎಂ.ನಾಗಣ್ಣ, ಡೈರಿ ಮಾಜಿ ಅಧ್ಯಕ್ಷ ಮಹದೇವ್, ಡೈರಿ ಅಧ್ಯಕ್ಷ ಶೇಖರ್, ಸಿ.ಮಹದೇವ್, ಚಿನ್ನ ಬುದ್ಧಿ, ರಾಜಬುದ್ಧಿ, ಡೈರಿ ಉಪಾಧ್ಯಕ್ಷ ಏಳುಮಲೆ ಮಂಜು, ಕಿರಗಸೂರು ಮಹಾದೇವಸ್ವಾಮಿ, ಡಿ.ಎಲ್. ಮಹದೇವಪ್ಪ, ಸೋಮಣ್ಣನಾಯಕ, ತಿರುಮಕೂಡಲು ಲಕ್ಷ್ಮಣ ಮತ್ತಿತರಿದ್ದರು.

> ನಮ್ಮ ಗ್ರಾಮಕ್ಕೆ ಈಗ ಪ್ರತ್ಯೇಕ ಸಹಕಾರ ಸಂಘ ಮಾಡಲು ಅವಕಾಶ ಸಿಕ್ಕಿದೆ. ಇಲ್ಲಿವರೆಗೆ ನಮ್ಮ ಗ್ರಾಮದ ರೈತರು ಡಣಾಯಕನಪುರ ದಿಂದ ಬಂದು ಇಲ್ಲಿ ವ್ಯವಹರಿಸಿದ್ದಾರೆ. ನೀವು ಸಹ ನಮ್ಮ ಭಾಗದವರೆ ಆಗಿದ್ದು ಅವಕಾಶ ಮಾಡಿಕೊಡಿ. ನ್ಯಾಯಾಲಯ ದಿಂದ ತಡೆಯಾಜ್ಞೆ ತಂದು ಈಗ ರೈತರ ಅಭಿಪ್ರಾಯ ಕೇಳಲು ಮುಂದಾಗಿರುವ ಆಡಳಿತ ಮಂಡಳಿ ನಡೆ ಖಂಡನೀಯ. ಇಲ್ಲಿ ರಾಜಕಾರಣ, ಗುದ್ದಾಟ, ಚೆಲ್ಲಾಟ ಬೇಡ ನಮ್ಮ ಭಾಗದ ರೈತರಿಗೆ ಸರ್ಕಾರದ ಆದೇಶದಂತೆ ಅವಕಾಶ ಮಾಡಿಕೊಡಿ.
> - **ಎಂ.ರಮೇಶ್**, ತಾಪಂ ಮಾಜಿ ಸದಸ್ಯ.

> ಬಿಲಿಗೆರೆಹುಂಡಿಯಲ್ಲಿ ಸಹಕಾರ ಸಂಘ ತೆರೆದರೆ ರೈತರಿಗೆ ಅನುಕೂಲವಾಗುತ್ತದೆ. ನಮ್ಮ ಗ್ರಾಪಂಗೆ ಸಹಕಾರ ನೀಡಿ ಪ್ರತ್ಯೇಕ ಮಾಡಿಕೊಡಿ. ಸಹಕಾರ ಸಂಘದ ಸಹಾಯಕ ನಿಬಂಧಕರೂ ಸಹ ಆದೇಶ ನೀಡಿದ್ದಾರೆ. ಆದೇಶ ಪಾಲನೆ ಮಾಡಿ
> - **ಮಹೇಶ್**, ತಾಲೂಕು ಕುರುಬರ ಸಂಘದ ಅಧ್ಯಕ್ಷ.

> ನಮಗೆ ಯಾವುದೇ ರಾಜಕೀಯ ಬೇಡ. ಗ್ರಾಮಗಳನ್ನು ಕಸಬಾದಿಂದ ಪ್ರತ್ಯೇಕ ಮಾಡುವ ಪ್ರಕ್ರಿಯೆ ಸರಿಯಲ್ಲ. ಇದರಿಂದ ರೈತರಿಗೆ ಸಮಸ್ಯೆ ಆಗಲಿದೆ. ಈವರೆಗೆ ಕಸಬಾ ಸಂಘದಿಂದ ನಮಗೆ ಯಾವುದೇ ತೊಂದರೆಯಾಗಿಲ್ಲ, ಹಾಗಾಗಿ ಪ್ರತ್ಯೇಕ ಸಂಘದ ಅವಶ್ಯಕತೆ ಇಲ್ಲ.
> - **ಸುಂದರಸ್ವಾಮಿ**, ರೈತ.

ಇಂದು ಜಿಲ್ಲಾ ಮಟ್ಟದ 'ದೇಹದಾರ್ಢ್ಯ ಸ್ಪರ್ಧೆ'



ಸುದ್ದಿಗೋಷ್ಠಿಯಲ್ಲಿ ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ನಂಜನಗೂಡು, ಜ.11– ಕಲೆ, ಸಾಹಿತ್ಯ, ಕ್ರೀಡೆಗಳ ತವರೂರಾಗಿರುವ ನಂಜನಗೂಡಿನಲ್ಲಿ ಜ.12ರಂದು ಸಂಜೆ 5 ಗಂಟೆಗೆ ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಮೃತ್ಯುಂಜಯ ಜಿಮ್ ಫಿಟ್ನೆಸ್ ವತಿಯಿಂದ ಇದೇ ಪ್ರಥಮ ಬಾರಿಗೆ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಜಿಮ್ ವ್ಯವಸ್ಥಾಪಕ ಪುನೀತ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಡೆಯುವ ಕಾರ್ಯಕ್ರಮವನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಲಿದ್ದಾರೆ. ಶಾಸಕ ದರ್ಶನ್ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ, ಶಾಸಕರಾದ ಅನಿಲ್, ಹೆಚ್.ಎಂ.ಗಣೇಶ್‌ಪ್ರಸಾದ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ ಸೇರಿದಂತೆ ತಾಲೂಕಿನ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿವಿಧೆಡೆಗಳಿಂದ ಸ್ಪರ್ಧಿಗಳು ಆಗಮಿಸಲಿದ್ದು, ಕ್ರೀಡಾಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಮಾರಂಭ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮೃತ್ಯುಂಜಯ ಜಿಮ್ ಫಿಟ್ನೆಸ್ ವ್ಯವಸ್ಥಾಪಕರಾದ ಜಿಮ್ ಸುಧಿ, ರಘು, ಪುನೀತ್ ಉಪಸ್ಥಿತರಿದ್ದರು.

ಬಂಜೆತನ, ಮುಟ್ಟಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ

ಮೈಸೂರು, ಜ. 11– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜ. 18 ರವರೆಗೆ ಬಂಜೆತನ, ಮುಟ್ಟಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9980760076, ದೂ. 0821-2548231 ಸಂಪರ್ಕಿಸಬಹುದು.

ಕ್ಯಾತನಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸನ್ಮಾನ



ಹೆಚ್.ಡಿ.ಕೋಟೆ ತಾಲೂಕಿನ ಕ್ಯಾತನಹಳ್ಳಿ ಡೈರಿ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ನೂತನ ಅಧ್ಯಕ್ಷ ಕೆ.ಪಿ.ಚೆಲುವರಾಜು ಹಾಗೂ ಉಪಾಧ್ಯಕ್ಷ ಕೆ.ಗಿರೀಶ್ ಅವರನ್ನು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಕೆಪಿಸಿಸಿ ಹಿಂದುಳಿದ ವರ್ಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಬೈಪಾಸ್ ಮಂಜುನಾಥ್, ಕೆ.ಸಿ.ಪುಟ್ಟೇಗೌಡ, ಮಡಿವಾಳ ಬೀರೇಶ್, ಎಲ್.ಕುಮಾರ್ ಅಭಿನಂದಿಸಿದರು. ಈ ವೇಳೆ ನಿರ್ದೇಶಕರಾದ ಕೆ.ಎಸ್.ಕಲ್ಯಾಣ ಕುಮಾರ್, ಜಯಮ್ಮ ರಾಜೇಗೌಡ, ಜಯಮ್ಮ ಮನೋಹರ್, ಕುಮಾರ್, ಬಸವರಾಜು, ಕೃಷ್ಣಮೂರ್ತಿ, ರಾಮಚಂದ್ರ, ಬಸಪ್ಪ, ಮುಖಂಡರಾದ ಬಸಪ್ಪ, ಚೇರ್ಮನ್ ಮಹದೇವ, ಕಮಲಾಕ್ಷ, ಪಟೇಲರ ಗಿರೀಶ್, ಅಯ್ಯ ಗೋವಿಂದ, ಸಿದ್ದರಾಜು ಇದ್ದರು.

ಭೂ ಸುರಕ್ಷಾ ಯೋಜನೆ ಗಣಕೀಕರಣಕ್ಕೆ ಚಾಲನೆ



ಭೂ ಸುರಕ್ಷಾ ಯೋಜನೆ ಗಣಕೀಕರಣಕ್ಕೆ ಶಾಸಕ ಅನಿಲ್ ಚಾಲನೆ ನೀಡಿದರು.

ಸರಗೂರು, ಜ.11– ಪಟ್ಟಣದ ತಾಲೂಕು ಕಚೇರಿಯಲ್ಲಿ ಭೂ ಸುರಕ್ಷಾ ಯೋಜನೆ ಗಣಕೀಕರಣಕ್ಕೆ ಶಾಸಕ ಅನಿಲ್ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ರಾಜ್ಯ ಸರ್ಕಾರದ ಮಹತ್ವದ ಯೋಜನೆಗಳಲ್ಲಿ ಭೂ ಸುರಕ್ಷಾ ಯೋಜನೆಯೂ ಒಂದಾಗಿದ್ದು, ಇಂದು ರಾಜ್ಯಾದ್ಯಂತ ಭೂ ಸುರಕ್ಷಾ ಯೋಜನೆ ಗಣಕೀಕರಣ ಕಾರ್ಯ ಲೋಕಾರ್ಪಣೆಯಾಗಿದೆ. ಇದರಿಂದ ದುಸ್ಥಿತಿಯಲ್ಲಿರುವ ಭೂ ದಾಖಲೆಗಳನ್ನು ಡಿಜಿಟಲ್ ಮಾದರಿಗೆ ವರ್ಗಾಯಿಸಿ ದಾಖಲೆಗಳನ್ನು ಶಾಶ್ವತವಾಗಿ ಕಾಪಾಡಲು ಸಹಾಯವಾಗಲಿದೆ. ರೈತರಿಗೆ ಈ ದಾಖಲೆಗಳು ಆರ್‌ಟಿಸಿ ಮಾದರಿ ದೊರೆಯಲಿದ್ದು, ಭೂ ದಾಖಲೆಗಾಗಿ ಜನರು ಅಲೆಯುವುದು ತಪ್ಪಲಿದೆ. ಅಗತ್ಯ ದಾಖಲೆಗಳನ್ನು ಜನರಿಗೆ ವಿತರಿಸಲು ರಾಜ್ಯ ಸರ್ಕಾರ ಈ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿ, ಹಳೆಯ ಭೂ ದಾಖಲೆಗಳ ಗಣಕೀಕರಣದಿಂದ ನಿಮ್ಮ ದಾಖಲೆಗಳ ಸುರಕ್ಷತೆ ಮತ್ತು ಸುಲಭ ಲಭ್ಯತೆ ಗ್ಯಾರಂಟಿಯಾಗಿದ್ದು, ಇದರಿಂದ ತಿದ್ದಲು, ಕಳವು ಅಸಾಧ್ಯ. ತಂತ್ರಜ್ಞಾನದಿಂದ ಜನರಿಗೆ ಅನುಕೂಲವಾಗಲಿದೆ ಎಂದರು. ಕಾರ್ಯಕ್ರಮದಲ್ಲಿ ಗ್ರೇಡ್-2 ತಹಸೀಲ್ದಾರ್ ಪರಶಿವಮೂರ್ತಿ, ಉಪ ತಹಸೀಲ್ದಾರ್ ಸುನೀಲ್, ಶಿರಸ್ತೇದಾರರಾದ ಮುಜೀಬ್ ರೆಹಮಾನ್, ಶ್ರೀನಿವಾಸ್ ಹಾಗೂ ಕಂದಾಯ ಇಲಾಖಾಧಿಕಾರಿಗಳು, ಸಿಬ್ಬಂದಿ ವರ್ಗ, ಸಾರ್ವಜನಿಕರು ಹಾಜರಿದ್ದರು.

ನಾಳೆಯಿಂದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ



> ಈ ಬಾರಿ ತಿಬ್ಬಾದೇವಿ ಜಾತ್ರೆ ಸಂಕ್ರಾಂತಿ ಹಬ್ಬದಂದು ಜರುಗಲಿದ್ದು, ಅಮ್ಮನವರ ಉತ್ಸವಗಳಿಗೆ ಮತ್ತಷ್ಟು ಮೆರುಗು ಸಿಗಲಿದೆ. ಹೀಗಾಗಿ ಅಮ್ಮನವರ ಜಾತ್ರೆಗೆ ಆಗಮಿಸುವ ಭಕ್ತರಿಗೆ ಮೂಲಸೌಕರ್ಯ ಒದಗಿಸಬೇಕಿದೆ.
> -**ಗೌಡರ ಎಂ.ಪಿ.ಬಾಯ ಕುಮಾರ್**, ಉದ್ಯಮಿ.

ಮೂಗೂರು, ಜ.11– ಹಳೇ ಮೈಸೂರು ಭಾಗದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮೂಗೂರಿನಲ್ಲಿ ಜ.13ರಿಂದ 17ರವರೆಗೆ ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ನಡೆಯಲಿದೆ.

ಮೂಗೂರು ಚಿಗುರು ಎಂದೇ ಪ್ರಸಿದ್ಧಿ ಪಡೆದ ಅಮ್ಮನವರ ದಿವ್ಯ ಶಕ್ತಿಯಿಂದ ಧಾರ್ಮಿಕ ಸುಕ್ಷೇತ್ರವಾಗಿಯೂ ಅಷ್ಟೇ ಖ್ಯಾತಿ ಪಡೆದಿದೆ. ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸುವ ತಿಬ್ಬಾದೇವಿ ಎಂದು ಜನಜನಿತವಾಗಿ, ನಂಬಿದ ಭಕ್ತರ ಕೈ ಬಿಡದ, ಇಷ್ಟಾರ್ಥ ಪೂರೈಸುವ, ಸಂಕಷ್ಟ ಕೊನೆಗಾಣಿಸುವ ಜಗನ್ಮಾತೆಯಾಗಿ ಮೂಗೂರಿನಲ್ಲಿ ನೆಲೆಗೊಂಡಿರುವ ಅಮ್ಮನವರ ಅದ್ಧೂರಿ ಜಾತ್ರೆ ಆಚರಣೆಗೆ ಈಗಾಗಲೇ ಪೂರ್ವ ಸಿದ್ಧತಾ ಸಭೆ ನಡೆಸಿದ್ದು, ಸಕಲ ಸಿದ್ಧತೆ ಪೂರ್ಣಗೊಂಡಿದೆ.

ಜ.3ರಂದು ಹಸ್ತಾನ ಅಂಕುರಾರ್ಪಣೆ ಮೂಲಕ ಜಾತ್ರಾ ಕಾರ್ಯಕ್ರಮಗಳಿಗೆ ಚಾಲನೆ ದೊರೆತಿದ್ದು, ಜ.10ರಂದು ವಧೆ ಉತ್ಸವ, ರಾತ್ರಿ ಕಣಿಯರ ಮಂಟಪದಲ್ಲಿ ಪೂಜೆ ಉತ್ಸವ, 11ರಂದು ಶೇಷ, ಪಕ್ಷಿ ವಾಹನೋತ್ಸವ, 12ರಂದು ಸಿಂಹ ವಾಹನೋತ್ಸವ ಹಾಗೂ ಚಂದ್ರ ಮಂಡಲ ಉತ್ಸವ, 13 ರಂದು (ಮೂಗೂರು ಬಂಡಿ) ರುದ್ರಾಕ್ಷಿ ಮಂಟಪದ ಉತ್ಸವ, 14 ರಂದು ಹೂವಿನ ಪಲ್ಲಕ್ಕಿಯಲ್ಲಿ ತೆಪ್ಪೋತ್ಸವ, 15ರಂದು ಶ್ರೀಅಮ್ಮನವರ ಮಹಾ ರಥೋತ್ಸವ ನಂತರ ರಾತ್ರಿ ಆನೆವಾಹನೋತ್ಸವ, 16 ಅಮ್ಮನವರು ಹೊಸಹಳ್ಳಿಗೆ ದಯಮಾಡಿ ಚಿಗುರು ಕಡಿಯುವುದು. ನಂತರ ಮೂಗೂರಿಲ್ಲಿ ಕುದುರೆ ಹಾಗೂ ಮಂಟಪದಲ್ಲಿ ಉಯ್ಯಾಲೆ ಉತ್ಸವ, 17ರಂದು ಪಲ್ಲಕ್ಕಿಯಲ್ಲಿ ವೈಮಾಳಿಗೆ ಉತ್ಸವ, ರಾತ್ರಿ ದೇಗುಲದಲ್ಲಿ ಪೂರ್ಣಾಭಿಷೇಕ ವಿಶೇಷ ಪೂಜೆ, ಮಹಾಮಂಗಳಾರತಿಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

ಶ್ರೀಕೋದಂಡರಾಮ ಬ್ರಹ್ಮ ರಥೋತ್ಸವ: ಪೂಜಾ ಕಾರ್ಯ ಆರಂಭ

ಚುಂಚನಕಟ್ಟೆ, ಜ.11– ಸಾಲಿಗ್ರಾಮ ತಾಲೂಕಿನ ಪುರಾಣ ಪ್ರಸಿದ್ಧ ಚುಂಚನಕಟ್ಟೆ ಶ್ರೀಕೋದಂಡರಾಮ ಬ್ರಹ್ಮ ರಥೋತ್ಸವದ ಅಂಗವಾಗಿ ಪೂಜಾ ಕೈಂಕರ್ಯಗಳು ಅಧಿಕೃತವಾಗಿ ಶನಿವಾರದಿಂದ ಆರಂಭವಾದವು. ಜ.12ರಂದು ಸಂಜೆ 6 ಗಂಟೆಗೆ ದೇವಾಲಯದ ಆವರಣದಲ್ಲಿ ಸೀತಾರಾಮ ಕಲ್ಯಾಣೋತ್ಸವ ನಡೆಯಲಿದೆ. ಜ.13, 14 ರಂದು ನಿತ್ಯೋತ್ಸವ, ಗರುಡೋತ್ಸವ ಸೇರಿದಂತೆ ವಿಶೇಷ ಪೂಜೆ ನಡೆಯಲಿದ್ದು, ಜ.15ರಂದು ಬೆಳಗ್ಗೆ 12 ಗಂಟೆಗೆ ಸಲ್ಲುವ ಮೀನ ಲಗ್ನದಲ್ಲಿ ರಥಾರೋಹಣ ಮತ್ತು ಬ್ರಹ್ಮ ರಥೋತ್ಸವ ಜರುಗಲಿದ್ದು, ಜ.17ರಂದು ಸೀತಾರಾಮರ ತೆಪ್ಪೋತ್ಸವ ಕಾವೇರಿ ನದಿಯಲ್ಲಿ ಜರುಗಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ದೇವಾಲಯದ ಪಾರುಪತ್ತೇದಾರ ಯತಿರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.27, ಅಮಿತ್ ಶಾ ವಿರುದ್ಧ ಬೃಹತ್ ಪ್ರತಿಭಟನೆ



ದಲಿತ, ರೈತ, ಪ್ರಗತಿಪರ ಸಂಘಟನೆಗಳ ಮುಖಂಡರು ಸಭೆ ನಡೆಸಿದರು.

ಹುಣಸೂರು, ಜ.11– ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಜ.27 ರಂದು ಬೃಹತ್ ಪ್ರತಿಭಟನೆ ನಡೆಸಲು ವಿವಿಧ ಸಂಘಟನೆಗಳ ಮುಖಂಡರು ತೀರ್ಮಾನಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ದಲಿತ, ರೈತ, ಪ್ರಗತಿಪರ ಸಂಘಟನೆಗಳ ಮುಖಂಡರು ಅಂದು ಅಮಿತ್ ಶಾ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನ ಕೈಗೊಂಡರು.

ಮುಖಂಡ ಆನಂದಸ್ವಾಮಿ ಮಾತನಾಡಿ, ಪ್ರತಿಭಟನೆಗೆ ತಾಲೂಕಿನ ಯುವ, ದಲಿತ, ರೈತ, ಆದಿವಾಸಿ, ಪ್ರಗತಿಪರ ಸಂಘಟನೆಗಳು ಹಾಗೂ ಅಂಬೇಡ್ಕರ್ ಅಭಿಮಾನಿಗಳು ಬೆಂಬಲ ನೀಡಲಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್, ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ದೇವರಾಜ್, ರಾಮಕೃಷ್ಣ, ಬಸವಲಿಂಗಯ್ಯ, ವರದರಾಜು, ಕುನ್ನೇಗೌಡ, ಜೆ.ಮಾದೇವ, ಅಪ್ಪಣ್ಣ, ಸ್ವಾಮಿ, ಬಸವರಾಜ್, ದರ್ಶನ್ ಸೇರಿದಂತೆ 40ಕ್ಕೂ ಹೆಚ್ಚು ಮುಖಂಡರು ಭಾಗವಹಿಸಿದ್ದರು.

ಇಂದು ಬೃಹತ್ ಆರೋಗ್ಯ ಶಿಬಿರ

ಹೆಚ್.ಡಿ.ಕೋಟೆ, ಜ.11– ತಾಲೂಕಿನ ಹಿರೇಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಜ.12ರಂದು ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಲಯನ್ಸ್ ಕ್ಲಬ್ ತಾಲೂಕು ಅಧ್ಯಕ್ಷ ಕಬಿನಿ ಭಾಸ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಕನ್ನಡ ರಾಷ್ಟ್ರೀಯ ಶಿಕ್ಷಣ ಒಕ್ಕೂಟ, ಆರೋಗ್ಯ ಭಾರತಿ, ಲಯನ್ಸ್ ಕ್ಲಬ್ ಆಶ್ರಯದಲ್ಲಿ ಅಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದ್ದು, ಮೈಸೂರಿನ ನಾರಾಯಣ ಆಸ್ಪತ್ರೆಯ ಡಾ.ಚಂದ್ರಶೇಖರ್ ತಂಡ ವಿವಿಧ ಆರೋಗ್ಯ ತಪಾಸಣೆ ಮಾಡಿ, ಉಚಿತವಾಗಿ ಔಷಧಿ ವಿತರಿಸಲಿದ್ದಾರೆ.

ಮಕ್ಕಳ ತಜ್ಞರು, ಹೃದಯ ತಜ್ಞರು, ಕ್ಯಾನ್ಸರ್ ತಜ್ಞರು, ಮೂಳೆ ತಜ್ಞರು, ಸ್ತ್ರೀರೋಗ ತಜ್ಞರು ಸಹ ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ನಂತರ ರಿಯಾಯಿತಿ ದರದಲ್ಲಿ ಕನ್ನಡಕ ನೀಡಲಾಗುತ್ತದೆ. ಮಧು ಮೇಹ (ಸಕ್ಕರೆ ಖಾಯಿಲೆ), ರಕ್ತದೊತ್ತಡ, ಜ್ವರ, ಕೆಮ್ಮು, ನೆಗಡಿ, ಮಲಬದ್ಧತೆ ಸೇರಿದಂತೆ ವಿವಿಧ ರೋಗಗಳಿಗೆ ಉಚಿತ ಔಷಧಿ ನೀಡಲಾಗುತ್ತದೆ. ಸಾರ್ವಜನಿಕರು ಶಿಬಿರವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಯುವ ದಿನ ಆಚರಣೆ



ಹುಣಸೂರಿನ ಶಾಸ್ತ್ರಿ ವಿದ್ಯಾ ಸಂಸ್ಥೆ ರಾಷ್ಟ್ರೀಯ ಯುವ ದಿನ ಆಚರಿಸುವ ಮೂಲಕ ಸ್ವಾಮಿ ವಿವೇಕಾನಂದರ ಸ್ಮರಣೆ ಮಾಡಿದರು. ಇದೇ ವೇಳೆ ನಗರದ ಮುಖ್ಯ ಬೀದಿಯಲ್ಲಿ ಬೃಹತ್ ಮೆರವಣಿಗೆ ನಡೆಸಲಾಯಿತು. ವಿದ್ಯಾಸಂಸ್ಥೆಯ 1800 ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಇತರರು ಪಾಲ್ಗೊಂಡಿದ್ದರು.

ಛಾಯಾಗ್ರಾಹಕರಿಗೆ ಆರ್ಥಿಕ ನೆರವು ಒದಗಿಸಲು ಮನವಿ



ಕ್ಯಾಲೆಂಡರ್ ಅನ್ನು ರೈತ ಮುಖಂಡ ಶಿವಶಂಕರ್ ಬಿಡುಗಡೆಗೊಳಿಸಿದರು.

ತಿ.ನರಸೀಪುರ, ಜ.11– ಪ್ರಸ್ತುತ ಛಾಯಾಗ್ರಾಹಕರಿಗೆ ಆದಾಯದ ಕೊರತೆ ಕಾಡುತ್ತಿದ್ದು, ಸರ್ಕಾರ ಈ ಅಸಂಘಟಿತ ವಲಯಕ್ಕೆ ಅಗತ್ಯ ಆರ್ಥಿಕ ನೆರವು ಒದಗಿಸುವಂತೆ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್ ತಿಳಿಸಿದರು.

ಪಟ್ಟಣದ ಮರೀಗೌಡ ಸ್ಮಾರಕ ಭವನದಲ್ಲಿ ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಸಂಘದಿಂದ ಹಮ್ಮಿಕೊಂಡಿದ್ದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿದ್ದಂತೆ ಛಾಯಾಗ್ರಹಕರಿಗೆ ಉದ್ಯೋಗದಲ್ಲಿ ಹಿನ್ನಡೆಯಾಗಿದೆ. ಜೊತೆಗೆ ನಿರೀಕ್ಷಿತ ಆದಾಯ ಕೂಡ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ವೃತ್ತಿ ನಂಬಿ ಬದುಕುತ್ತಿರುವವರಿಗೆ ಕಷ್ಟಗಳು ಎದುರಾಗುತ್ತಿದೆ. ಆದ್ದರಿಂದ ಸರ್ಕಾರ ಇಂತಹ ವೃತ್ತಿಪರ ಸಮುದಾಯಕ್ಕೆ ಅಗತ್ಯ ಸೌಲಭ್ಯ ಒದಗಿಸುವಂತೆ ಒತ್ತಾಯಿಸಿದರು.

ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಎಸ್.ಕೆ.ಶಿವಕುಮಾರ್ ಮಾತನಾಡಿ, ನಮ್ಮ ವೃತ್ತಿ ಹಿಂದಿನಂತಿಲ್ಲ. ಇಂದು ಬಹಳ ಸ್ಪರ್ಧೆ ಇದೆ. ಈ ನಡುವೆ ಮೊಬೈಲ್ ಬಳಕೆ ಹೆಚ್ಚಾಗುತ್ತಿದೆ. ಹಾಗಾಗಿ ಯಾವುದೇ ಕಾರ್ಯಕ್ರಮಕ್ಕೆ ನಮಗೆ ಅವಕಾಶ ಸಿಗದಾಗಿದೆ. ಇದರಿಂದ ಈ ವೃತ್ತಿ ನಂಬಿ ಬದುಕುತ್ತಿರುವ ಛಾಯಾಚಿತ್ರಕಾರರ ಜೀವನ ಕಷ್ಟವಾಗಿದ್ದು, ಪರ್ಯಾಯ ಉದ್ಯೋಗ ಹುಡುಕುವಂತಾಗಿದೆ. ಸರ್ಕಾರ ನಮಗೆ ಅಗತ್ಯ ಸಾಲ ಸೌಲಭ್ಯ ಸೇರಿದಂತೆ ಇನ್ನಿತರ ಆರ್ಥಿಕ ನೆರವು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ ಕ್ಯಾಲೆಂಡರ್ ಅನ್ನು ರೈತ ಮುಖಂಡ ಕಿರಗಸೂರು ಶಿವಶಂಕರ್ ಬಿಡುಗಡೆಗೊಳಿಸಿದರು. ಕಬ್ಬು ಬೆಳೆಗಾರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಪ್ರಸಾದ್ ನಾಯಕ್, ತಾಲೂಕು ಛಾಯಾಗ್ರಾಹಕ ಸಂಘದ ಉಪಾಧ್ಯಕ್ಷ ಎಂ.ಎಸ್. ಪ್ರಕಾಶ್, ಕಾರ್ಯದರ್ಶಿ ಶಾಂತಕುಮಾರ್ ಆರ್., ಸಹಕಾರ ಕಾರ್ಯದರ್ಶಿ ಗೋವರ್ಧನ, ಖಜಾಂಚಿ ನಂಜುಂಡ ಆರಾಧ್ಯ, ಜಿಲ್ಲಾ ಸಂಚಾಲಕ ಆರ್.ಪಿ. ಶಿವಕುಮಾರ್, ಜಿಲ್ಲಾ ಸಂಘಟನಾ ಸಂಯೋಜಕರು ರಘುನಂದನ್, ಜಿಲ್ಲಾ ಸಂಘಟನಾ ಸಂಚಾಲಕರು ಶ್ಯಾಂ, ಸಂಘಟನಾ ಕಾರ್ಯದರ್ಶಿ ಮಂಜುನಾಥ್, ದಿವ್ಯಾನಂದ, ನವೀನ್ ಕುಮಾರ್, ಸಹನಾ ಮಂಜು, ಮನೋಜ್ ಕುಮಾರ್, ನಟರಾಜ, ಆರ್.ನಂಜುಂಡಸ್ವಾಮಿ, ಮಧುಸೂದನ್, ಹೆಚ್.ಎನ್.ಧನಂಜಯ, ನಾಗೇಂದ್ರ, ಮಲ್ಲೇಶ್, ತಲಕಾಡು ಕುಮಾರ್. ಹೇಮಂತ್, ರವಿ, ಲೋಕಿ, ಚೇತನ್, ಮನು ನಿಂಗರಾಜ್ ಇತರರಿದ್ದರು.

ನಾಯಕರ ಸಂಘಕ್ಕೆ ನಾಗರಾಜು ಅಧ್ಯಕ್ಷ



ನಾಯಕರ ಸಂಘದ ಅಧ್ಯಕ್ಷರಾಗಿ ನಾಗರಾಜು ಆಯ್ಕೆಯಾದರು.

ನಂಜನಗೂಡು, ಜ.11– ತಾಲೂಕು ನಾಯಕರ ಸಂಘದ ನೂತನ ಅಧ್ಯಕ್ಷರಾಗಿ ಹೆಡತಲೆ ನಾಗರಾಜು ಲಾಟರಿ ಮೂಲಕ ಆಯ್ಕೆಯಾದರು.

ಕಳೆದ 3 ತಿಂಗಳಿಂದ ತಾಲೂಕು ನಾಯಕರ ಸಂಘದ ಅಧ್ಯಕ್ಷ ಸ್ಥಾನಕ್ಕೆ 11 ಜನ ಆಕಾಂಕ್ಷಿಗಳಿದ್ದು, ಅಧ್ಯಕ್ಷ ಸ್ಥಾನದ ಆಯ್ಕೆ ಗೊಂದಲದ ಗೂಡಾಗಿತ್ತು. ಸಮಾಜದ ಮುಖಂಡರು ಸಭೆ ಮೇಲೆ ಸಭೆ ನಡೆಸಿದ ಬಳಿಕ ನಗರದ ಗೌರಿಘಟ್ಟ ಬೀದಿಯಲ್ಲಿರುವ ನಾಯಕ ಸಮುದಾಯ ಭವನದಲ್ಲಿ ನಾಯಕ ಸಮುದಾಯದ ಮುಖಂಡರಾದ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಮೈಸೂರು ಚಾಮರಾಜನಗರ ಜಿಲ್ಲಾ ನಾಯಕ ಸಮುದಾಯದ ಉಪಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ಸಭೆ ಸೇರಿ ಮಾತುಕತೆ ನಡೆಸಿ ಅಂತಿಮವಾಗಿ ಕಣದಲ್ಲಿದ್ದ ದೊರೆಸ್ವಾಮಿ ನಾಯಕ ಮತ್ತು ನಾಗರಾಜು ನಡುವೆ ಪೈಪೋಟಿ ಎದುರಾಗಿ ನಾಗರಾಜು ಲಾಟರಿ ಮೂಲಕ ಆಯ್ಕೆಯಾದರು. ಗೌರವಾಧ್ಯಕ್ಷರಾಗಿ ಶಿವನಂಜನಾಯಕ, ಖಜಾಂಚಿಯಾಗಿ ಸುರೇಂದ್ರ ಆಯ್ಕೆಯಾದರು. ಕಾರ್ಯದರ್ಶಿ ಸ್ಥಾನವನ್ನು ಅಧ್ಯಕ್ಷರ ಆಯ್ಕೆಗೆ ಬಿಡಲಾಯಿತು.

ನೂತನ ಅಧ್ಯಕ್ಷ ಹೆಡತಲೆ ನಾಗರಾಜು ಮಾತನಾಡಿ, ತಾಲೂಕಿನ ನಾಯಕ ಸಮುದಾಯವನ್ನು ಸಂಘಟಿಸುವ ಮೂಲಕ ಸಮಾಜದ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುತ್ತೇನೆ ಎಂದರು.

ಇದೇ ವೇಳೆ ಮುಖಂಡರಾದ ದೊರೆಸ್ವಾಮಿ ನಾಯಕ, ಮಹೇಶ್, ರವೀಂದ್ರ, ಮಹದೇವನಾಯಕ ಸೇರಿದಂತೆ ಹಲವರಿದ್ದರು.

ಮೈಸೂರು ಮಿತ್ರ



ಜೆಡಿಎಸ್ ಸಭೆಗೆ ನಾನು ಹೋಗಲ್ಲ..!

●ಪಕ್ಷದ ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಪ್ರತಿಕ್ರಿಯೆ ●ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ ●ಇತ್ತೀಚೆಗೆ ಯಾವ ಸಭೆಗೂ ಹೋಗಲು ಸಾಧ್ಯವಾಗುತ್ತಿಲ್ಲ ●2028ರ ಮುಖ್ಯಮಂತ್ರಿ ಹೇಳಿಕೆ ಬರೀ ಭ್ರಮೆ

ಮೈಸೂರು, ಜ.11(ಎಂಟಿವೈ)– ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ನನ್ನ ಗುರಿಯಾಗಿದ್ದು, ಅದಕ್ಕಾಗಿ ಓಡಾಡುತ್ತಿರುವುದರಿಂದ ಪಕ್ಷದ ಸಭೆ ಹಾಗೂ ನಿಖಿಲ್ ಕುಮಾರಸ್ವಾಮಿ ಅವರನ್ನು ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಮಾಡಲು ಕರೆದಿರುವ ಸಭೆಗೆ ಹಾಜರಾಗುತ್ತಿಲ್ಲ ಎಂದು ಮಾಜಿ ಸಚಿವ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಿಖಿಲ್ ಕುಮಾರಸ್ವಾಮಿ ಆಯ್ಕೆ ಸಂಬಂಧ ಕರೆದಿರುವ ಸಭೆಗೆ ಹೋಗುತ್ತಿಲ್ಲ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಎರಡು ಬಾರಿ ಸಿಎಂ ಆಗಿ ಅನುಭವ ಇರುವ ಹೆಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್‌ಗೆ ಯಾರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎಂದು ನಿರ್ಧರಿಸುತ್ತಾರೆ. ಎಲ್ಲರೂ ಸೇರಿ ಯಾರ ಹೆಸರನ್ನು ಘೋಷಣೆ ಮಾಡುತ್ತಾರೋ ಅವರು ಪಕ್ಷದ ಅಧ್ಯಕ್ಷರಾಗುತ್ತಾರೆ ಎಂದರು.

ಜೆಡಿಎಸ್ ಸಭೆ, ಸಂಘಟನಾ ಸಭೆಗೆ ಗೈರು ಹಾಜರಾಗುತ್ತಿರುವುದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಾಗಿಲ್ಲ. ನನ್ನ ಗುರಿ ಕ್ಷೇತ್ರದ ಅಭಿವೃದ್ಧಿಯೇ ಆಗಿದೆ. ಆ ಕಾರಣಕ್ಕಾಗಿ ಓಡಾಡುತ್ತಿದ್ದೇನೆ. ಆ ಕಾರಣದಿಂದ ಪಕ್ಷದ ಸಭೆಗಳಿಗೆ ಹೋಗಲು ಆಗುತ್ತಿಲ್ಲ. ದಿಶಾ ಸಭೆಗೆ ನಮ್ಮ ನಾಯಕರು ಬಂದ ವೇಳೆ ಹೋಗಬೇಕಿತ್ತು. ಅದಕ್ಕೂ ಕೆಲವು ಕಾರಣಗಳಿಂದ ಹೋಗಲು ಸಾಧ್ಯವಾಗಲಿಲ್ಲ. ಇದನ್ನು ಹೊರತುಪಡಿಸಿದರೆ ಯಾವುದೇ ಬೇಸರ ಇಲ್ಲ. ನನ್ನ ಮಗ ಶಾಸಕ ಜಿ.ಡಿ.ಹರೀಶ್ ಗೌಡ ಹಾಗೂ ನಿಖಿಲ್ ಕುಮಾರಸ್ವಾಮಿ ಇಬ್ಬರು ಸ್ನೇಹಿತರು. ಹೀಗಾಗಿ, ಅವರು ನಿಖಿಲ್ ರಾಜ್ಯಾಧ್ಯಕ್ಷರಾಗಲಿ ಎನ್ನುವ ಆಸೆ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ತಪ್ಪೇನು ಎಂದು ಪ್ರಶ್ನಿಸಿದರು.

ಮುಂದಿನ ಸಿಎಂ ಹೇಳಿಕೆಂಯೇ ಭ್ರಮೆ: 2028ಕ್ಕೆ ಸಿಎಂ ಆಗುತ್ತೇವೆ ಎಂಬ ಸಚಿವ ಸತೀಶ್ ಜಾರಕಿಹೊಳಿ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈ ರೀತಿ ಯಾರೇ ಹೇಳಿದ್ದರೂ ಅದು ಕೇವಲ ಭ್ರಮೆ. 2028ಕ್ಕೆ ಏನಾಗುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಸಿಎಂ ಆಗಬೇಕಾದರೆ ಜನ ಮತ ಹಾಕಬೇಕು. ಶಾಸಕರು ಸಿಎಂ ಆಯ್ಕೆ ಮಾಡಬೇಕು. ಸುಮ್ಮನೆ ಸಿಎಂ ಆಗುತ್ತೇನೆ ಅನ್ನೋದು ಭ್ರಮೆ. ಸದ್ಯದ ಪರಿಸ್ಥಿತಿಯಲ್ಲಿ 2028ಕ್ಕೆ ಸಿಎಂ ಯಾರಾಗುತ್ತಾರೆ ಎಂದು ಹೇಳಲಿಕ್ಕೆ ನಾನು ಜ್ಯೋತಿಷಿ ಅಲ್ಲ ಎಂದರು.

ಜನಾಭಿಪ್ರಾಯ ಹೇಳಿಕೆಯಾಗಿತ್ತು: ಈ ಹಿಂದೆ ಯಡಿಯೂರಪ್ಪ, ಕುಮಾರಸ್ವಾಮಿ, ಸಿದ್ದರಾಮಯ್ಯ ಸಿಎಂ ಆಗುತ್ತಾರೆ ಎಂದು ಜನರ ಅಭಿಪ್ರಾಯವನ್ನು ಸಂಗ್ರಹಿಸಿ ಹೇಳಿದ್ದೆ. ಈಗ ಸಿಎಂ ಯಾರಾಗ್ತಾರೆ ಎಂದು ಹೇಳುವ ಪರಿಸ್ಥಿತಿ ಇಲ್ಲ. ನನಗೆ ಸಿಎಂ ಆಗುವ ಆಸೆಯೂ ಇಲ್ಲ. ಸಿಎಂ ಆಗಲು ಖರ್ಚು ಮಾಡಬೇಕಾದಷ್ಟು ಹಣವೂ ನನ್ನ ಬಳಿ ಇಲ್ಲ. ಕೆಲವರು ಸಿಎಂ ಆಗುವ ಕಾರಣಕ್ಕೆ ಹಣ ಖರ್ಚು ಮಾಡಿ ಕಾಯುತ್ತಿದ್ದಾರೆ. ಆ ಶಕ್ತಿ ನನ್ನ ಬಳಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಹಣ ಕೊಟ್ಟು ಖರೀದಿಸಿದ್ದಾರೆ: ಮುಡಾದಲ್ಲಿ 50:50 ಅನುಪಾತದಲ್ಲಿ ಸೈಟ್ ಪಡೆದವರಿಂದ, ನನ್ನ ಪುತ್ರಿ– ಅಳಿಯ ವೈಟ್ ಮನಿ ಕೊಟ್ಟು ಸೈಟ್ ಖರೀದಿಸಿದ್ದಾರೆ. ಇದರಲ್ಲಿ ತಪ್ಪು ಮಾಡಿದ್ದರೆ ತನಿಖೆಯಾಗಲಿ. ಈ ಬಗ್ಗೆ ನನಗೆ ಗೊತ್ತಿರಲಿಲ್ಲ, ಇಂದು ಬೆಳಗ್ಗೆ ಮಗಳಿಗೆ ಕರೆ ಮಾಡಿ ವಿಚಾರ ತಿಳಿದುಕೊಂಡೆ ಎಂದರು.

ಈ ಪ್ರಕರಣವನ್ನು ಲೋಕಾಯುಕ್ತರಿಗೆ ಕೊಟ್ಟಿದ್ದರೆ ಸಂತೋಷ. ತಪ್ಪು ಮಾಡಿದ್ದರೆ ತನಿಖೆ ಪ್ರಾರಂಭಿಸಲಿ. ಸೈಟ್ ಪಡೆದು ಮಾರಾಟ ಮಾಡಿದವರಿಗೆ ಅದರ ಹಕ್ಕಿದೆ. ನನ್ನ ಮಗಳು ಯಾರ ಜೊತೆ ಮಾತನಾಡಿ ಸೈಟ್ ತೆಗೆದುಕೊಂಡಿದ್ದಾರೋ ನನಗೆ ಗೊತ್ತಿಲ್ಲ ಎಂದು ಹೇಳಿದರು.

ಸ್ನೇಹಮಯಿ ಕೃಷ್ಣನಮ್ಮ ಹುಡುಗನೇ. ಒಳ್ಳೆಯ ಕೆಲಸ ಮಾಡುತ್ತಿದ್ದಾನೆ. ರಾಜಕಾರಣಿಗಳು, ಅಧಿಕಾರಿಗಳು ತಪ್ಪು ಮಾಡಿದರೆ ಅವರ ವಿರುದ್ಧ ಒಳ್ಳೆಯ ಕೆಲಸ ಮಾಡುತ್ತಾನೆ. ಅವನಿಗೆ ಯಶಸ್ಸು ಸಿಗಲಿ ಎಂದು ಶುಭ ಕೋರಿದರು.

ಬೆದರಿಕೆ ಪತ್ರ– ಜೈಲಿಗೆ ಹಾಕಿ

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿಗೆ ಬೆದರಿಕೆ ಪತ್ರ ಬಂದಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಯಾರೇ ಪತ್ರ ಬರೆದಿದ್ದರೂ ಅವರನ್ನು ಜೈಲಿಗೆ ಹಾಕಬೇಕು. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು. ಅವರಿಗೆ ತಕ್ಕ ಶಿಕ್ಷೆ ಆಗಬೇಕು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು. ಜನಪ್ರತಿನಿಧಿಗಳಾದವರಿಗೆ ಸಹನೆ, ತಾಳ್ಮೆ ಇರಬೇಕು. ಸಾರ್ವಜನಿಕವಾಗಿ ನಮ್ಮ ವಿರುದ್ಧ ಟೀಕೆ ಮಾಡಿದಾಗ ಅದನ್ನು ಸಹಿಸಿಕೊಳ್ಳುವ ಸಹನೆ ಇರಬೇಕು ಎಂದರು.

ಮಾಜಿ ಸಚಿವ ವಿನಯ್ ಕುಲಕರ್ಣಿಗೆ ಐಶ್ವರ್ಯಗೌಡ ಉಡುಗೊರೆಯಾಗಿ ಕೊಟ್ಟಿದ್ದ ಕಾರು ಸೀಜ್

ಬೆಂಗಳೂರು, ಜ.11– ಡಿ.ಕೆ.ಸುರೇಶ್ ತಂಗಿ ಹೆಸರಿನಲ್ಲಿ ಐಶ್ವರ್ಯಗೌಡ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ವಿನಯ್ ಕುಲಕರ್ಣಿಗೆ ಉಡುಗೊರೆ ರೂಪದಲ್ಲಿ ಐಶ್ವರ್ಯ ನೀಡಿದ್ದರು ಎನ್ನಲಾದ ಕಾರನ್ನು ಪೊಲೀಸರು ಸೀಜ್ ಮಾಡಿದ್ದಾರೆ.

ಐಶ್ವರ್ಯಗೌಡ ಹಾಗೂ ವಿನಯ್ ಕುಲಕರ್ಣಿ ನಡುವೆ ವ್ಯವಹಾರಿಕ ಸಂಬಂಧ ಇದೆ ಎಂಬುದಕ್ಕೆ ಸಾಕ್ಷಿಯಾಗಿದ್ದ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಹಿಂದೆ ಐಶ್ವರ್ಯಗೌಡ ಬಳಿ ಮೂರು ಐಷಾರಾಮಿ ಕಾರುಗಳನ್ನು ಪೊಲೀಸರು ಸೀಜ್ ಮಾಡಿದ್ದರು. ಐಶ್ವರ್ಯ ಪತಿ ಹರೀಶ್ ಹೆಸರಿನಲ್ಲಿದ್ದ ಆಡಿ, ಬಿಎಂಡಬ್ಲ್ಯು ಹಾಗೂ ಫಾರ್ಚುನರ್ ಕಾರುಗಳನ್ನು ಸೀಜ್ ಮಾಡಲಾಗಿತ್ತು. ಇದೀಗ ಮತ್ತೊಂದು ಕಾರನ್ನು ವಶಪಡಿಸಿಕೊಂಡಿದ್ದಾರೆ.

ಕೆಎ03 ಎನ್ಎನ್ 8181 ಸಂಖ್ಯೆಯ 60 ಲಕ್ಷ ಮೌಲ್ಯದ ಮರ್ಸಿಡಿಸ್ ಬೆಂಜ್ ಕಾರನ್ನು ಸೀಜ್ ಮಾಡಲಾಗಿದೆ. ವಂಚನೆ ಮಾಡಿದ್ದ ಹಣದಿಂದ ಕಾರು ಖರೀದಿಸಿದ್ದ ಐಶ್ವರ್ಯಗೌಡ, ಅದನ್ನು ಗಿಫ್ಟ್ ರೂಪದಲ್ಲಿ ಮಾಜಿ ಸಚಿವ ವಿನಯ್ ಕುಲಕರ್ಣಿಗೆ ನೀಡಿದ್ದಳು ಎನ್ನಲಾಗಿದೆ.

ಕೃಷಿ ರಸಪ್ರಶ್ನೆ ಕಾರ್ಯಕ್ರಮ

ಮೈಸೂರು, ಜ. 11– ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಕೃಷಿ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿದೆ. ಇದಕ್ಕೆ ಪೂರ್ವಭಾವಿ ಲಿಖಿತ ಕೃಷಿ ರಸಪ್ರಶ್ನೆ ಪರೀಕ್ಷೆಯನ್ನು ಜ. 16 ರಂದು ಬೆಳಗ್ಗೆ 11 ಗಂಟೆಗೆ ಐಸಿಎಆರ್ ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಆಯೋಜಿಸಲಾಗಿದೆ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 10 ಅಭ್ಯರ್ಥಿಗಳನ್ನು ಅಂತಿಮವಾಗಿ ಜಾತ್ರಾ ಸಮಯದಲ್ಲಿ ನಡೆಯುವ ರಸಪ್ರಶ್ನೆ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿ ವಿಜೇತರಿಗೆ ಬಹುಮಾನ ನೀಡಲಾಗುವುದು. ಆಸಕ್ತರು ಜ. 15 ರೊಳಗೆ ತಮ್ಮ ಹೆಸರು ಮತ್ತು ವಿಳಾಸ ಕಳುಹಿಸಿ ಕೊಡಲು ಕೋರಲಾಗಿದೆ ಮಾಹಿತಿಗೆ ದೂ. 8762840430 ಸಂಪರ್ಕಿಸಬಹುದು.

ನೆಲಸಮ ಪ್ರಸ್ತಾವನೆ ಕುರಿತು ಸುಪ್ರೀಂಕೋರ್ಟ್‌ನಲ್ಲಿ ಎಸ್‌ಎಲ್‌ಪಿ

ಪಾಳು ಬಿದ್ದಿರುವ ಲ್ಯಾನ್ಸ್‌ಡೌನ್ ಕಟ್ಟಡ ಪರಿಶೀಲಿಸಿದ ರಾಜ್ಯದ ಮಾಜಿ ಅಡಿಷನಲ್ ಅಡ್ವೊಕೇಟ್ ಜನರಲ್

ಮೈಸೂರು, ಜ.11(ಆರ್‌ಕೆ)–ಕರ್ನಾಟಕದ ಮಾಜಿ ಅಡಿಷನಲ್ ಅಡ್ವೊಕೇಟ್ ಜನರಲ್ (AAG) ದೇವದತ್ ಕಾಮತ್ ಅವರು ಇಂದು ಪಾಳು ಬಿದ್ದಿರುವ ಮೈಸೂರಿನ ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ನೆಲಸಮಗೊಳಿಸಿ ಅದೇ ಮಾದರಿಯಲ್ಲಿ ಹೊಸದಾಗಿ ಕಟ್ಟಡ ನಿರ್ಮಿಸಬೇಕೆಂಬ ಪ್ರಸ್ತಾವನೆ ಸಂಬಂಧ ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿ ಸ್ಪೆಷಲ್ ಲೀವ್ ಪಿಟಿಷನ್ (SLP) ಹಾಕಿರುವುದರಿಂದ ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕಾದ ನಿಮಿತ್ತ ದೇವದತ್ ಕಾಮತ್ ಅವರು ಲ್ಯಾನ್ಸ್‌ಡೌನ್ ಕಟ್ಟಡವನ್ನು ಖುದ್ದು ವೀಕ್ಷಿಸಿದರು.

ಬೆಂಗಳೂರಲ್ಲಿ ನಿನ್ನೆಯಷ್ಟೇ ಸಭೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಭಾಗದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಂದ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆದಿದ್ದರು. ಈ ಸಂಬಂಧ ರಾಜ್ಯ ಉಚ್ಛ ನ್ಯಾಯಾಲಯವು ಸರ್ಕಾರದ ಪರ ತೀರ್ಪು ನೀಡಿದ್ದು, ಪ್ರಕರಣದ ಅರ್ಜಿದಾರರು ಸುಪ್ರೀಂಕೋರ್ಟ್‌ನಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ಫೈಲ್ ಮಾಡಿದ್ದಾರೆ ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದರು.

ಈ ಸಂಬಂಧ ಸುಪ್ರೀಂಕೋರ್ಟ್ ಹಿರಿಯ ವಕೀಲರಾಗಿರುವ ರಾಜ್ಯದ ಮಾಜಿ ಅಡಿಷನಲ್ ಅಡ್ವೊಕೇಟ್ ಜನರಲ್ ದೇವದತ್ ಕಾಮತ್ ಅವರಿಗೆ ದಾಖಲಾತಿ ಒದಗಿಸಿ ಪ್ರಕರಣ ಇತ್ಯರ್ಥಗೊಳಿಸುವಂತೆ ಸಿದ್ದರಾಮಯ್ಯ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಕಾಮತ್ ಅವರನ್ನು ಸಂಪರ್ಕಿಸಿದ ಅಧಿಕಾರಿಗಳಿಗೆ ಬೇರೆ ಕೆಲಸದ ಮೇಲೆ ನಾನು ಮೈಸೂರಿಗೆ ಬರುತ್ತಿದ್ದೇನೆ. ಆ ವೇಳೆ ಸ್ಥಳಕ್ಕೆ ಭೇಟಿ ನೀಡಿ ಕಟ್ಟಡ ವೀಕ್ಷಿಸುತ್ತೇನೆ ಎಂದು ಹೇಳಿದ್ದರು.

ಈ ತಿಂಗಳು ಸುಪ್ರೀಂಕೋರ್ಟ್‌ನಲ್ಲಿ ಎಸ್‌ಎಲ್‌ಪಿ ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದು, 2023ರ ಆಗಸ್ಟ್‌ನಲ್ಲಿ ರಾಜ್ಯ ಉಚ್ಛ ನ್ಯಾಯಾಲಯ ನೀಡಿರುವ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಸಂಬಂಧ ರಾಜ್ಯ ಸರ್ಕಾರದ ಪರವಾಗಿ ಕಾಮತ್ ಅವರು ವಾದ ಮಂಡಿಸಲಿದ್ದಾರೆ. ಹಳೆಯ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಲ್ಯಾನ್ಸ್‌ಡೌನ್ ಮತ್ತು ದೇವರಾಜ ಮಾರುಕಟ್ಟೆ ಪಾರಂಪರಿಕ ಕಟ್ಟಡಗಳ ಸ್ಥಿತಿಗತಿ ಬಗ್ಗೆ ಸಮಗ್ರ ಮಾಹಿತಿಯೊಂದಿಗೆ ಪ್ರಮಾಣ ಪತ್ರ ಸಲ್ಲಿಸುವಂತೆ ಈ ಹಿಂದಿನ ಆದೇಶದಲ್ಲಿ ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಲ್ಯಾನ್ಸ್‌ಡೌನ್ ಕಟ್ಟಡಕ್ಕೆ ಕಾಮತ್ ಅವರು ಭೇಟಿ ನೀಡಿದ್ದ ವೇಳೆ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧು, ಉಪ ಆಯುಕ್ತ (ಕಂದಾಯ) ಸೋಮಶೇಖರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್, ಮುಖ್ಯ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಹಾಗೂ ಇತರರು ಉಪಸ್ಥಿತರಿದ್ದು, ಮಾಹಿತಿ ನೀಡಿದರು.



ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿಗಳೂ ಆದ, ಕರ್ನಾಟಕದ ಮಾಜಿ ಅಡಿಷನಲ್ ಅಡ್ವೊಕೇಟ್ ಜನರಲ್ ದೇವದತ್ ಕಾಮತ್ (ಎಡದಿಂದ ನಾಲ್ಕನೆಯವರು), ಶನಿವಾರ ಮೈಸೂರಿನ ಲ್ಯಾನ್ಸ್‌ಡೌನ್ ಕಟ್ಟಡ ಪರಿಶೀಲಿಸಿದರು.

ಕಾರವಾರದ ಕಾರ್ಖಾನೆಯಲ್ಲಿ ರಾಸಾಯನಿಕ ಸೋರಿಕೆ, 18 ಕಾರ್ಮಿಕರು ಅಸ್ವಸ್ಥ

ಕಾರವಾರ, ಜ.11– ಕಾರ್ಖಾನೆಯಲ್ಲಿ ರಾಸಾಯನಿಕ ಸೋರಿಕೆಯಿಂದ 18 ಕಾರ್ಮಿಕರು ಅಸ್ವಸ್ಥಗೊಂಡಿರುವಂತಹ ಘಟನೆ ಜಿಲ್ಲೆಯ ಕಾರವಾರ ತಾಲೂಕಿನ ಬಿಣಗಾ ಬಳಿಯ ಆದಿತ್ಯ ಬಿರ್ಲಾ ಗ್ರೂಪ್‌ನ ಕಾಸ್ಟಿಕ್ ಸೋಡಾ ಉತ್ಪಾದಿಸುವ ಗ್ರಾಸಿಮ್ ಇಂಡಸ್ಟ್ರೀಸ್‌ನಲ್ಲಿ ನಡೆದಿದೆ. ಕಾರವಾರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ನೀಲಕಂಠ, ಜಹನ್ನೂರು, ಕಮಲೇಶ್ ವರ್ಮಾ, ನಂದಕಿಶೋರ್, ದೀಪು, ಸೃಜನ್, ನಜೀದುಲ್ಲಾ, ಬೇಜನ್ ಕುಮಾರ್, ಕಿಶನ್ ಕುಮಾರ್, ಅಜೀಜ್, ಮೋಹಿತ್ ವರ್ಮಾ ಸೇರಿದಂತೆ ಕರ್ನಾಟಕ, ಉತ್ತರಪ್ರದೇಶ ಮತ್ತು ಬಿಹಾರ ಮೂಲದ 18 ಕಾರ್ಮಿಕರು ಅಸ್ವಸ್ಥಗೊಂಡಿದ್ದಾರೆ. ಸದ್ಯ ಸ್ಥಳಕ್ಕೆ ಡಿವೈಎಸ್‌ಪಿ ಗಿರೀಶ್ ಹಾಗೂ ಪೊಲೀಸರ ತಂಡ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ್ದು, ಕಾರ್ಮಿಕರಿಂದ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಕೆಲ ದಿನದ ಹಿಂದೆ ಕ್ಲೋರಿನ್ ಸೋರಿಕೆಯಿಂದ ಬಿಣಗಾ ಗ್ರಾಮದ ನಿವಾಸಿ ನಾಗರಾಜ್ ಎಂಬುವವರು ಮೃತಪಟ್ಟಿದ್ದರು.

ಅನಾಹುತ ಸಂಭವಿಸಿದರೂ ಕಂಪನಿ ಆಡಳಿತ ಮಂಡಳಿ ಎಚ್ಚೆತ್ತುಕೊಂಡಿಲ್ಲ. 2 ಗಂಟೆಗಳಿಂದ ಯಥಾವತ್ತಾಗಿ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಲ್ಲರನ್ನೂ ಹೊರಕಳಿಸಿ ಕೆಲಕಾಲ ಕಂಪನಿ ಸ್ಥಗಿತಗೊಳಿಸದೆ ನಿರ್ಲಕ್ಷ್ಯವಹಿಸಿದೆ. ರಾಸಾಯನಿಕ ಒಳಗೆ ಆವರಿಸಿರುವ ಹಿನ್ನೆಲೆ ಕಾರ್ಮಿಕರು ಅಸ್ವಸ್ಥಗೊಂಡಿದ್ದಾರೆ.

ಸ್ಥಳೀಯರಿಂದ ಪ್ರತಿಭಟನೆ: ಇನ್ನು ಘಟನೆಗೆ ಕಂಪನಿಯ ಬೇಜವಾಬ್ದಾರಿ ಖಂಡಿಸಿ ಸ್ಥಳೀಯರಿಂದ ಪ್ರತಿಭಟನೆ ಮಾಡಲಾಗಿದೆ. ನಗರಸಭೆ ಸದಸ್ಯರಾದ ಶ್ವೇತಾ, ಪ್ರಕಾಶ್ ಮತ್ತು ರುಕ್ಮಿಣಿ ಗೌಡ ನೇತೃತ್ವದಲ್ಲಿ ಪ್ರತಿಭಟನೆ ಮಾಡಿದ್ದು, ಕಾರ್ಖಾನೆಯಲ್ಲಿರುವ ಎಲ್ಲಾ ಸಿಬ್ಬಂದಿಯನ್ನು ಹೊರ ಕಳುಹಿಸುವಂತೆ ಒತ್ತಾಯಿಸಿದ್ದಾರೆ. ತಹಶೀಲ್ದಾರ್ ಎನ್.ಎಫ್. ನೊರೋನ್ಹಾ ನೇತೃತ್ವದಲ್ಲಿ ಪ್ರತಿಭಟನಾಕಾರರ ಮನವೊಲಿಕೆ ಮಾಡಲಾಗಿದೆ.

ಇನ್ಫೋಸಿಸ್ ಆವರಣದಲ್ಲಿ ಆತಂಕ ಸೃಷ್ಟಿಸಿರುವ ಚಿರತೆ

●ಚಿರತೆ ಪತ್ತೆಗೆ ಪಣತೊಟ್ಟ ಅರಣ್ಯ ಇಲಾಖೆ; 120 ಸಿಬ್ಬಂದಿ, 12 ತಂಡದಲ್ಲಿ ಪೂರ್ಣ ಪ್ರಮಾಣದ ಕೂಂಬಿಂಗ್ ●ಜ.26ರವರೆಗೆ ಇನ್ಫೋಸಿಸ್ ಸಿಬ್ಬಂದಿಗೆ 'ವರ್ಕ್ ಫ್ರಂ ಹೋಮ್' ಸೂಚನೆ ●ಹಾಸ್ಟೆಲ್‌ನಲ್ಲಿದ್ದ 7 ಸಾವಿರ ಟ್ರೈನಿ, ಇನ್ನಿತರ ಸಿಬ್ಬಂದಿ ತೆರವು

ಮೈಸೂರು, ಜ.11(ಎಂಟಿವೈ)– ಮೈಸೂರಿನ ಇನ್ಫೋಸಿಸ್ ಸಂಸ್ಥೆ ಆವರಣದಲ್ಲಿ ಕಾಣಿಸಿಕೊಂಡಿದ್ದ ಚಿರತೆ ಅರಣ್ಯ ಮತ್ತು ಇನ್ಫೋಸಿಸ್ ಸಿಬ್ಬಂದಿಗೆ ತಲೆನೋವಾಗಿ ಪರಿಣಮಿಸಿದ್ದು, ಚಿರತೆ ಸೆರೆಗೆ ಅರಣ್ಯ ಇಲಾಖೆಯ 120 ಸಿಬ್ಬಂದಿಗಳೊಂದಿಗೆ ಪೂರ್ಣ ಪ್ರಮಾಣದ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದೆ.

ಚಿರತೆಯ ಜಾಡು ಪತ್ತೆಗಾಗಿ ಡಿ.31 ರಿಂದಲೂ ಅರಣ್ಯ ಇಲಾಖೆ ಇನ್ಫೋಸಿಸ್ ಆವರಣದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದರೂ, ಚಿರತೆ ಸುಳಿವು ಪತ್ತೆಯಾಗಿಲ್ಲ. ಈ ನಡುವೆ ಎರಡು ಬಾರಿ ಮಾತ್ರ ಸಿಸಿ ಕ್ಯಾಮರಾದಲ್ಲಿ ಚಿರತೆ ದೃಶ್ಯ ಸೆರೆಯಾಗಿತ್ತು. ಕಳೆದ ನಾಲ್ಕು ದಿನಗಳಿಂದ ಚಿರತೆ ಸುಳಿವು ಸೆರೆಯಾಗಿಲ್ಲ. ಇದೀಗ ಇನ್ಫೋಸಿಸ್ ಆವರಣವನ್ನು ಇಂಚು ಬಿಡದೆ ಜಾಲಾಡಲು ಅರಣ್ಯ ಇಲಾಖೆ ನಿರ್ಧರಿಸಿದ್ದು, ಅದಕ್ಕೆ ಇನ್ಫೋಸಿಸ್ ಆಡಳಿತ ಮಂಡಳಿ ಪೂರಕವಾಗಿ ಸ್ಪಂದಿಸಿದೆ.

ಈಗಾಗಲೇ ಇನ್ಫೋಸಿಸ್ ಆವರಣದಲ್ಲಿ 22 ಕ್ಯಾಮರಾ ಟ್ರ್ಯಾಪ್, ಥರ್ಮಲ್ ಡ್ರೋನ್ ಸಮೀಕ್ಷೆ, ಎರಡು ಸಾಮಾನ್ಯ ಬೋನ್, ಒಂದು ಕ್ಯಾಟಲ್ ಪೆನ್‌ಕೇಜ್ ಅಳವಡಿಸಿ, ಚಿರತೆ ಪತ್ತೆಗೆ ಬಲೆ ಬೀಸಲಾಗಿತ್ತು. ಇದರೊಂದಿಗೆ ಇನ್ಫೋಸಿಸ್ ಆವರಣಕ್ಕೆ ಸಂಪರ್ಕ ಕಲ್ಪಿಸುವ ಚರಂಡಿಗಳಿಗೆ ಮೆಶ್ ಅಳವಡಿಸಿ, ಚಿರತೆ ಹೆಜ್ಜೆ ಪತ್ತೆಗಾಗಿ ಮರಳನ್ನು ಹಾಸಲಾಗಿತ್ತು. ಅಲ್ಲದೆ, ಇನ್ಫೋಸಿಸ್ ಆವರಣದಲ್ಲಿರುವ ಎಲ್ಲಾ ಕಟ್ಟಡಗಳ ಸೆಲ್ಲರ್ ಬಾಗಿಲನ್ನು ಬಂದ್ ಮಾಡಿ, ಚಿರತೆ ಅಡಗಿಕೊಳ್ಳಲು ಸಾಧ್ಯವಾಗದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಆದರೂ ಚಿರತೆ ಪತ್ತೆಯಾಗಿರಲಿಲ್ಲ. ಇದರಿಂದ ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿಸಿದ್ದರೆ, ಇನ್ಫೋಸಿಸ್ ಸಿಬ್ಬಂದಿಗೆ ಆತಂಕ ತಲೆದೋರಿತ್ತು.

ರಜೆ ಮುಂದುವರಿಕೆ, ಹಾಸ್ಟೆಲ್ ವಾಸಿಗಳು ಮನೆಗೆ ವಾಪಸ್: ಡಿ.31ರ ಮುಂಜಾನೆ ಇನ್ಫೋಸಿಸ್ ಆವರಣದಲ್ಲಿ ಚಿರತೆ ಓಡಾಟ ಕಂಡು ಬಂದಿತ್ತು. ಇದರಿಂದ ಹೊರಗಿನಿಂದ ಬರುವ ಸಿಬ್ಬಂದಿಗೆ ವರ್ಕ್ ಫ್ರಂ ಹೋಮ್ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಆದರೆ, ಇನ್ಫೋಸಿಸ್ ಆವರಣದ ಹಾಸ್ಟೆಲ್‌ಗಳಲ್ಲಿ 6 ಸಾವಿರ ಟ್ರೈನಿ ಸಿಬ್ಬಂದಿ ಸೇರಿದಂತೆ ಸುಮಾರು 7 ಸಾವಿರ ಸಿಬ್ಬಂದಿ ವಾಸವಿದ್ದರು. ಈ ಸಿಬ್ಬಂದಿಗಳು ಹಾಸ್ಟೆಲ್‌ನಿಂದ ಬಿಗಿ ಭದ್ರತೆಯಲ್ಲಿ ಆಡಳಿತ ಮಂಡಳಿ ಸೂಚಿಸಿದ ಮಾರ್ಗದಲ್ಲಿಯೇ ಪ್ರತಿದಿನಸಾಗಿ ಕರ್ತವ್ಯ ನಿಭಾಯಿಸುತ್ತಿದ್ದರು. ಅಲ್ಲದೆ, ರಾತ್ರಿ ವೇಳೆ ಅನಗತ್ಯವಾಗಿ ಹೊರಗೆ ಬರದಂತೆ ಹಾಗೂ ಪಾರ್ಕ್‌ನಲ್ಲಿ ವಿರಮಿಸಲು ಹೋಗದಂತೆ ಸೂಚನೆ ನೀಡಿ, ಕೆಲ ಕಟ್ಟೆಚ್ಚರದ ನಿಯಮ ಪಾಲಿಸುವಂತೆ ಹಾಸ್ಟೆಲ್ ವಾಸಿಗಳಿಗೆ ಸೂಚನೆ ನೀಡಲಾಗಿತ್ತು. ಆದರೆ, ಚಿರತೆ ಸುಳಿವು ಪತ್ತೆಯಾಗದ ಹಿನ್ನೆಲೆಯಲ್ಲಿ ಟ್ರೈನಿಗಳು ಸೇರಿದಂತೆ ಎಲ್ಲಾ ಸಿಬ್ಬಂದಿಗೆ ಜ.26ರವರೆಗೆ ವರ್ಕ್ ಫ್ರಂ ಹೋಮ್ ವ್ಯವಸ್ಥೆ ವಿಸ್ತರಿಸಲಾಗಿದೆ. ಅಲ್ಲದೆ, ಹಾಸ್ಟೆಲ್‌ನಲ್ಲಿದ್ದ ಎಲ್ಲಾ ಟ್ರೈನಿ ಸಿಬ್ಬಂದಿಗಳನ್ನು ಮನೆಗೆ ವಾಪಸ್ ಹೋಗುವಂತೆ ಸೂಚನೆ ನೀಡಲಾಗಿದ್ದು, ಅವರ ಪ್ರಯಾಣಕ್ಕಾಗಿ ಇಂದು ಮತ್ತು ನಾಳೆ (ಜ.12) ಇನ್ಫೋಸಿಸ್ ಮುಂಭಾಗದಿಂದ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ.

ಜಾಲಾಡಿದ ಸಿಬ್ಬಂದಿ: ಇನ್ಫೋಸಿಸ್ ಆವರಣದಲ್ಲಿ ಕಣ್ಣಾಮುಚ್ಚಾಲೆಯಂತೆ ಆಟವಾಡುತ್ತಿರುವ ಚಿರತೆ ಪತ್ತೆ ಅಥವಾ ಸೆರೆಗೆ ಅರಣ್ಯ ಇಲಾಖೆ ಮೇಲೆ ಒತ್ತಡ ಹೆಚ್ಚಾಗಿದ್ದು, ಇಂದಿನಿಂದ ಚಿರತೆ ಕಾರ್ಯಪಡೆ, ಆನೆ ಕಾರ್ಯ ಪಡೆ, ಮೈಸೂರು ಪ್ರಾದೇಶಿಕ ವಿಭಾಗದ ಒಟ್ಟು 70 ಸಿಬ್ಬಂದಿ ಹಾಗೂ ಇನ್ಫೋಸಿಸ್‌ನ 70 ಸಿಬ್ಬಂದಿ ಒಳಗೊಂಡ 12 ಜಂಟಿ ತಂಡಗಳನ್ನು ರಚಿಸಿ, ಇನ್ಫೋಸಿಸ್ ಆವರಣದಲ್ಲಿ ಪೂರ್ಣ ಪ್ರಮಾಣದ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದೆ. ಅಲ್ಲದೆ, ಎರಡು ಡ್ರೋನ್ ಬಳಸಿ ಏರಿಯಲ್ ಸರ್ಚ್ ಮಾಡಲಾಗಿದೆ. ಅರಣ್ಯ ಇಲಾಖೆಯ ಪಶುವೈದ್ಯಕೀಯ ತಂಡವೂ ಪರಿಶೀಲನೆ ನಡೆಸಿದೆ. ಇನ್ಫೋಸಿಸ್ ಕ್ಯಾಂಪಸ್‌ಗೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿಯೂ ಕಾರ್ಯಾಚರಣೆ ಮುಂದುವರಿಸಲು ನಿರ್ಧರಿಸಲಾಗಿದೆ. ಚಿರತೆ ಸುಳಿವು ಪತ್ತೆ ಮಾಡಲು ಚಿರತೆ ಕಾರ್ಯಪಡೆ ಒಂದು ತಂಡವನ್ನು ಕ್ಯಾಂಪಸ್‌ನಲ್ಲಿಯೇ ನಿಯೋಜಿಸಲಾಗಿದ್ದು, ಕ್ಯಾಮೆರಾ ಟ್ರ್ಯಾಪ್ ಹಾಗೂ ಸಿಸಿಟಿವಿ ಕ್ಯಾಮರಾ ಮಾನಿಟರಿಂಗ್ ಮುಂದುವರಿಸಲಾಗುತ್ತಿದೆ. ಸ್ಥಳಕ್ಕೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಭೇಟಿ ನೀಡಿ, ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದು, ಸಲಹೆ ನೀಡಿದರು. ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಕೆ. ಎನ್.ಬಸವರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ಚಿರತೆಗಾಗಿ ಅರಣ್ಯ ಸಿಬ್ಬಂದಿ ಶನಿವಾರವೂ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ತೊಡಗಿರುವುದು.

ನೂತನ ಕಾಯ್ದೆಯಂತೆ ಹೊಸ ಸಿಇಸಿ ನೇಮಕ: ಸುಪ್ರೀಂಕೋರ್ಟ್‌ನತ್ತ ಎಲ್ಲರ ಚಿತ್ತ



ನವದೆಹಲಿ, ಜ.11– ಕೇಂದ್ರ ಸರ್ಕಾರ 2023ರ ಡಿಸೆಂಬರ್‌ನಲ್ಲಿ ಜಾರಿಗೊಳಿಸಿರುವ ನೂತನ ಕಾಯ್ದೆ ಪ್ರಕಾರವೇ ನೂತನ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಸೇರಿದಂತೆ ಆಯೋಗದ ಇತರ ಆಯುಕ್ತರ ನೇಮಕವಾಗಲಿದೆ.

ಹಾಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರಿಗೆ ಫೆಬ್ರುವರಿ 18ರಂದು 65 ವರ್ಷ ತುಂಬಲಿರುವ ಕಾರಣ, ಅಂದು ಅವರು ನಿವೃತ್ತಿ ಹೊಂದುವರು. ಈ ಕಾರಣಕ್ಕೆ ನೂತನ ಸಿಇಸಿ ನೇಮಕವು ಹೊಸ ಕಾಯ್ದೆ ಪ್ರಕಾರವೇ ನಡೆಯಲಿದೆ.

ಆದರೆ, ಆಯೋಗದ ಆಯುಕ್ತರನ್ನು ನೇಮಕ ಮಾಡುವುದಕ್ಕಾಗಿ ಜಾರಿಗೊಳಿಸಿರುವ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಫೆ.4 ರಂದು ನಡೆಸಲಿದೆ. ಹೀಗಾಗಿ, ಸುಪ್ರೀಂ ಕೋರ್ಟ್ ಪ್ರಕಟಿಸುವ ನಿರ್ಧಾರದತ್ತ ಈಗ ಎಲ್ಲರ ದೃಷ್ಟಿ ನೆಟ್ಟಿದೆ.

ಸಿಇಸಿ ಹಾಗೂ ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಈ ಮೊದಲು ಜಾರಿಯಲ್ಲಿದ್ದ ಸಮಿತಿಯ ಸದಸ್ಯರ ಪೈಕಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಕೂಡ ಒಬ್ಬರಾಗಿರುತ್ತಿದ್ದರು. ನೂತನ ಕಾಯ್ದೆ ಪ್ರಕಾರ, ಸಿಜೆಐ ಅವರು ಸಮಿತಿ ಸದಸ್ಯರಲ್ಲ. ಈ ಕಾರಣಕ್ಕೆ, ನೂತನ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದೆ.

ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕಾತಿ, ಸೇವಾ ನಿಬಂಧನೆಗಳು ಮತ್ತು ಅಧಿಕಾರ ವ್ಯಾಪ್ತಿ) ಕಾಯ್ದೆಯು 2023ರ ಡಿಸೆಂಬರ್‌ನಲ್ಲಿ ಜಾರಿಗೆ ಬಂದಿದೆ.

ನೂತನ ಕಾಯ್ದೆಯಂತೆ, ಪ್ರಧಾನಿ ನೇತೃತ್ವದ ಸಮಿತಿ ಆಯುಕ್ತರ ನೇಮಕ ಮಾಡಲಿದೆ. ಪ್ರಧಾನಿ ಸೂಚಿಸುವ ಕೇಂದ್ರ ಸಚಿವರೊಬ್ಬರು ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ಈ ಸಮಿತಿಯಲ್ಲಿ ಇರಲಿದ್ದಾರೆ.

ನೂತನ ಸಿಇಸಿ ಅಥವಾ ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಹೆಸರನ್ನು ಈ ಸಮಿತಿ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುವುದು.

ನೂತನ ಕಾಯ್ದೆ ಜಾರಿಗೆ ಬಂದ ನಂತರ ಜ್ಞಾನೇಶ ಕುಮಾರ್ ಹಾಗೂ ಎಸ್.ಎಸ್.ಸಂಧು ಅವರನ್ನು ಚುನಾವಣಾ ಆಯುಕ್ತರನ್ನಾಗಿ 2024ರ ಮಾರ್ಚ್‌ನಲ್ಲಿ ನೇಮಕ ಮಾಡಲಾಗಿದೆ. ಆಗ ಆಯುಕ್ತರಾಗಿದ್ದ ಅರುಣ್ ಗೋಯಲ್ ಅವರ ರಾಜೀನಾಮೆ ಹಾಗೂ ಅನೂಪ್ ಚಂದ್ರ ಪಾಂಡೆ ಅವರ ನಿವೃತ್ತಿಯಿಂದಾಗಿ ಈ ಸ್ಥಾನಗಳು ತೆರವಾಗಿದ್ದವು. ಜ್ಞಾನೇಶ ಕುಮಾರ್ ಅವರ ಅಧಿಕಾರಾವಧಿ 2029ರ ಜನವರಿ 26ರವರೆಗೆ ಇದೆ.

ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ ಭಾರತ ತಂಡ ಪ್ರಕಟ

ಬೆಂಗಳೂರು, ಜ.11– ತವರಿನಲ್ಲಿ ಇಂಗ್ಲೆಂಡ್ ವಿರುದ್ಧ ನಡೆಯುವ ಐದು ಪಂದ್ಯಗಳ ಟಿ20 ಸರಣಿಗೆ ಬಿಸಿಸಿಐ ಭಾರತ ತಂಡವನ್ನು ಪ್ರಕಟಿಸಿದೆ.

ವೇಗದ ಬೌಲರ್ ಮೊಹಮ್ಮದ್ ಶಮಿ 14 ತಿಂಗಳ ಬಳಿಕ ಟೀಮ್ ಇಂಡಿಯಾಗೆ ಮರಳಿದ್ದಾರೆ. ಅಜಿತ್ ಅಗರ್ಕರ್ ನೇತೃತ್ವದ ಐವರು ಸದಸ್ಯರ ಆಯ್ಕೆ ಸಮಿತಿ ಸೂರ್ಯಕುಮಾರ್ ಯಾದವ್‌ಗೆ ನಾಯಕ ಮತ್ತು ಆಲ್‌ರೌಂಡರ್ ಅಕ್ಷರ್ ಪಟೇಲ್‌ಗೆ ಉಪ ನಾಯಕನ ಜವಾಬ್ದಾರಿ ನೀಡಿದೆ. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಬ್ ಪಂತ್, ಇಶಾನ್ ಕಿಶನ್ ಮತ್ತು ಶಿವಂ ದುಬೆಗೆ ಕೊಕ್ ನೀಡಲಾಗಿದೆ. ರಿಷಬ್ ಪಂತ್ ಬದಲಿಗೆ ಧ್ರುವ್ ಜುರೆಲ್ ಅವರನ್ನು 2ನೇ ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬೌಲಿಂಗ್‌ನಲ್ಲಿ ಮಹ್ಮದ್ ಶಮಿಗೆ ಹರ್ಷಿತ್ ರಾಣಾ ಮತ್ತು ಅರ್ಷದೀಪ್ ಸಿಂಗ್ ಸಾಥ್ ನೀಡಲಿದ್ದಾರೆ. 2025ರ ಫೆಬ್ರವರಿಯಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಹಿನ್ನೆಲೆಯಲ್ಲಿ ಜಸ್ಪ್ರೀತ್ ಬುಮ್ರಾ ಟಿ20 ಸರಣಿಯಿಂದ ವಿಶ್ರಾಂತಿ ಪಡೆದಿದ್ದಾರೆ.

ಸರಣಿ ವೇಳಾಪಟ್ಟಿ

ಮೊದಲ ಟಿ20: ಜ.22, ಕೋಲ್ಕತ್ತಾ,
ಎರಡನೇ ಟಿ20: ಜ.25, ಚೆನ್ನೈ
ಮೂರನೇ ಟಿ20: ಜ.28, ರಾಜ್‌ಕೋಟ್
ನಾಲ್ಕನೇ ಟಿ20: ಜ.31, ಪುಣೆ
ಐದನೇ ಟಿ20: ಫೆ.2, ಮುಂಬೈ

ಟಿ20 ಸರಣಿಗೆ ಭಾರತ ತಂಡ

ಸೂರ್ಯಕುಮಾರ್ ಯಾದವ್ (ನಾಯಕ), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್ (ಉಪನಾಯಕ), ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ, ವರುಣ್ ಚಕ್ರವರ್ತಿ, ರವಿ ಬಿಷ್ಣೋಯ್, ವಾಷಿಂಗ್ಟನ್ ಸುಂದರ್, ಧ್ರುವ್ ಜುರೆಲ್ (ವಿಕೆಟ್ ಕೀಪರ್).

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್

ಸೆಮಿಫೈನಲ್‌ನಲ್ಲಿ ಸೋತ ಸಾತ್ವಿಕ್–ಚಿರಾಗ್ ಜೋಡಿ

ಕ್ವಾಲಾಲಂಪುರ: ಮಲೇಷ್ಯಾ ಓಪನ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರ ಸ್ಫೂರ್ತಿಯುತ ಓಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು. ಭಾರತದ ಈ ಜೋಡಿ ಶನಿವಾರ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಜೋಡಿಗೆ ನೇರ ಗೇಮ್‌ಗಳಿಂದ ಮಣಿಯಿತು.

ಕಿಮ್ ವಾನ್ ಹೊ–ಸಿಯೊ ಸಿಯುಂಗ್ ಜೇ ಜೋಡಿ ನಾಲ್ಕರ ಘಟ್ಟದ ಪಂದ್ಯದಲ್ಲಿ 21–10, 21–15 ರಿಂದ ಏಳನೇ ಶ್ರೇಯಾಂಕದ ಸಾತ್ವಿಕ್–ಚಿರಾಗ್ ಜೋಡಿಯನ್ನು ಮಣಿಸಿತು. 'ಅವರಿಬ್ಬರು ಅತ್ಯುತ್ತಮವಾಗಿ ಆಡಿದರು. ನಾವು ಆಟದ ಕಾರ್ಯತಂತ್ರವನ್ನು ಇನ್ನೂ ಉತ್ತಮವಾಗಿ ರೂಪಿಸಬೇಕಿತ್ತು. ನಾವು ಸ್ಥಿರವಾಗಿ ಆಡಲು ವಿಫಲರಾದೆವು' ಎಂದು 40 ನಿಮಿಷಗಳ ಪಂದ್ಯದ ನಂತರ ಸಾತ್ವಿಕ್ ಸುದ್ದಿಗಾರರಿಗೆ ತಿಳಿಸಿದರು.

ಏಷ್ಯನ್ ಗೇಮ್ಸ್ ಚಾಂಪಿಯನ್ನರಾದ ಭಾರತದ ಆಟಗಾರರು ಉತ್ತಮ ಆರಂಭ ಕಂಡುಕೊಳ್ಳಲು ಪರದಾಡಿದರು. ಒಂದು ಹಂತದಲ್ಲಿ 6–11ರಲ್ಲಿ ಹಿಂದೆಬಿದ್ದ ನಂತರ ಪುನರಾಗಮನ ಮಾಡುವುದು ಕಷ್ಟವಾಯಿತು. ಕಿಮ್–ಸಿಯೊ ಜೋಡಿ 19 ನಿಮಿಷಗಳಲ್ಲಿ ಮೊದಲ ಗೇಮ್ ತನ್ನದಾಗಿಸಿಕೊಂಡಿತು. ವಿರಾಮದ ನಂತರ ಸಾತ್ವಿಕ್–ಚಿರಾಗ್ ಜೋಡಿ ಒಂದಿಷ್ಟು ಲಯಕಂಡುಕೊಂಡಂತೆ ಕಾಣಿಸಿತು. ಒಂದು ಹಂತದಲ್ಲಿ 11–8ರಲ್ಲಿ ಮುನ್ನಡೆಯನ್ನೂ ಸಾಧಿಸಿತ್ತು. ಆದರೆ ಅದೇ ಬಿರುಸನ್ನು ಉಳಿಸಿಕೊಳ್ಳಲಾಗಲಿಲ್ಲ. ಕೊರಿಯಾದ ಆಟಗಾರರು ಸಕಾಲದಲ್ಲಿ ಚೇತರಿಸಿಕೊಡು ಗೇಮ್ ಹಾಗೂ ಪಂದ್ಯ ಗೆದ್ದುಕೊಂಡರು.

ಮಗುವಿನೊಂದಿಗೆ ನೇಣು ಹಾಕಿಕೊಂಡು ತಾಯಿ ಆತ್ಮಹತ್ಯೆ

ಕಿಕ್ಕೇರಿ, ಜ.11–ಕೌಟುಂಬಿಕ ಕಲಹದಿಂದ ತಾಯಿಯೊಬ್ಬಳು ತನ್ನ ಮಗುವಿನೊಂದಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಜಕ್ಕನಹಳ್ಳಿಯಲ್ಲಿ ಇಂದು ಸಂಜೆ ಸಂಭವಿಸಿದೆ.

ಗ್ರಾಮದ ನಿವಾಸಿ ಪುಟ್ಟಸ್ವಾಮಿ ಅವರ ಪತ್ನಿ ಶಿಲ್ಪಾ(30) ಎಂಬುವರೇ ತಮ್ಮ ಎರಡು ವರ್ಷದ ಮಗು ದೀಕ್ಷಿತಳೊಂದಿಗೆ ಆತ್ಮಹತ್ಯೆಗೆ ಶರಣಾಗಿದ್ದು, ಒಂದು ವರ್ಷದ ಮಗು ಅದೃಷ್ಟವಶಾತ್ ಪಾರಾಗಿದೆ.

ಶಿಲ್ಪಾ ಇಂದು ತನ್ನ ಪತಿ ಪುಟ್ಟಸ್ವಾಮಿ ಜಮೀನಿಗೆ ತೆರಳುತ್ತಿದ್ದಂತೆ ತನ್ನ ಒಂದು ಮತ್ತು ಎರಡು ವರ್ಷದ ಮಕ್ಕಳ ಕುತ್ತಿಗೆಗೆ ಹಗ್ಗದ ಒಂದು ತುದಿಯನ್ನು ಬಿಗಿದು ಮತ್ತೊಂದು ತುದಿಗೆ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಮುಂದಾದರು. ಈ ವೇಳೆ ಒಂದು ವರ್ಷದ ಮಗು ಹಗ್ಗದಿಂದ ಕಳಚಿ ಕೆಳಗೆ ಬಿದ್ದು ಸಾವಿನ ದವಡೆಯಿಂದ ಪಾರಾದರೆ, ತಾಯಿ ಶಿಲ್ಪಾ ಮತ್ತು ದೀಕ್ಷಿತ್ ನೇಣಿನ ಕುಣಿಕೆಯಲ್ಲಿ ಉಸಿರು ಚೆಲ್ಲಿದರು.

ಹಗ್ಗದಿಂದ ಬಿದ್ದ ಮಗುವಿನ ಚೀರಾಟ ಕೇಳಿ ಅಕ್ಕ-ಪಕ್ಕದವರು ಬಂದು ನೋಡಲಾಗಿ ತಾಯಿ ಮತ್ತು ಒಂದು ಮಗು ನೇಣಿನ ಕುಣಿಕೆಯಲ್ಲಿ ಸಾವನ್ನಪ್ಪಿದ್ದು, ಮತ್ತೊಂದು ಮಗು ಕೆಳಗೆ ಬಿದ್ದು ಅಳುತ್ತಿರುವುದು ಕಂಡುಬಂದಿದೆ. ಕಳೆದ ಕೆಲವು ದಿನಗಳಿಂದ ಗಂಡ–ಹೆಂಡತಿ ನಡುವೆ ಜಗಳವಾಗುತ್ತಿತ್ತು. ಈ ಸಂಬಂಧ ಊರಲ್ಲಿ ರಾಜಿ ಪಂಚಾಯ್ತಿ ಕೂಡ ನಡೆದು ದಂಪತಿ ಅನ್ಯೋನ್ಯವಾಗಿರುವಂತೆ ತಿಳಿ ಹೇಳಲಾಗಿತ್ತು. ಆದರೂ ದಂಪತಿಗಳ ಕಲಹ ಮುಂದುವರೆದಿತ್ತು. ಇದರಿಂದ ಮನನೊಂದ ಶಿಲ್ಪಾ ತನ್ನ ಮಗುವಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಕಿಕ್ಕೇರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೃತ ದೇಹ ಗಳನ್ನು ಕಿಕ್ಕೇರಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದೆ.

ಸಾರ್ವಜನಿಕ ಪ್ರಕಟಣೆ

ಅದಾಗಿ ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಅಂಚೆ, ಗೆಜ್ಜಗಳ್ಳಿ ಗ್ರಾಮದಲ್ಲಿ ವಾಸವಾಗಿರುವ ನಟರಾಜು.ಜಿ. ರವರ ಧರ್ಮಪತ್ನಿಯಾದ ಶ್ರೀಮತಿ ಸುಜಾತ ರವರ ಇರಾದೆಯ ಮೇರೆಗೆ ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಿಳಿಯಪಡಿಸುವುದೇನೆಂದರೆ, ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಡಬೂರು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಸುಬ್ಬಣ್ಣ ರವರ ಮಗನಾದ ಬಸವರಾಜುರವರು ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿದ್ದು, ಬಸವರಾಜು ಮತ್ತು ಇವರ ಕುಟುಂಬ ಸದಸ್ಯರಿಂದ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧವಾಗಿ ಯಾರಿಗಾದರೂ ಯಾವುದೇ ರೀತಿಯಾದ ಹಕ್ಕು, ಆಸಕ್ತಿ, ಸಾಮ್ಯ ಅಥವಾ ಕ್ಲೇಮನ್ನು ಹೊಂದಿದ್ದಲ್ಲಿ ಈ ಸಾರ್ವಜನಿಕ ತಿಳುವಳಿಕೆ ಪ್ರಕಟಣೆಯಾದ 07 ದಿನದೊಳಗಾಗಿ, ತಮ್ಮ ತಂಟೆ ತಕರಾರು ಮತ್ತು ಹಕ್ಕು ಬಾಧ್ಯತೆಯನ್ನು ಲಿಖಿತವಾಗಿ ಅಥವಾ ನಿಮ್ಮಲ್ಲಿರುವ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಯೊಡನೆ ಈ ಕೆಳಕಂಡ ವಕೀಲರಿಗೆ ನೀಡತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ ಹಾಗೂ ನಂತರ ಬರುವ ತಕರಾರಿಗೆ ಖರೀದಿದಾರರ ಹಕ್ಕಿಗೆ ಯಾವುದೇ ರೀತಿಯಿಂದಲೂ ಚ್ಯುತಿ ಉಂಟುಮಾಡುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಡಬೂರು ಗ್ರಾಮಕ್ಕೆ ಸೇರಿದ ಖುಷ್ಕಿ ಸರ್ವೆ ನಂಬರ್ 85/3ರ ಒಟ್ಟು ವಿಸ್ತೀರ್ಣ 1 ಎಕರೆ 31.08 ಗುಂಟೆ ಪೈಕಿ 0.02.08 ಗುಂಟೆ ಖರಾಬು ಕಳೆದು ಉಳಿಕೆ 1 ಎಕರೆ 29 ಗುಂಟೆ ಜಮೀನಿಗೆ ಚಕ್ಕುಬಂದಿ – ಪೂರ್ವಕ್ಕೆ: ಕೆಂಪಣ್ಣನ ಸೋಮಪ್ಪರವರ ಜಮೀನು ; ಪಶ್ಚಿಮಕ್ಕೆ: ಪ್ರಮೀಳ ರಾಜಶೇಖರರವರ ಸ್ವತ್ತು; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಲೇಟ್ ನಾಗಣ್ಣರವರ ಜಮೀನು. ಈ ಮೇಲ್ಕಂಡ ಷೆಡ್ಯೂಲ್ ಸ್ವತ್ತು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

Sd/- B.S. CHANDRASHEKARA,
B.A.L., LL.B., P.G.D.H.R.M.
Advocate, #101 & 112, Sri Sangameshwara Complex, Gurur Main Road, Basaveshwara Layout, Gurur Post, Mysuru - 570 008
Date: 11-01-2025

ರಿಟರ್ನಿಂಗ್ ಆಫೀಸರ್, ಪಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,

ಶ್ರೀರಂಗಪಟ್ಟಣ ತಾಲ್ಲೂಕು, ರವರ ಕಾರ್ಯಾಲಯ

ಪತ್ರಿಕಾ ಪ್ರಕಟಣೆ

ಪಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಶ್ರೀರಂಗಪಟ್ಟಣ ತಾಲ್ಲೂಕು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು, ದಿನಾಂಕ: 25–01–2025ರಂದು ಶನಿವಾರ ಬೆಳಿಗ್ಗೆ 09–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ "ಸಂಘದ ಕಛೇರಿ ಆವರಣ" ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ.

ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು, ದಿನಾಂಕ 12–01–2025 ರಿಂದ 17–01–2025 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 02–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು, ದಿನಾಂಕ 18–01–2025ರಂದು ಬೆಳಿಗ್ಗೆ 11–30 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರನ್ನು/ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ವಸೀಂ ಪಾಷ)
ರಿಟರ್ನಿಂಗ್ ಅಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು

ಕರ್ನಾಟಕ ಸರ್ಕಾರ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ

ನ್ಯೂ ಸಯ್ಯಾಜಿ ರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು–570001
ದೂ.ಸಂ.: 0821–2443701, 0821–2442205 ಫ್ಯಾ.ಸಂ.: 0821–2443701
E-mail ID:gamcmysore@gmail.com
ಸಂಖ್ಯೆ: ಸಆಆ/22/ಸರಬ/2024–25 ದಿನಾಂಕ: 09.01.2024

ದರಪಟ್ಟಿ ಅಹ್ವಾನ ಪ್ರಕಟಣೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು ಇಲ್ಲಿಗೆ ಅವಶ್ಯವಿರುವ Aadhar Enabled Biometric Attendance ಯಂತ್ರಗಳನ್ನು ಸರಬರಾಜು ಮಾಡಿ ಅಳವಡಿಸಲು ದರಪಟ್ಟಿಯನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ದಿನಾಂಕ: 16.01.2025ರ ಅಪರಾಹ್ನ 5.00 ಗಂಟೆಯೊಳಗಾಗಿ ದರಪಟ್ಟಿಯನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಪ್ರಾಚಾರ್ಯರು
DIPR/DDMYS/1092/KSMCA/735/2024-25